ವೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 11 ಸೋಮವಾರ 2025

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 116 | ಪುಟಗಳು: 10
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಪ್ರಧಾನಿ ಮೋದಿಯಿಂದ ನಮ್ಮ ಮೆಟ್ರೋ ಹಳದಿ ಮಾರ್ಗಕ್ಕೆ ಚಾಲನೆ

● ಬೆಳಗಾವಿ–ಬೆಂಗಳೂರು, ಜಮ್ಮು ಕಾಶ್ಮೀರದ ಕಟ್ರಾ ಮತ್ತು ಮಹಾರಾಷ್ಟ್ರದ ಪುಣೆ–ಅಜ್ನಿ (ನಾಗ್ಪುರ) ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳಿಗೆ ಚಾಲನೆ ● ನಮ್ಮ ಮೆಟ್ರೋ ಕಿತ್ತಳೆ ಮಾರ್ಗಕ್ಕೂ ಶಂಕುಸ್ಥಾಪನೆ

ಬೆಂಗಳೂರು, ಆ.10– 'ನಮ್ಮ ಮೆಟ್ರೋ' ಹಳದಿ ಮಾರ್ಗಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಚಾಲನೆ ನೀಡಿದ್ದಾರೆ. ಮಾಹಿತಿ ತಂತ್ರ ಜ್ಞಾನದ ಹಬ್ ಎಲೆಕ್ಟ್ರಾನಿಕ್ ಸಿಟಿ ಸಂಪರ್ಕಿಸುವ ಈ ಮಾರ್ಗವು ಬೊಮ್ಮಸಂದ್ರದಿಂದ ಆರ್.ವಿ. ರಸ್ತೆಗೆ ಸಂಪರ್ಕ ಕಲ್ಪಿಸಲಿದೆ.

ರಾಗಿಗುಡ್ಡ ನಿಲ್ದಾಣದಲ್ಲಿ ಈ ಮಾರ್ಗಕ್ಕೆ ಹಸಿರು ನಿಶಾನೆ ತೋರಿದ ಮೋದಿಯವರು ಎಲೆಕ್ಟ್ರಾನಿಕ್ ಸಿಟಿವರೆಗೆ ಪ್ರಯಾಣ ನಡೆಸಿದರು. ಅವರೊಂದಿಗೆ, ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಮುಖ್ಯ ಮಂತ್ರಿ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸಚಿವರೂ ಇದ್ದರು.

ಹಳದಿ ಮಾರ್ಗವು ಒಟ್ಟು 19.15 ಕಿ.ಮೀ. ಉದ್ದವಿದೆ. ಇದರೊಂದಿಗೆ, ನಗರದಲ್ಲಿ 76.95 ಕಿ.ಮೀ. ಇದ್ದ 'ನಮ್ಮ ಮೆಟ್ರೊ' ಜಾಲ 96 ಕಿ.ಮೀ.ಗೆ ವಿಸ್ತರಣೆ ಗೊಂಡಂತಾಗಿದೆ. ಈ ಮಾರ್ಗದಲ್ಲಿ ಒಟ್ಟು 16 ನಿಲ್ದಾಣ ಗಳಿದ್ದು, ಮೂರು ರೈಲುಗಳು ನಿತ್ಯ ಸಂಚರಿಸಲಿವೆ.

ಅದಕ್ಕೂ ಮುನ್ನ ಬೆಂಗಳೂರಿಗೆ ಬಂದ ಪ್ರಧಾನಿ, ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ ಬೆಳಗಾವಿ–ಬೆಂಗಳೂರು ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲಿಗೆ ಚಾಲನೆ ನೀಡಿದರು. ಬಳಿಕ, ಪಂಜಾಬಿನ ಅಮೃತಸರದಿಂದ ಜಮ್ಮು ಕಾಶ್ಮೀರದ ಕಟ್ರಾ ಮತ್ತು ಮಹಾರಾಷ್ಟ್ರದ ಪುಣೆ–ಅಜ್ನಿ (ನಾಗ್ಪುರ) ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳ ಸಂಚಾರವನ್ನೂ ವರ್ಚ್ಯುವಲ್ ಆಗಿ ಉದ್ಘಾಟಿಸಿದರು.



ಬೆಂಗಳೂರಿನ ರಾಗಿಗುಡ್ಡ ಮೆಟ್ರೋ ನಿಲ್ದಾಣದಲ್ಲಿ ಪ್ರಧಾನಿ ಮೋದಿ ಅವರು ನಮ್ಮ ಮೆಟ್ರೋ ಹಳದಿ ಮಾರ್ಗಕ್ಕೆ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು.

ಈ ವೇಳೆ ಎಲ್ಲರಿಗೂ ನಮಸ್ಕಾರ, ನಾಡಪ್ರಭು ಕೆಂಪೇಗೌಡ, ಅಣ್ಣಮ್ಮದೇವಿಗೆ ನನ್ನ ಭಕ್ತಿಪೂರ್ವಕ ನಮನಗಳು ಎಂದು ಕನ್ನಡದಲ್ಲೇ ಭಾಷಣ ಆರಂಭಿಸಿದ ಮೋದಿಯವರು, ಕೇಂದ್ರ ಸರ್ಕಾರದ ಸಾಧನೆಗಳು ಮತ್ತು ಮೇಕ್ ಇನ್ ಇಂಡಿಯಾದ ಪ್ರಾಮುಖ್ಯತೆಯನ್ನು ಒತ್ತಿ ಹೇಳಿದರು. ಆಪರೇಷನ್ ಸಿಂಧೂರ ಯಶಸ್ವಿಯಾದ ನಂತರ ಮೊದಲ ಬಾರಿಗೆ ಬೆಂಗಳೂರಿಗೆ ಬಂದಿದ್ದೇನೆ. ಕೆಲವೇ ಗಂಟೆಗಳಲ್ಲಿ ಪಾಕಿಸ್ತಾನದ ಮೇಲೆ ದಾಳಿ ನಡೆಸುವ ಮೂಲಕ ವಿಶ್ವಕ್ಕೆ ಭಾರತದ ವಿಶ್ವರೂಪ ತೋರಿಸಿದ್ದೇವೆ. ಆಪರೇಷನ್ ಸಿಂಧೂರದ ಸಫಲತೆ ಹಿಂದೆ ಮೇಕ್ ಇನ್ ಇಂಡಿಯಾದ ಶಕ್ತಿ ಇದೆ. ಇದರಲ್ಲಿ ಬೆಂಗಳೂರು ಹಾಗೂ ಇಲ್ಲಿನ ಯುವ ತಂತ್ರಜ್ಞರ ಯೋಗದಾನವೂ ಇದೆ. ಆಪರೇಷನ್ ಸಿಂಧೂರ ಯಶಸ್ಸಿಗೆ ಕಾರಣವಾದ ಬೆಂಗಳೂರು ನವಯುವಕರಿಗೆ ನಾನು ಅಭಿನಂದನೆ ತಿಳಿಸುತ್ತೇನೆ ಎಂದು ಹೇಳಿದರು. ಹಳದಿ ಹಾಗೂ ಕಿತ್ತಳೆ ಮೆಟ್ರೊ ಮಾರ್ಗಗಳು ಬೆಂಗಳೂರು ಸಂಚಾರಕ್ಕೆ ದೊಡ್ಡ ಬಲ. ಎರಡೂ ಮಾರ್ಗಗಳಿಂದ ■6ನೇ ಪುಟಕ್ಕೆ

ನಮ್ಮ ಮೆಟ್ರೋಗೆ ರಾಜ್ಯದ ಪಾಲೇ ಹೆಚ್ಚು

ಪ್ರಧಾನಿ ಮೋದಿ ಎದುರೇ ಸಿಎಂ ಸಿದ್ದರಾಮಯ್ಯ ಕ್ರೆಡಿಟ್ ಕ್ಲೈಮ್

ಬೆಂಗಳೂರು, ಆ.10– ಮೆಟ್ರೋ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಯೋಜನೆ. ಕೇಂದ್ರ ಶೇ.50, ರಾಜ್ಯ ಶೇ.50ರಷ್ಟು ಖರ್ಚು ಮಾಡುವ ಒಪ್ಪಂದ ಆಗಿದೆ. ಆದರೆ ರಾಜ್ಯ ಸರ್ಕಾರವೇ ಹೆಚ್ಚು ಖರ್ಚು ಮಾಡುತ್ತಿದೆ ಎಂದು ಮುಖ್ಯ ಮಂತ್ರಿ ಸಿದ್ದರಾಮಯ್ಯ ಪ್ರಧಾನಿ ಮೋದಿ ಎದುರೇ ಕ್ರೆಡಿಟ್ ಕ್ಲೈಮ್ ಮಾಡಿಕೊಂಡರು.


ಐಐಐಟಿಯಲ್ಲಿ ನಮ್ಮ ಮೆಟ್ರೋದ ಕಿತ್ತಳೆ ಮಾರ್ಗಕ್ಕೆ ಪ್ರಧಾನಿ ಮೋದಿ ಶಂಕುಸ್ಥಾಪನೆ ನೆರವೇರಿಸಿದರು. ಬಳಿಕ ನಡೆದ ವೇದಿಕೆ ಕಾರ್ಯ ಕ್ರಮದಲ್ಲಿ ಮಾತನಾಡಿದ ಸಿಎಂ ಮೋದಿ ಎದುರೇ ಕ್ರೆಡಿಟ್ ತೆಗೆದುಕೊಂಡರು.

ಪ್ರಧಾನಿ ಮೋದಿಯವರು ಮೂರು ಕಾರ್ಯ ಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಮೆಟ್ರೋ ಕೇಂದ್ರ ರಾಜ್ಯಗಳ ಸಹಯೋಗದೊಂದಿಗೆ ನಡೆಯುವ ಯೋಜನೆ. ಈ ಯೋಜನೆಗೆ ಕೇಂದ್ರ ಶೇ.50, ರಾಜ್ಯ ಶೇ.50ರಷ್ಟು ಖರ್ಚು ಮಾಡುವ ಒಪ್ಪಂದ ಆಗಿದೆ. ಆದರೆ, ರಾಜ್ಯ ■6ನೇ ಪುಟಕ್ಕೆ

ಆಪರೇಷನ್ ಸಿಂಧೂರ ಯಶಸ್ಸಿನ ಹಿಂದೆ ಬೆಂಗಳೂರಿನ ತಂತ್ರಜ್ಞಾನ: ಮೋದಿ ಅಭಿನಂದನೆ

ಬೆಂಗಳೂರು, ಆ.10– ಆಪರೇಷನ್ ಸಿಂಧೂರಕ್ಕೆ ಬೆಂಗಳೂರಿನ ನವ ಯುವಕರ ಕೊಡುಗೆಯಿದೆ. ಬೆಂಗಳೂರಿನ ತಂತ್ರ ಜ್ಞಾನದಿಂದ ಯಶಸ್ವಿಯಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಐಐಐಟಿಯಲ್ಲಿ ನಮ್ಮ ಮೆಟ್ರೋದ ಕಿತ್ತಳೆ ಮಾರ್ಗಕ್ಕೆ ಶಂಕುಸ್ಥಾಪನೆ ನೆರ ವೇರಿಸಿ ಮಾತನಾಡಿದ ಅವರು, ಆಪರೇಷನ್ ಸಿಂಧೂರ ಯಶಸ್ವಿಯಾದ ನಂತರ ಮೊದಲ ಬಾರಿಗೆ ಬೆಂಗಳೂರಿಗೆ ಬಂದಿ ದ್ದೇನೆ. ಕೆಲವೇ ಗಂಟೆಗಳಲ್ಲಿ ಪಾಕಿಸ್ತಾನದ ಮೇಲೆ ದಾಳಿ ನಡೆಸುವ ಮೂಲಕ ವಿಶ್ವಕ್ಕೆ ಭಾರತದ ವಿಶ್ವರೂಪ ತೋರಿಸಿದ್ದೇವೆ.



ಆಪರೇಷನ್ ಸಿಂಧೂರದ ಸಫಲತೆ ಹಿಂದೆ ಮೇಕ್ ಇನ್ ಇಂಡಿಯಾದ ಶಕ್ತಿ ಇದೆ. ಇದರಲ್ಲಿ ಬೆಂಗಳೂರು ■6ನೇ ಪುಟಕ್ಕೆ

ಮೋದಿ ಅಕ್ಕಪಕ್ಕ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಮೆಟ್ರೋ ಪಯಣ ಉದ್ದಕ್ಕೂ ನಗು... ಮಾತುಕತೆ



ಬೆಂಗಳೂರು, ಆ.10– ಬೆಂಗಳೂರಿನಲ್ಲಿ ಇಂದು ಮಳೆಯ ಅರ್ಭಟದ ನಡುವೆ ಮೆಟ್ರೊ ರೈಲು ಉದ್ಘಾಟನೆಗೆ ಪ್ರಧಾನಿ ನರೇಂದ್ರ ಮೋದಿ ಬಂದಿದ್ದು, ಹಲವು ವಿಶೇಷತೆಗಳಿಗೆ ಸಾಕ್ಷಿಯಾಯಿತು. ಪ್ರಧಾನಿ ನರೇಂದ್ರ ಮೋದಿ ಬೆಂಗಳೂರಿನ ಬಹು ನಿರೀಕ್ಷಿತ ನಮ್ಮ ಮೆಟ್ರೋ ಹಳದಿ ಮಾರ್ಗಕ್ಕೆ ಚಾಲನೆ ನೀಡಿದ್ದಾರೆ. ■6ನೇ ಪುಟಕ್ಕೆ

ಶಕ್ತಿ ಯೋಜನೆ ಉಲ್ಲೇಖಿಸಿ ಹಾಸ್ಯ ಚಟಾಕಿ ಹಾರಿಸಿದ ಪ್ರಧಾನಿ ಮೋದಿ

ಬೆಂಗಳೂರು, ಆ.10– ಮಹಿಳೆ ಯರಿಗೆ ನೀಡಿದ ಉಚಿತ ಪ್ರಯಾಣ ವನ್ನು ಉಲ್ಲೇಖಿಸಿ ಪ್ರಧಾನಿ ನರೇಂದ್ರ ಮೋದಿ ಸಿಡಿಸಿದ ಹಾಸ್ಯ ಚಟಾಕಿಗೆ ಸಿಎಂ ಸಿದ್ದ ರಾಮಯ್ಯ ಮತ್ತು ಡಿಸಿಎಂ ಡಿ.ಕೆ. ಶಿವಕುಮಾರ್ ನಕ್ಕಿದ್ದಾರೆ.

ಪ್ರಧಾನಿ ಮೋದಿ ಅವರು ಅಲ್ಲಿದ್ದ ಮಹಿಳೆಯರಿಗೆ 'ನೀವು ಮೆಟ್ರೋ ದಲ್ಲಿ ಹೋಗಲು ಇಷ್ಟ ಪಡುತ್ತೀರೋ? ಬಸ್ಸಿನಲ್ಲಿ ಹೋಗಲು ಇಷ್ಟ ಪಡುತ್ತೀರೋ?' ■6ನೇ ಪುಟಕ್ಕೆ

ಆರ್‌ಸಿಬಿ, ಕೆಎಸ್‌ಸಿಎಗೆ ಮತ್ತೊಂದು ಶಾಕ್

ಹೈಕೋರ್ಟ್ ಮೆಟ್ಟಿಲೇರಿದ ಕಬ್ಬನ್ ಪಾರ್ಕ್ ಅಸೋಸಿಯೇಷನ್

ಬೆಂಗಳೂರು, ಆ. 10– ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಐಪಿಎಲ್ ಟ್ರೋಫಿ ಗೆದ್ದ ಸಂಭ್ರಮಾ ಚರಣೆ ವಿಧಾನಸೌಧದ ಗ್ರ್ಯಾಂಡ್ ಸ್ಟೆಪ್ಸ್ ಮೇಲೆ ನೆರವೇರಿತ್ತು. ಆರ್‌ಸಿಬಿ ಆಟಗಾರರನ್ನು ವಿಧಾನಸೌಧದ ಗ್ರ್ಯಾಂಡ್ ಸ್ಟೆಪ್ಸ್‌ನಲ್ಲಿ ಸರ್ಕಾರ ಸನ್ಮಾನಿಸಿತ್ತು. ಆರ್‌ಸಿಬಿ ಆಟಗಾರರನ್ನು ನೋಡಲು ಅಪಾರ ಸಂಖ್ಯೆಯಲ್ಲಿ ಅಭಿಮಾನಿಗಳು ಕಿಕ್ಕಿರಿದು ಸೇರಿದ್ದರು. ಅಭಿಮಾನಿಗಳು ವಿಧಾನಸೌಧದ ಪಕ್ಕದಲ್ಲಿ ಇದ್ದ ಕಬ್ಬನ್ ಪಾರ್ಕ್‌ನಲ್ಲಿನ ಮರಗಳ ಮೇಲೆ ಹತ್ತಿ ಆಟ ಗಾರರನ್ನು ನೋಡಲು ಮುಂದಾದರು. ಈ ವೇಳೆ ಅಭಿಮಾನಿ ಗಳ ಕಾಲ್ತುಳಿತದಿಂದ ಸಾಕಷ್ಟು ಸಸಿಗಳು ಹಾಳಾಗಿವೆ.

ಇದರಿಂದ ಕೋಟ್ಯಾಂತರ ರೂಪಾಯಿ ನಷ್ಟವಾಗಿದೆ ಎಂದು ಕಬ್ಬನ್ ಪಾರ್ಕ್ ಅಸೋಸಿಯೇಷನ್ ಕೋರ್ಟ್ ಮೆಟ್ಟಿಲು ಏರಿದೆ.

ಕಬ್ಬನ್ ಪಾರ್ಕ್‌ನಲ್ಲಿದ್ದ ಸಸಿಗಳು, ಮರಗಳಿಗೆ ಮತ್ತು ಉದ್ಯಾನವನಕ್ಕೆ ಹಾನಿಯಾಗಿದೆ. ಹಾಗೇ ವಿಧಾನಸೌಧದ ಮುಂಭಾಗದ ಗಾರ್ಡನ್‌ನಲ್ಲೂ ಹಾನಿಯಾಗಿದೆ. ತೋಟ ಗಾರಿಕೆ ಇಲಾಖೆ ಕಬ್ಬನ್ ಪಾರ್ಕ್‌ನಲ್ಲಿ ಕೋಟ್ಯಾಂತರ ರೂಪಾಯಿ ವೆಚ್ಚದಲ್ಲಿ ಲಾನ್ ಅಳವಡಿಸಿತ್ತು. ಈ ಲಾನ್‌ಗು ಕೂಡ ಕಾಲ್ತುಳಿತದಲ್ಲಿ ಹಾನಿಯಾಗಿದೆ. ಕಬ್ಬನ್ ಪಾರ್ಕ್‌ಗೆ ಹಾನಿಯಾದರೆ ನೀವೇ ಹೊಣೆಗಾರರು ಅಂತ ಆರ್‌ಸಿಬಿ ಮತ್ತು ಕೆಎಸ್‌ಸಿಎಗೆ ಮೊದಲೇ ಷರತ್ತು ಹಾಕಲಾಗಿತ್ತು.

ಇದೀಗ ಕಾಲ್ತುಳಿತದಲ್ಲಿ ಪಾರ್ಕ್‌ಗೆ ಹಾನಿಯಾಗಿದ್ದು, ಈ ನಷ್ಟವನ್ನು ಆರ್‌ಸಿಬಿ ಹಾಗೂ ಕೆಎಸ್‌ಸಿಎ ಭರಿಸಿಕೊಡ ಬೇಕು ಅಂತ ಕಬ್ಬನ್ ಪಾರ್ಕ್ ಅಸೋಸಿಯೇಷನ್ ಹೈಕೋರ್ಟ್‌ನಲ್ಲಿ ಪಿಐಎಲ್ ಸಲ್ಲಿಸಿದೆ. ■6ನೇ ಪುಟಕ್ಕೆ

2014ರ ನಂತರ ಕರ್ನಾಟಕದ ರೈಲ್ವೆ ಬಜೆಟ್ 9 ಪಟ್ಟು ಏರಿಕೆ

ಬೆಂಗಳೂರು, ಆ.10– 2014ರಲ್ಲಿ ಪ್ರಧಾನಿ ನರೇಂದ್ರ ಮೋದಿಯವರು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ನಂತರ



ಕರ್ನಾಟಕದ ರೈಲ್ವೆ ಬಜೆಟ್ 9 ಪಟ್ಟು ಏರಿಕೆಯಾಗಿದೆ ಎಂದು ಕೇಂದ್ರ ರೈಲ್ವೆ ಖಾತೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ಬೆಂಗಳೂರಿನಲ್ಲಿ ಪ್ರಧಾನಿ ಮೋದಿ ಅವರು ನಮ್ಮ ಮೆಟ್ರೊ ಹಳದಿ ಮಾರ್ಗಕ್ಕೆ ಚಾಲನೆ ನೀಡಿದರು. ಅದರ ನಂತರ ಅಶ್ವಿನಿ ವೈಷ್ಣವ್ ಅವರು ಕಾರ್ಯಕ್ರಮದಲ್ಲಿ ಮಾತನಾಡಿದ್ದಾರೆ. 2014ರಲ್ಲಿ ಕರ್ನಾಟಕದ ರೈಲ್ವೆ ಬಜೆಟ್ 835 ಕೋಟಿ ಯಾಗಿತ್ತು. ಇದೀಗ 7,500 ಕೋಟಿ ■6ನೇ ಪುಟಕ್ಕೆ

ಇಂದಿನಿಂದ ವಿಧಾನಮಂಡಲ ಅಧಿವೇಶನ

ಬೆಂಗಳೂರು, ಆ.10– ವಿಧಾನ ಮಂಡಲ ಉಭಯ ಸದನಗಳ ಮುಂಗಾರು ಅಧಿವೇಶನ ನಾಳೆ (ಆ.11)ಯಿಂದ ಆರಂಭವಾಗಲಿದೆ. ಆಡಳಿತ ಹಾಗೂ ಪ್ರತಿಪಕ್ಷ ಸದಸ್ಯರುಗಳ ನಡುವೆ ವಾಗ್ಯುದ್ಧಕ್ಕೆ ವೇದಿಕೆ ಸಜ್ಜುಗೊಂಡಿದೆ.



ಆಡಳಿತ ವೈಫಲ್ಯಗಳನ್ನು ಮುಂದಿಟ್ಟು ಕೊಂಡು ರಾಜ್ಯ ಕಾಂಗ್ರೆಸ್ ಸರ್ಕಾರವನ್ನು ತರಾಟೆಗೆ ತೆಗೆದು ಕೊಳ್ಳಲು ಪ್ರತಿಪಕ್ಷ ಬಿಜೆಪಿ–ಜೆಡಿಎಸ್ ಸನ್ನದ್ಧಗೊಂಡಿದ್ದರೆ, ವಿಪಕ್ಷಗಳಿಗೆ ತಕ್ಕ ಉತ್ತರ ನೀಡಲು ಆಡಳಿತಾರೂಢ ಕಾಂಗ್ರೆಸ್ ಸಕಲ ಸಿದ್ಧತೆ ಮಾಡಿಕೊಂಡಿದೆ. ಹೀಗಾಗಿ ಸದನ ಕಲಾಪವು ಕಾವೇರುವುದು ನಿಶ್ಚಿತವಾಗಿದೆ.

ನಾಳೆ ಬೆಳಗ್ಗೆ 11 ಗಂಟೆಯ ಸುಮಾರಿಗೆ ಕಲಾಪ ಆರಂಭಗೊಳ್ಳಲಿದ್ದು, ನಾಳೆಯಿಂದ ಆ.22ರವರೆಗೆ ರಜಾ ದಿನಗಳನ್ನು ಹೊರತುಪಡಿಸಿದರೆ ಒಟ್ಟು 9 ದಿನಗಳ ಕಾಲ ಅಧಿ ವೇಶನ ಕಲಾಪ ನಡೆಯಲಿದೆ. ಮೊದಲ ದಿನ ಇತ್ತೀಚೆಗೆ ಅಗಲಿದ ಗಣ್ಯರಿಗೆ ಸಂತಾಪ ಸೂಚನೆ ಮಂಡಿಸಲಾಗುವುದು. ಆ ಬಳಿಕ ಪ್ರಶ್ನೋತ್ತರ, ಗಮನ ಸೆಳೆಯುವ ಸೂಚನೆ ಸೇರಿದಂತೆ ಇನ್ನಿತರ ವಿಚಾರಗಳು ಚರ್ಚೆಗೆ ಬರುವ ಸಾಧ್ಯತೆಗಳಿವೆ.

ಬಜೆಟ್ ಅಧಿವೇಶನದ ವೇಳೆ ಬಿಜೆಪಿಯ 18 ಮಂದಿ ಶಾಸಕರನ್ನು 6 ತಿಂಗಳ ಕಾಲ ಸದನಕ್ಕೆ ಬಾರದಂತೆ ತಡೆ ಹಿಡಿದು ಅಮಾನತು ಮಾಡಲಾಗಿತ್ತು. ಈ ನಿರ್ಣಯವನ್ನು ಮೇ 25ರಿಂದ ಜಾರಿಗೆ ಬರುವಂತೆ ■6ನೇ ಪುಟಕ್ಕೆ

ಜಾನಪದ ಕಲಾ ಮೆರುಗಿನ ಜೊತೆಗೆ ಗಜಪಡೆಗೆ ಅದ್ದೂರಿ ಸ್ವಾಗತ

ಅರಮನೆ ಅಂಗಳದಲ್ಲಿ ಬೀಡು ಬಿಟ್ಟ ಅಭಿಮನ್ಯು ಪಡೆ

● ಶುಭ ಮಕರ ಗೋಧೂಳಿ ಲಗ್ನದಲ್ಲಿ ಅರಮನೆ ತಲುಪಿದ 9 ಆನೆಗಳು
● ಮಳೆ ಸಿಂಚನದೊಂದಿಗೆ ಗತ್ತು ಗಾಂಭೀರ್ಯದ ಹೆಜ್ಜೆ ಹಾಕಿದ ಗಜಪಡೆ

ಮೈಸೂರು, ಆ.10(ಪಿಎಂ)– ಶೃಂಗಾರ ಗೊಂಡು ಮೈಸೂರು ನಗರದ ರಸ್ತೆಗಳಲ್ಲಿ ಗತ್ತು ಗಾಂಭೀರ್ಯದಿಂದ ಹೆಜ್ಜೆ ಹಾಕುತ್ತಾ ದಸರಾ ಗಜಪಡೆ ಭಾನುವಾರ ಸಂಜೆ ಅರಮನೆಗೆ ಆಗಮಿಸಿದವು. ಮಳೆಯ ಸಿಂಚನದೊಂದಿಗೆ ಬಂದ ಗಜಪಡೆಗೆ ವಿವಿಧ ಕಲಾತಂಡಗಳ ಕಲಾತ್ಮಕ ಮೆರುಗಿ ನೊಂದಿಗೆ ಸ್ವಾಗತ ಕೋರಲಾಯಿತು.

ದಸರಾ ಮಹೋತ್ಸವದಲ್ಲಿ ಪಾಲ್ಗೊ ಳ್ಳಲು ಮೊದಲ ತಂಡದಲ್ಲಿ ಆಗಮಿಸಿದ ಅಂಬಾರಿ ಆನೆ ಅಭಿಮನ್ಯು ನೇತೃತ್ವದ 9 ಆನೆಗಳನ್ನು ಅರಮನೆಯ ಜಯ ಮಾರ್ತಾಂಡ ದ್ವಾರದಲ್ಲಿ ಸಂಜೆ 6.45 ರಿಂದ 7.20ರ ಶುಭ ಮಕರ ಗೋಧೂಳಿ ಲಗ್ನದಲ್ಲಿ ಪೂಜಾ ವಿಧಿವಿಧಾನ ನೆರವೇರಿಸಿ ಸ್ವಾಗತಿಸಲಾಯಿತು.

ಈ ಬಾರಿಯ ದಸರಾ ಮಹೋತ್ಸದಲ್ಲಿ ಒಟ್ಟು 14 ಆನೆಗಳು ಪಾಲ್ಗೊಳ್ಳುತ್ತಿದ್ದು, ಈ ಪೈಕಿ ಮೊದಲ ತಂಡದಲ್ಲಿ ಅಭಿಮನ್ಯು ನೇತೃತ್ವದ 9 ಆನೆಗಳನ್ನು ಆ.4ರಂದು ಗಜಪಯಣದ ಮೂಲಕ ಮೈಸೂರಿಗೆ ಕರೆತರಲಾಗಿತ್ತು. ಬಳಿಕ ಅಶೋಕಪುರಂನ ಅರಣ್ಯ ಭವನದ ಆವರಣದಲ್ಲಿ ಈ ಗಜಪಡೆ ವಾಸ್ತವ್ಯಕ್ಕೆ ವ್ಯವಸ್ಥೆಗೊಳಿಸಲಾಗಿತ್ತು. ಇಂದು ಮಧ್ಯಾಹ್ನ 3.30ರ ಸುಮಾರಿಗೆ ಅರಣ್ಯ ಭವನದಲ್ಲಿ ಎಲ್ಲಾ ಆನೆಗಳಿಗೂ ವಿಶೇಷ ಪೂಜೆ ಸಲ್ಲಿಸಿ ಬೀಳ್ಕೊಡಲಾಯಿತು.

ಬಳಿಕ ರಸ್ತೆಬದಿಗಳಲ್ಲಿ ಆನೆಗಳನ್ನು ನೋಡಲು ನೆರೆದಿದ್ದ ಭಾರೀ ಜನಸ್ತೋಮಕ್ಕೆ ದರ್ಶನ ಕರುಣಿಸಿದ ಗಜಪಡೆ ಆಗಾಗ್ಗೆ ಸುರಿಯುತ್ತಿದ್ದ ಧಾರಾಕಾರ ಮಳೆ ನಡುವೆಯೂ ಅಂಜದೆ ಅಳುಕದೇ ದೃಢ ಹೆಜ್ಜೆಗಳನ್ನು ಹಾಕುತ್ತಾ ಅರಮನೆ ಬಳಿಗೆ ಆಗಮಿಸಿದವು. ಅರಮನೆ ಜಯಮಾರ್ತಾಂಡ ದ್ವಾರದಲ್ಲಿ 9 ಆನೆಗಳಿಗೂ ಚಾಮುಂಡಿಬೆಟ್ಟದ ಚಾಮುಂಡೇಶ್ವರಿ ದೇವಾಲಯದ ಪ್ರಧಾನ ಆಗಮಿಕ ಡಾ.ಎನ್.ಶಶಿಶೇಖರ್ ದೀಕ್ಷಿತ್ ಹಾಗೂ ಅರ್ಚಕ ಎಸ್.ವಿ.ಪ್ರಹ್ಲಾದ್‌ರಾವ್ ಸೇರಿದಂತೆ ಇನ್ನಿತರ ಅರ್ಚಕರು ಸಂಪ್ರ ದಾಯದಂತೆ ಪೂಜಾ ವಿಧಿವಿಧಾನ ನೆರ ವೇರಿಸಿದರು. ಅರಮನೆ ಮಂಡಳಿ ವತಿಯಿಂದ ಆಯೋಜಿಸಿದ್ದ ಗಜಪಡೆ ಸ್ವಾಗತ ಸಮಾರಂಭದಲ್ಲಿ ಅದ್ದೂರಿಯಾಗಿ ಆನೆ ಗಳನ್ನು ಬರಮಾಡಿಕೊಳ್ಳಲಾಯಿತು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಸೇರಿದಂತೆ ಇನ್ನಿತರ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಗಜಪಡೆಗೆ ಪೂಜೆ ಸಲ್ಲಿಸಿ ಪುಷ್ಪಾರ್ಚನೆ ನೆರವೇರಿಸಿ ಅರಮನೆ ಆವರಣಕ್ಕೆ ಬರಮಾಡಿ ಕೊಂಡರು. ಇದಕ್ಕೂ ಮುನ್ನ ಪೂಜಾ ವಿಧಿವಿಧಾನದಲ್ಲಿ ಮೊದಲಿಗೆ ದ್ವಾರಪಾಲಕ ಪೂಜೆ ನೆರವೇರಿಸಿ, ನಂತರ ಆನೆಗಳನ್ನು ಅರಮನೆಗೆ ಎದುರಾಗಿ ■6ನೇ ಪುಟಕ್ಕೆ



ಭಾನುವಾರ ಸಂಜೆ ವಿದ್ಯುತ್ ದೀಪಾಲಂಕಾರದೊಂದಿಗೆ ಕಂಗೊಳಿಸುತ್ತಿರುವ ಮೈಸೂರು ಅರಮನೆ ಎದುರು ದಸರಾ ಗಜಪಡೆ ಆನೆಗಳು ಸಾಲಾಗಿ ನಿಂತಿರುವುದನ್ನು ಕಾಣಬಹುದು.

ಇಂದು ಗಜಪಡೆಗೆ ತೂಕ ಪರೀಕ್ಷೆ

ಮೊದಲ ತಂಡದ ಗಂಡಾನೆಗಳಾದ ಅಭಿಮನ್ಯು, ಧನಂಜಯ, ಭೀಮ, ಕಂಜನ್, ಏಕಲವ್ಯ, ಪ್ರಶಾಂತ, ಮಹೇಂದ್ರ, ಹೆಣ್ಣಾನೆಗಳಾದ ಕಾವೇರಿ, ಬಳ್ಳೆ ಲಕ್ಷ್ಮಿಯನ್ನು ಸುರಕ್ಷಿತ ಹಾಗೂ ಸುಸೂತ್ರವಾಗಿ ಇಂದು ಅರಮನೆಗೆ ಕರೆತರಲಾಯಿತು. ನಾಳೆ (ಆ.11ರ ಸೋಮವಾರ) ಬೆಳಗ್ಗೆ 8 ಗಂಟೆಗೆ ಈ ಎಲ್ಲಾ ಆನೆಗಳ ತೂಕ ಪರೀಕ್ಷೆ ನಡೆಸಲಾಗುತ್ತಿದೆ.

ಮುಹೂರ್ತಕ್ಕೂ ಮುನ್ನವೇ ಅರಮನೆ ಪ್ರವೇಶಿಸಿದ ಗಜಪಡೆ!

ಮೈಸೂರು, ಆ.10(ಪಿಎಂ)– ನಿಗದಿ ಗೊಳಿಸಿದ್ದ ಮುಹೂರ್ತಕ್ಕೂ ಮುನ್ನವೇ ಗಜಪಡೆ ಭಾನುವಾರ ಅರಮನೆಗೆ ಪ್ರವೇಶ ಪಡೆದವು! ಅರಣ್ಯ ಭವನ ದಿಂದ ಇಂದು ಮಧ್ಯಾಹ್ನ 3.30ರ ಸುಮಾರಿಗೆ ಹೊರಟ ಗಜಪಡೆ, ಸಂಜೆ 5.30ರ ವೇಳೆಗೆ ಅರಮನೆ ಬಳಿಗೆ ಆಗಮಿಸಿದವು. ಬಳಿಕ ಆನೆಗಳನ್ನು ಜಯಮಾರ್ತಾಂಡ ದ್ವಾರದ ಪಕ್ಕದಲ್ಲಿ ರುವ ದ್ವಾರದ ಮೂಲಕ ಅರಮನೆ ಆವರಣಕ್ಕೆ ಕರೆದೊಯ್ಯಲಾಯಿತು. ಆ ಮೂಲಕ ಒಂದು ರೀತಿಯಲ್ಲಿ ಮುಹೂರ್ತಕ್ಕೂ ಮುನ್ನವೇ ಗಜ ಪಡೆಯು ಅರಮನೆಗೆ ಪ್ರವೇಶ ಪಡೆ ದಂತಾಯಿತು. ನಂತರ ಮುಹೂರ್ತದ ಸಮಯಕ್ಕೆ ಜಯಮಾರ್ತಾಂಡ ದ್ವಾರಕ್ಕೆ ಗಜಪಡೆ ಕರೆತಂದು ಪೂಜಾ ವಿಧಿವಿಧಾನ ಸೇರಿದಂತೆ ಸ್ವಾಗತ ಕಾರ್ಯಕ್ರಮ ನರವೇರಿಸಲಾಯಿತು.

ಅಲ್ಲದೆ, ಅರಮನೆ ಆವರಣದಲ್ಲಿ ಭಾರೀ ಪೊಲೀಸ್ ಬಿಗಿ ಭದ್ರತೆ ಮಾಡಲಾಗಿತ್ತು. ಬ್ಯಾರಿಕೇಡ್‌ಗಳನ್ನು ಹಾಕಿ ಮಾಧ್ಯಮದವರು ಹಾಗೂ ಸಾರ್ವಜನಿಕರನ್ನು ನಿಯಂತ್ರಿಸಲಾಯಿತು.

ರಾಜ್ಯ ಶಿಕ್ಷಣ ನೀತಿಯಲ್ಲಿ ಕನ್ನಡ ಕಡ್ಡಾಯ ಆಗದಿರುವುದು ಖಂಡನೀಯ



ಸ.ರ.ಸುದರ್ಶನ

ಮೈಸೂರು, ಆ. 10–ರಾಜ್ಯ ಶಿಕ್ಷಣ ನೀತಿ ಆಯೋಗವು ಐದನೇ ತರಗತಿ ವರೆಗೆ ಕನ್ನಡ ಅಥವಾ ಮಾತೃಭಾಷೆ ಶಿಕ್ಷಣ ಮಾಧ್ಯಮವನ್ನು ಶಿಫಾರಸು ಮಾಡಿರುವುದು ಸ್ವಾಗತಾರ್ಹವಾದರೂ ಈ ನೀತಿಯಲ್ಲಿ ಗೋಕಾಕ್ ಚಳುವಳಿಯಿಂದಾಗಿ ರಾಜ್ಯ ಶಿಕ್ಷಣ ನೀತಿಯಲ್ಲಿ ಕಡ್ಡಾಯವಾಗಿದ್ದ ಕನ್ನಡ ಕಲಿಕೆ ಇಲ್ಲದಿರುವುದು ಖಂಡನೀಯ ಎಂದು ಕನ್ನಡ ಕ್ರಿಯಾ ಸಮಿತಿ ಪ್ರಧಾನ ಕಾರ್ಯದರ್ಶಿ ಸ.ರ.ಸುದರ್ಶನ ಹೇಳಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ರಾಜ್ಯದಲ್ಲಿ ಕಲಿಯುವ ಅನ್ಯಭಾಷಿಕರು, ಅದರಲ್ಲೂ ಭಾಷಾ ಅಲ್ಪಸಂಖ್ಯಾತರು ಕನ್ನಡ ಕಲಿಯದೆ ಹೋದರೆ ಅವರು ಮುಖ್ಯ ವಾಹಿನಿಯಿಂದ ದೂರ ಉಳಿಯುತ್ತಾರೆ. ಪ್ರಜಾಪ್ರಭುತ್ವದಲ್ಲಿ ಬಹುಜನರ ಭಾಷೆ ಆಡಳಿತ ಭಾಷೆಯಾಗಬೇಕಾದ ಅನಿವಾರ್ಯ ಸಂದರ್ಭದಲ್ಲಿ ಅದು ತೊಡಕಾಗುತ್ತದೆ.

ಕಡ್ಡಾಯ ಕನ್ನಡ ಕಲಿಕೆಯನ್ನು ಕೈಬಿಟ್ಟರೆ ಅದು ಗೋಕಾಕ್ ಚಳುವಳಿಯನ್ನು ಮರೆತಂತೆ ಆಗುತ್ತದೆ. ಆದ್ದರಿಂದ ಸರ್ಕಾರ ಈ ಲೋಪವನ್ನು ಸರಿಪಡಿಸಿ ಭಾಷಾ ನೀತಿಯನ್ನು ಜಾರಿಗೆ ತರಬೇಕು ಎಂದು ಕನ್ನಡ ಕ್ರಿಯಾ ಸಮಿತಿ ಒತ್ತಾಯಿಸುತ್ತದೆ. ಈ ದಿಸೆಯಲ್ಲಿ ಮತ್ತೆ ಎಲ್ಲಾ ಸಾಹಿತಿಗಳು, ಕನ್ನಡ ಹೋರಾಟಗಾರರು, ಅಭಿಮಾನಿಗಳು ಒಂದೆಡೆ ಸೇರಿ ಕ್ರಮ ಕೈಗೊಳ್ಳಲು ಮುಂದಾಗಬೇಕಾದ ಅನಿವಾರ್ಯತೆ ಇದೆ ಎಂದು ಸ.ರ.ಸುದರ್ಶನ ಹೇಳಿದ್ದಾರೆ.

ಯೋಗಾನರಸಿಂಹಸ್ವಾಮಿ ದೇವಸ್ಥಾನದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ



ಮೈಸೂರಿನ ಶ್ರೀ ಯೋಗಾನರಸಿಂಹಸ್ವಾಮಿ ದೇವಾಲಯದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಸಲಾಯಿತು.

ಮೈಸೂರು,ಆ.10–ಮೈಸೂರಿನ ವಿಜಯನಗರದ ಶ್ರೀ ಯೋಗಾನರಸಿಂಹಸ್ವಾಮಿ ದೇವಾಲಯದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿತ್ತು. ಅನ್ನಪೂರ್ಣ ಕಣ್ಣಿನ ಆಸ್ಪತ್ರೆ, ಸಮೃದ್ಧಿ ಟ್ರಸ್ಟ್ ಮತ್ತು ವೈಟ್ ಸ್ವಾನ್ ಅಸೆಥೆಟಿಕ್ಸ್ ಸಂಸ್ಥೆಗಳ ಸಹಯೋಗದಲ್ಲಿ ನಡೆದ ಈ ಶಿಬಿರದಲ್ಲಿ ಕಣ್ಣು ಹಾಗೂ ದಂತ ತಪಾಸಣೆಯನ್ನು ಉಚಿತವಾಗಿ ಮಾಡಿ, ಸಾರ್ವಜನಿಕರಲ್ಲಿ ಆರೋಗ್ಯ ಜಾಗೃತಿ ಮೂಡಿಸಲಾಯಿತು.

ದೇವಾಲಯದ ಆಡಳಿತಾಧಿಕಾರಿ ಎನ್.ಶ್ರೀನಿವಾಸನ್ ಶಿಬಿರವನ್ನು ಉದ್ಘಾಟಿಸಿ ಮಾತನಾಡಿ, ಆರೋಗ್ಯವೇ ಮಹಾ ಸಂಪತ್ತು. ಆರೋಗ್ಯವನ್ನು ಕಾಪಾಡಿಕೊಳ್ಳುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ. ಇಂದಿನ ವೈದ್ಯರು ದೇವರ ರೂಪದಲ್ಲಿ ಜನರ ಸೇವೆ ಮಾಡುತ್ತಿದ್ದಾರೆ. ಈ ಶಿಬಿರವು ಸಾರ್ವಜನಿಕರಲ್ಲಿ ಆರೋಗ್ಯದ ಮಹತ್ವವನ್ನು ಮನವರಿಕೆ ಮಾಡಿಕೊಡುತ್ತದೆ ಎಂದರು. ಶಿಬಿರದಲ್ಲಿ 300ಕ್ಕೂ ಹೆಚ್ಚು ಮಂದಿ ತಪಾಸಣೆಗೊಳಗಾದರು. ಅನ್ನಪೂರ್ಣ ಕಣ್ಣಿನ ಆಸ್ಪತ್ರೆ ವೈದ್ಯರ ತಂಡ, ಸಮೃದ್ಧಿ ಟ್ರಸ್ಟ್ ಅಧ್ಯಕ್ಷೆ ಸಹನಾ, ವೈಟ್ ಸ್ವಾನ್ ಅಸೆಥೆಟಿಕ್ಸ್‌ನ ದಂತ ವೈದ್ಯೆ ಡಾ.ನಿಷಿಕಗೌಡ, ಸಿಬ್ಬಂದಿ ಉಪಸ್ಥಿತರಿದ್ದರು.

ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದಲ್ಲಿ ಉಪಾಕರ್ಮ



ಮೈಸೂರಿನ ಕಾಳಿದಾಸ ರಸ್ತೆಯಲ್ಲಿರುವ ಯದುಗಿರಿ ಯತಿರಾಜ ಮಠ, ಶಾಖಾ ಮಠ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದಲ್ಲಿ ಯಜುರ್ ಉಪಾಕರ್ಮ ಹಾಗೂ ಋಗ್ ಉಪಾಕರ್ಮವನ್ನು ಸಾಮೂಹಿಕವಾಗಿ ದೇವಸ್ಥಾನದ ಆಡಳಿತಾಧಿಕಾರಿ ಕೆ.ಆರ್.ಯೋಗಾನರಸಿಂಹನ್ (ಮುರುಳಿ) ನೇತೃತ್ವದಲ್ಲಿ ನೆರವೇರಿಸಲಾಯಿತು. ವಾದ್ಯಾರ್ ಅನಂತು, ಬಾಲಾಜಿ, ರವಿ, ಮುನ್ನೂರ್, ರವಿ ಮತ್ತಿತರರು ಉಪಸ್ಥಿತರಿದ್ದರು.

ಜೆಎಸ್‌ಎಸ್ ಸಂಗೀತ ಸಭಾದಿಂದ ಆ.14ರಂದು ಯುವ ಸಂಗೀತೋತ್ಸವ

ಮೈಸೂರು,ಆ.10–ಜೆಎಸ್‌ಎಸ್ ಸಂಗೀತ ಸಭಾ ಟ್ರಸ್ಟ್‌ನಿಂದ ಆ.14ರಂದು ಗುರುವಾರ ಯುವ ಸಂಗೀತೋತ್ಸವ ಕಾರ್ಯಕ್ರಮವನ್ನು ಸರಸ್ವತಿಪುರಂ ಜೆಎಸ್‌ಎಸ್ ಪ್ರೌಢಶಾಲಾ ಆವರಣದಲ್ಲಿರುವ ಮಂತ್ರಮಹರ್ಷಿ ಸಭಾಭವನದಲ್ಲಿ ಏರ್ಪಡಿಸಲಾಗಿದೆ.

ಮೊದಲನೇ ಕಾರ್ಯಕ್ರಮವನ್ನು ಸುತ್ತೂರು ಶ್ರೀ ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಸಾನ್ನಿಧ್ಯದಲ್ಲಿ ಸಂಜೆ 5.30 ಗಂಟೆಗೆ ವಿದ್ವಾನ್ ರಕ್ಷಿತ್ ಪ್ರಸಾದ್ ಅವರಿಂದ ಮ್ಯಾಂಡೊಲಿನ್ ವಾದನ ಮತ್ತು ಯುವಸಂಗೀತೋತ್ಸವ, ಎರಡನೇ ಕಾರ್ಯಕ್ರಮ ಸಂಜೆ 7 ಗಂಟೆಗೆ ವಿದ್ವಾನ್ ಸಿ.ಎಸ್.ಕೇಶವ ಚಂದ್ರರವರಿಂದ ಕೊಳಲು ವಾದನ ಏರ್ಪಡಿಸಲಾಗಿದೆ. ವಯೋಲಿನ್ ಸಹಕಾರ ನೀಡಲಿರುವ ವಿದ್ವಾನ್ ರೂಪನಗುಡಿ ರತ್ನ ತೇಜ, ವಿದ್ವಾನ್ ಸುನಾದ ಕೃಷ್ಣ ಅಮ್ಮಾಯಿ –ಮೃದಂಗ, ವಿದ್ವಾನ್ ಟಿ.ಎಸ್.ಅಜಯ್–ಘಟಂನಲ್ಲಿ ಸಹಕಾರ ನೀಡಲಿದ್ದಾರೆ.

ಶ್ವಾನ, ಪಕ್ಷಿ ಸೇರಿದಂತೆ ಸಾಕು ಪ್ರಾಣಿಗಳ ಸಖ್ಯದಿಂದ ಮಾನಸಿಕ ಆರೋಗ್ಯ ಸುಧಾರಣೆ

ಇಂಡಿಯಾ ಬೈಬಲ್ ಲಿಟರೇಚರ್ ಅಪೋಸ್ಟೋಲೇಟ್ ಸಂಸ್ಥಾಪಕ ನಿರ್ದೇಶಕ ರೆ.ಫಾ.ಬೆಂಜಮಿನ್ ವಾಸ್ ಅಭಿಮತ

ಮೈಸೂರು, ಆ.10(ಎಂಟಿವೈ)– ಶ್ವಾನ, ಪಕ್ಷಿ ಸೇರಿದಂತೆ ಸಾಕು ಪ್ರಾಣಿಗಳೊಂದಿಗೆ ಪ್ರತಿದಿನ ಕೆಲ ಸಮಯ ಬೆರೆತರೆ ಮಾನಸಿಕ ಆರೋಗ್ಯ ಕಾಪಾಡಿಕೊಳ್ಳುವುದರೊಂದಿಗೆ ಖಿನ್ನತೆ, ವೇದನೆ, ಜಿಗುಪ್ಸೆ ಸಮಸ್ಯೆಯಿಂದ ದೂರ ಉಳಿಯಬಹುದು ಎಂದು ಇಂಡಿಯಾ ಬೈಬಲ್ ಲಿಟರೇಚರ್ ಅಪೋಸ್ಟೋಲೇಟ್ ಸಂಸ್ಥಾಪಕ ನಿರ್ದೇಶಕ ರೆ.ಫಾ. ಬೆಂಜಮಿನ್ ವಾಸ್ ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 26 ವರ್ಷದಿಂದ ನಾನು ವಿವಿಧ ತಳಿಯ ಶ್ವಾನ ಹಾಗೂ ಕೆಲ ಪಕ್ಷಿಗಳನ್ನು ಸಾಕಿ ಅವುಗಳೊಂದಿಗೆ ಜೀವನ ನಡೆಸುತ್ತಿದ್ದೇನೆ. ಸಾಕು ಪ್ರಾಣಿಗಳೊಂದಿಗೆ ಸಮಯ ಕಳೆಯುವುದು ಚಿಕಿತ್ಸಾ ಪದ್ಧತಿಯಂತೆ ಕೆಲಸ ಮಾಡುತ್ತದೆ. ಈ ಹಿನ್ನೆಲೆಯಲ್ಲಿ ಮಾನಸಿಕ ಆರೋಗ್ಯ, ಖಿನ್ನತೆ ದೂರ ಮಾಡಲು ಸಾಕುಪ್ರಾಣಿಗಳ ಸಖ್ಯ ಪ್ರಮುಖ ಪಾತ್ರವಹಿಸುತ್ತದೆ. ಮನುಷ್ಯರೊಂದಿಗೆ ಸೌಮ್ಯವಾಗಿ ವರ್ತಿಸುವಂತೆ ನಮ್ಮಲ್ಲಿರುವ ಶ್ವಾನ ಹಾಗೂ ಪಕ್ಷಿಗಳಿಗೆ ತರಬೇತಿ ನೀಡಲಾಗಿದೆ. ಕೆಲವರು ತಮ್ಮ ಬಳಿಯಿರುವ ಶ್ವಾನ ಮತ್ತು ಪಕ್ಷಿಗಳನ್ನು ಮನೆಗೆ ಕರೆದೊಯ್ದು ಅವುಗಳೊಂದಿಗೆ ಸಮಯ ಕಳೆದು ಆರೋಗ್ಯ ಕಾಪಾಡಿಕೊಳ್ಳುತ್ತಿದ್ದಾರೆ ಎಂದರು.

ಆ.15ರಿಂದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ

ಮೈಸೂರು: ಕೃಷಿಕ್ ಸರ್ವೋದಯ ಫೌಂಡೇಷನ್‌ನಿಂದ ಕೇಂದ್ರ ಲೋಕಸೇವಾ ಆಯೋಗ, ಕರ್ನಾಟಕ ಲೋಕಸೇವಾ ಆಯೋಗವು ನಡೆಸುವ ಐಎಎಸ್, ಐಪಿಎಸ್, ಕೆಎಎಸ್ ಪ್ರಿಲಿಮ್ಸ್ ಮತ್ತು ಮೇನ್ಸ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಆ.15ರಿಂದ ಬೆಳಗ್ಗೆ 10ರಿಂದ ಸಂಜೆ 5ರವರೆಗೆ ತರಬೇತಿ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ಮೊ. 8296031570.

ಶೋಷಿತರು, ಅಸಹಾಯಕತೆಗೆ ಒಳಗಾದವರು ಸಂವಿಧಾನದ ಅವಕಾಶ ಬಳಸಿಕೊಂಡು ಸಮ ಸಮಾಜದತ್ತ ಸಾಗಬೇಕು

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸಲಹೆ



ಮೈಸೂರಿನ ಕಲಾಮಂದಿರದಲ್ಲಿ ಭಾನುವಾರ ಆಯೋಜಿಸಿದ್ದ 'ರಾಜ್ಯ ಮಟ್ಟದ ಸಮಾವೇಶ ಮತ್ತು ಒಕ್ಕೂಟದ ಚುನಾವಣೆ ಕಾರ್ಯಕ್ರಮ'ವನ್ನು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ನಗಾರಿ ಬಾರಿಸುವ ಮೂಲಕ ಉದ್ಘಾಟಿಸಿದರು.

ಮೈಸೂರು,ಆ.10(ಎಂಟಿವೈ)–ಶೋಷಣೆ, ಅಸಹಾಯಕತೆಗೆ ಒಳಗಾದವರು ಹಾಗೂ ಎರಡನೇ ದರ್ಜೆಯ ಪ್ರಜೆಗಳಂತೆ ಬದುಕುತ್ತಿರುವವರು ಸಂವಿಧಾನದ ಅವಕಾಶಗಳನ್ನು ಬಳಸಿಕೊಂಡು ಸಮ ಸಮಾಜದತ್ತ ಸಾಗಲು ಪ್ರಯತ್ನ ಮಾಡಬೇಕು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಸಲಹೆ ನೀಡಿದ್ದಾರೆ.

ಜೀವಿಕ–ಜೀತ ಮುಕ್ತಿ ಕರ್ನಾಟಕ ಹಾಗೂ ಕರ್ನಾಟಕ ಜೀತದಾಳು ಮತ್ತು ಕೃಷಿ ಕಾರ್ಮಿಕರ ಒಕ್ಕೂಟವು ಮೈಸೂರಿನ ಕಲಾಮಂದಿರದಲ್ಲಿ ಭಾನುವಾರ ಆಯೋಜಿಸಿದ್ದ 'ರಾಜ್ಯ ಮಟ್ಟದ ಸಮಾವೇಶ ಮತ್ತು ಒಕ್ಕೂಟದ ಚುನಾವಣೆ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರಕಾರ ಜೀತ ಪದ್ಧತಿ ಎನ್ನುವುದು ಅಸ್ಪೃಶ್ಯತೆ ಮತ್ತು ಜಾತೀಯತೆಯ ಆಚರಣೆಯ ಒಂದು ಭಾಗ. ಇದು ಮಾನವ ಹಕ್ಕುಗಳ ಸ್ಪಷ್ಟ ಉಲ್ಲಂಘನೆ. ಹಿಂದೆ ಭಾರತದಲ್ಲಿ ಜೀತ ಪದ್ಧತಿ ವ್ಯವಸ್ಥೆ ಇರಲಿಲ್ಲ. ಚೀನಾ, ರಷ್ಯಾ ಸೇರಿದಂತೆ ಯೂರೋಪ್ ರಾಷ್ಟ್ರಗಳಲ್ಲಿ ಈ ಅನಿಷ್ಟ ಪದ್ಧತಿ ಕಂಡು ಬರುತ್ತಿತ್ತು. ಪಡೆದ ಸಾಲ ತೀರಿಸದೆ ಇದ್ದಾಗ ಜೀವನ ಪರ್ಯಾಂತ ದುಡಿಯಬೇಕಾದ ಪದ್ಧತಿ ಭಾರತದಲ್ಲಿತ್ತು. ಈ ಪದ್ಧತಿ ತಲೆ ತಲೆ ಮಾರಿಗೂ ಮುಂದುವರೆಯುತ್ತಾ ಬಂದು ಶೋಷಣೆ ಮಾಡಲಾಗುತ್ತಿತ್ತು ಎಂದು ವಿಷಾದಿಸಿದರು.

ದೇಶದಲ್ಲಿ ಜೀತ ಪದ್ಧತಿ ನಿರ್ಮೂಲನೆ ಮಾಡಲು 1976ರಲ್ಲಿ ಇಂದಿರಾಗಾಂಧಿ ಅವರು ಪ್ರಧಾನಿಯಾಗಿದ್ದ ವೇಳೆ ಉಳುವವನೆ ಭೂಮಿಯ ಒಡೆಯ ಹಾಗೂ ಸಾಲ ನಿರ್ಮೂಲನೆ ಸೇರಿದಂತೆ ಇನ್ನಿತರ ಐತಿಹಾಸಿಕ ತೀರ್ಮಾನ ತೆಗೆದುಕೊಂಡು ಜಾತಿ, ಹಣ, ತೋಳ್ಬಲ ಬಲ ಇರುವವರ ಕಪಿಮುಷ್ಟಿಯಲ್ಲಿ ಸಿಲುಕಿ, ಜೀವನವನ್ನು ಗುಲಾಮಗಿರಿಗೆ ಸಿಲುಕಿಸಿಕೊಂಡು ಜೀವನ ನಡೆಸುತ್ತಿರುವ ದುರ್ಬಲ ವರ್ಗದವರನ್ನು ವಿಮೋಚನೆಗೊಳಿಸಿದರು. ಇಂದಿರಾ ಗಾಂಧಿ ಅವರು ಜಾರಿಗೆ ತಂದ ಕಾನೂನುಗಳನ್ನು ಕರ್ನಾಟದಲ್ಲಿ ಮುಖ್ಯ ಮಂತ್ರಿಯಾಗಿದ್ದ ದೇವರಾಜ ಅರಸು ಅವರು ಯಶಸ್ವಿಯಾಗಿ ಜಾರಿಗೆ ತಂದರು ಎಂದರು.

ರಾಜ್ಯದಲ್ಲಿ 20 ಸಾವಿರ ಜನ ಜೀತ ಪದ್ಧತಿಯಿಂದ ಮುಕ್ತರಾಗಿದ್ದಾರೆ. ದೇವದಾಸಿ ಪದ್ಧತಿಯಲ್ಲಿ 40ರಿಂದ 50 ಸಾವಿರ ಜನ, ಸಫಾಯಿ ಕರ್ಮಚಾರಿಗಳು 30 ಸಾವಿರ ಹಾಗೂ ಮ್ಯಾನುವಲ್ ಸ್ಕಾವೆಂಜರ್ಸ್ 7000 ಜನ ಇದ್ದಾರೆ. ಇವರಿಗೆ ಶಾಶ್ವತವಾದ ಪರಿಹಾರವನ್ನು ಹಾಗೂ ಪುನರ್ವಸತಿಯನ್ನು ಕಲ್ಪಿಸಿಕೊಡುವ ನಿಟ್ಟಿನಲ್ಲಿ ಸಮಾಜ ಕಲ್ಯಾಣ ಇಲಾಖೆಯಲ್ಲಿ ಸಭೆ ನಡೆಸಿ ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗಿದೆ. ಇಂತಹ ಆದ್ಯತಾ ವಲಯಗಳನ್ನು ಗುರುತಿಸಿ ಪರಿಹಾರ ಕೊಡಬೇಕು. ಇವರಿಗೆ ಪುನರ್ವಸತಿ ಕಲ್ಪಿಸಬೇಕು. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಪಂಚ ಗ್ಯಾರಂಟಿ ಯೋಜನೆ ಜಾರಿಗೆ ತಂದ ಮೇಲೆ ಯಾರೂ ನಮಗೆ ಆದಾಯ ಇಲ್ಲ ಎಂದು ಹೇಳುತ್ತಿಲ್ಲ. ರಾಜ್ಯ ಸರ್ಕಾರದಿಂದ ಸಿಗುತ್ತಿರುವ ಸಹಾಯದಿಂದ ಗೌರವಯುತವಾಗಿ ಹಾಗೂ ಸ್ವಾಭಿಮಾನದಿಂದ ಜನ ಬದುಕುತ್ತಿದ್ದಾರೆ ಎಂದರು.

ಶಿಕ್ಷಣ ಎಂಬುದು ಹುಲಿಯ ಹಾಲಿನಂತೆ ಅದನ್ನು ಕುಡಿದವನು ಘರ್ಜಿಸಲೇಬೇಕು ಎಂದು ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಹೇಳಿದ್ದಾರೆ. ಹೀಗಾಗಿ ನಮ್ಮ ಮಕ್ಕಳನ್ನು ಶಿಕ್ಷಣದ ದಿಕ್ಕಿಗೆ ಸಾಗಿಸಬೇಕು. ವರ್ಣಾಶ್ರಮ ನೀತಿಯಲ್ಲಿ ಬರುವ ಬ್ರಾಹ್ಮಣರು, ಕ್ಷತ್ರಿಯರು ಹಾಗೂ ವೈಶ್ಯರಲ್ಲಿ ಜೀತ ಮಾಡುವವರು ಸಿಗುವುದಿಲ್ಲ. ಹೀಗಾಗಿ ಜಾತಿ ವ್ಯವಸ್ಥೆ, ಅಸ್ಪೃಶ್ಯತೆ ಜೀತಪದ್ಧತಿಯ ಒಂದು ಮುಖದ ಪ್ರದರ್ಶನ. ಇದನ್ನು ಉಗ್ರವಾಗಿ ಖಂಡನೆ ಮಾಡಬೇಕು ಎಂದು ಹೇಳಿದರು.

ಉರಿಲಿಂಗಿ ಪೆದ್ದಿಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದ ಕಾರ್ಯಕ್ರಮದಲ್ಲಿ ಶಾಸಕರಾದ ಅನಿಲ್ ಚಿಕ್ಕಮಾದು, ದರ್ಶನ್ ಧ್ರುವನಾರಾಯಣ, ಜೀವಿಕ ಸಂಸ್ಥಾಪಕರಾದ ಡಾ.ಕಿರಣ್ ಕಮಲ್ ಪ್ರಸಾದ್, ನ್ಯಾಷನಲ್ ಲಾ ಕಾಲೇಜಿನ ಪ್ರಾಧ್ಯಾಪಕ ಪ್ರೊ.ಬಾಬು ಮ್ಯಾಥ್ಯೂ, ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ದಸಂಸ ಸಂಚಾಲಕ ಗುರುಪ್ರಸಾದ್ ಕೆರಗೋಡು, ದಸಂಸ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್, ಜಿಲ್ಲಾ ಸಂಚಾಲಕ ಬೆಟ್ಟಯ್ಯ ಕೋಟೆ, ಮಾಜಿ ಮೇಯರ್ ಪುರುಷೋತ್ತಮ್, ತುಂಬಲಾ ರಾಮಣ್ಣ, ಶಿವರಾಜು, ರಾಮಸ್ವಾಮಿ, ಗೋವಿಂದರಾಜು, ಒಕ್ಕೂಟದ ಅಧ್ಯಕ್ಷ ಮಹದೇವು, ಮಲ್ಲಿಗಮ್ಮ, ಜಿಲ್ಲಾ ಸಂಚಾಲಕ ಬಸವರಾಜು, ತಾಲೂಕು ಅಧ್ಯಕ್ಷ ಗಣೇಶ್ ಕೆ.ಎಡತೊರೆ, ಕಾರ್ಯದರ್ಶಿ ಮಂಜು ಕೊತ್ತೇಗಾಲ, ಜಿ.ಟಿ. ಸಂಜೀವಮೂರ್ತಿ, ಶೀಡ್ಲಗಟ್ಟ ಶ್ರೀನಿವಾಸ್, ಶಿಡ್ಲಗಟ್ಟ ಸರಸಿಂಹಪ್ಪ ಹಾಗೂ ಜೀವಿಕ ಸಂಘಟನೆ ಪದಾಧಿಕಾರಿಗಳು ಇದ್ದರು.

ಜೀತ ವಿಮುಕ್ತರಿಗೆ ವಿವಿಧ ಸೌಲಭ್ಯಗಳಿಗೆ ಮನವಿ

ಮೈಸೂರು,ಆ.10(ಎಂಟಿವೈ)– ಜೀತ ಪದ್ಧತಿಯಿಂದ ಮುಕ್ತರಾದವರಿಗೆ ವಿವಿಧ ಸೌಲಭ್ಯ ಕಲ್ಪಿಸುವಂತೆ ಆಗ್ರಹಿಸಿ ಕರ್ನಾಟಕ ಜೀತದಾಳು ಮತ್ತು ಕಾರ್ಮಿಕರ ಒಕ್ಕೂಟದ ಪದಾಧಿಕಾರಿಗಳು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅವರಿಗೆ ಬೇಡಿಕೆಗಳುಳ್ಳ ಮನವಿ ಸಲ್ಲಿಸಿದರು.

1976ರ ಜೀತ ಕಾನೂನು ವಿರೋಧಿಯಾದ ಹಾಗೂ 2017ರ ಕೇಂದ್ರ ಸರ್ಕಾರ ಮತ್ತು 2022ರ ಕರ್ನಾಟಕ ರಾಜ್ಯದ ಎಸ್‌ಒಪಿಗಳನ್ನು ತಕ್ಷಣವೇ ರದ್ದು ಮಾಡಬೇಕು. ಜೀತ ವಿಮುಕ್ತರಿಗೆ ಸಂಪೂರ್ಣ ಪುನರ್ವಸತಿ ಸೌಲಭ್ಯ ಒದಗಿಸಬೇಕು. ಎಸ್‌ಸಿ, ಎಸ್‌ಟಿಗಳಿಗೆ ಅನ್ವಯವಾಗುವ ಎಸ್‌ಸಿಪಿ ಕಾನೂನಿನಡಿ ಜೀವಿತದಿಂದ ಬಿಡುಗಡೆಗೊಂಡ 7000 ಮಂದಿ ಜೀತವಿಮುಕ್ತರಿಗೆ 500 ಕೋಟಿ ರೂ.ಗಳ ವಿಶೇಷ ಪುನರ್ವಸತಿ ಪ್ಯಾಕೇಜ್ ಅನ್ನು ಮಂಜೂರು ಮಾಡಬೇಕು. ಜೀವವಿಮುಕ್ತರಿಗೆ ಕಡ್ಡಾಯವಾಗಿ 5 ಎಕರೆ ಜಮೀನು ಮತ್ತು ನಿವೇಶನ, ಮನೆಗಳು ಮಂಜೂರು ಮಾಡಬೇಕು. ಜೀತ ಮುಕ್ತ ಮಹಿಳೆಯರ ಸ್ವ–ಸಹಾಯಕ ಸಂಘಗಳಿಗೆ ಮಹಿಳೆಯರಿಗೆ ನೇರವಾಗಿ ಸಾಲ ಸೌಲಭ್ಯ ಕೊಡಬೇಕು. ಜೀತಮುಕ್ತರು ಮತ್ತು ಕೃಷಿ ಕಾರ್ಮಿಕರು, ಅವರ ಕುಟುಂಬದವರ ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಬೆಳವಣಿಗೆಯ ಅಭಿವೃದ್ಧಿಗಾಗಿ ತರಬೇತಿಗಳು, ಜೀವನಾಧಾರಿತ ಕೌಶಲಗಳು ಮತ್ತು ಸ್ವಾವಲಂಬನೆ ಬದುಕಿಗಾಗಿ ಬೇಕಾಗಿರುವ ವಿವಿಧ ರೀತಿಯ ಚಟುವಟಿಕೆಗಳನ್ನು ನಡೆಸಲು ಹೆಚ್.ಡಿ.ಕೋಟೆ ಹ್ಯಾಂಡ್‌ಪೋಸ್ಟ್‌ನಲ್ಲಿರುವ ಕಟ್ಟಡ ಮತ್ತು ಕಾಂಪೌಂಡ್ ಮತ್ತು ಇತರ ಕಾಮಕಾರಿಗಳಿಗೆ 2 ಕೋಟಿ ಅನುದಾನವನ್ನು ಮಂಜೂರು ಮಾಡಿಸಬೇಕು ಎಂದು ಒತ್ತಾಯಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

11.08.2025 ಸೋಮವಾರ, ಮಳೆ ನಕ್ಷತ್ರ: ಆಶ್ಲೇಷ 03.08.2025ರಿಂದ 16.08.2025 ವಿಶ್ವವಸು ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಕೃಷ್ಣ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಶತಭಿಷ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಶ್ರೀ ರಾಘವೇಂದ್ರ ಧಾಮ :** ಶ್ರೀ ರಾಘವೇಂದ್ರ ತೀರ್ಥ ಗುರು ಸಾರ್ವಭೌಮರ 354ನೇ ಆರಾಧನಾ ಮಹೋತ್ಸವ, ಮಧ್ಯಾರಾಧನೆ. ಮುಂಜಾನೆ 5 ಗಂಟೆಗೆ ನಿರ್ಮಾಲ್ಯ, 7.30ಕ್ಕೆ ಪಂಚಾಮೃತ ಅಭಿಷೇಕ, ಅಷ್ಟೋತ್ತರ, 10ಕ್ಕೆ ಪ್ರವಚನ: ಡಾ. ಶ್ರೀನಿಧಿ ಆಚಾರ್ಯ ಪ್ಯಾಟಿ ಅವರಿಂದ. 10.45ರವರೆಗೆ ರಾಯರಿಗೆ ನೂತನ ರಥ ಸಮರ್ಪಣೆ. 11.30ಕ್ಕೆ ಮಹಾಮಂಗಳಾರತಿ. 11.45ರಿಂದ 1.45ರವರೆಗೆ ಸಾರ್ವಜನಿಕರಿಗೆ ಅನ್ನ ಸಂತರ್ಪಣೆ, ಸಂಜೆ 5.45ಕ್ಕೆ ಸಂಗೀತ ಕಾರ್ಯಕ್ರಮ. 7 ಗಂಟೆಗೆ ಪಲ್ಲಕ್ಕಿ ಉತ್ಸವ. ರಥೋತ್ಸವ. ಕನಕಾಭಿಷೇಕ, ಅಷ್ಟಾವಧಾನ, ಮಹಾಮಂಗಳಾರತಿ. ಸ್ಥಳ: ಶ್ರೀರಾಘವೇಂದ್ರ ಧಾಮ, ಕಾರ್ತಿಕ ಬಡಾವಣೆ, ರಾಮಕೃಷ್ಣನಗರ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ (ಶ್ರೀರಾಘವೇಂದ್ರಸ್ವಾಮಿ ಮಠ):** ಶ್ರೀರಾಘವೇಂದ್ರತೀರ್ಥ ಗುರುಸಾರ್ವಭೌಮರ 354ನೇ ಆರಾಧನಾ ಮಹೋತ್ಸವ. ಮುಂಜಾನೆ 5.30ಕ್ಕೆ ಸುಪ್ರಭಾತ, 7ರಿಂದ 7.45ರವರೆಗೆ ಮಹಾಪಂಚಾಮೃತ ಅಭಿಷೇಕ. 8ರಿಂದ 10ರವರೆಗೆ ಕನಕಾಭಿಷೇಕ, ಸರ್ವ ಸೇವೆ. ಮಧ್ಯಾಹ್ನ 12ಕ್ಕೆ ಮಹಾ ಮಂಗಳಾರತಿ. 12.30ರಿಂದ 2ರವರೆಗೆ ಪ್ರಸಾದ ವಿನಿಯೋಗ. ಸಂಜೆ 7ಕ್ಕೆ ಸ್ವಸ್ತಿ ವಾಚನ. ಶ್ರೇಯಃ ಪ್ರಾರ್ಥನೆ, ಮಹಾಮಂಗಳಾರತಿ. ಸಂಜೆ 5.30ರಿಂದ 6ರವರೆಗೆ ಸತ್ಯಧಾನ ಭಜನ ಮಂಡಳಿಯಿಂದ ಭಜನಾ ಕಾರ್ಯಕ್ರಮ. ಸಂಜೆ 6ರಿಂದ ಉಸ್ತಾದ್ ಫಿಯಾಜ್ ಖಾನ್ ಮತ್ತು ತಂಡದವರಿಂದ ಗಾಯನ. ಸ್ಥಳ: ಮಠದ ಆವರಣ, ಜಯಲಕ್ಷ್ಮೀಪುರಂ.

■ **ಸಾರ್ವಭೌಮ:** ಶ್ರೀ ಗುರುರಾಘವೇಂದ್ರ ಸ್ವಾಮಿಗಳ 354ನೇ ವರ್ಷದ ಆರಾಧನಾ ಮಹೋತ್ಸವ, ಸಮಿತಿ ವತಿಯಿಂದ 44ನೇ ವರ್ಷದ ಆರಾಧನಾ ಮಹೋತ್ಸವ. ಬೆಳಗ್ಗೆ 6 ಗಂಟೆಗೆ ಸುಪ್ರಭಾತ, 8ರಿಂದ 9ರವರೆಗೆ ಶ್ರೀರಾಘವೇಂದ್ರ ಅಷ್ಟಾಕ್ಷರ ಜಪ, 9ರಿಂದ 11ರವರೆಗೆ ಹೋಮ, 11ರಿಂದ 11.30ರವರೆಗೆ ಅಷ್ಟೋತ್ತರ ಸೇವೆ, 11.30ರಿಂದ 1ರವರೆಗೆ ಅಭಿಷೇಕ, ಮಹಾಪೂಜೆ, ಮಹಾಮಂಗಳಾರತಿ. ಸಂಜೆ 6ರಿಂದ 9.30ರವೆಗೆ ಉಪನ್ಯಾಸ ಹಾಗೂ ಸಂಗೀತ ಸೇವೆ (ವಿದ್ವಾನ್ ವಿವೇಕ್ ಸದಾಶಿವಂ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಮೃದಂಗ–ಶ್ರೀ ರವಿಶಂಕರ್, ವಯೋಲಿನ್ ಶ್ರೀಕೇಶವ್ ಮೋಹನ್ ಕುಮಾರ್). 9.30ರಿಂದ 10ರವರೆಗೆ ಮಹಾಮಂಗಳಾರತಿ, ಅಷ್ಟಾವಧಾನ ಸೇವೆ ಹಾಗೂ ತೊಟ್ಟಿಲು ಸೇವೆ. ಸ್ಥಳ ಸಾರ್ವಭೌಮ, 3ನೇ ಬ್ಲಾಕ್. ಸೋಮನಾಥನಗರ.

■ **ಶ್ರೀ ಸಾಗರಕಟ್ಟೆ ಮಠ ಟ್ರಸ್ಟ್ (ಶ್ರೀರಾಘವೇಂದ್ರ ಸ್ವಾಮಿಗಳವರ ಬೃಂದಾವನ ಸನ್ನಿಧಾನ):** ಶ್ರೀ ಶ್ರೀ ರಾಘವೇಂದ್ರ ಗುರುಸಾರ್ವಭೌಮರ 354ನೇ ಆರಾಧನಾ ಮಹೋತ್ಸವ. ಬೆಳಗ್ಗೆ 7 ಗಂಟೆಗೆ ಪಾದಪೂಜೆ, 9ಕ್ಕೆ ಪಂಚಾಮೃತ. ಮಧ್ಯಾಹ್ನ 12.30ಕ್ಕೆ ಅಲಂಕಾರ, ಬ್ರಾಹ್ಮಣ ಸೇವೆ. ಸಂಜೆ 7ರಿಂದ 8.30ರವರೆಗೆ ಸಂಗೀತ ಕಾರ್ಯಕ್ರಮ. ಸಂಜೆ 5.30ರಿಂದ ಭಜನಾ ಮಂಡಳಿಯಿಂದ ಭಜನಾ ಕಾರ್ಯಕ್ರಮ. ಸಂಜೆ 6.30ರಿಂದ ವಿದ್ವಾನ್ ಆರ್.ವಿ.ಅಕ್ಷಯ್, ವಿದ್ವಾನ್ ಆರ್.ವಿ.ಅಭಿಷೇಕ್ (ಟಿಆರ್‌ಕೆ ಸಹೋದರರು) ಅವರಿಂದ ದ್ವಂದ್ವ ಗಾಯನ, ವಿದ್ವಾನ್ ತುಮಕೂರು ಯಶಸ್ವಿ–ಪಿಟೀಲು, ವಿದ್ವಾನ್ ವಿಕ್ರಮ್ ಭಾರದ್ವಾಜ್–ಮೃದಂಗ. ಸ್ಥಳ: ಮಠದ ಪ್ರಾಂಗಣ, 12ನೇ ಅಡ್ಡ ರಸ್ತೆ, ವಿವಿ ಮೊಹಲ್ಲಾ.

■ **ಶ್ರೀ ಮನ್ಮಧ್ವಾಚಾರ್ಯ ಮೂಲ ಮಹಾಸಂಸ್ಥಾನ, ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠ (ಸುಬ್ಬರಾಯನ ಕೆರೆ)–ನಂಜನಗೂಡು ಶ್ರೀರಾಘವೇಂದ್ರ ಸ್ವಾಮಿಗಳವರ ಮಠದ ಶಾಖೆ:** ಶ್ರೀ ರಾಘವೇಂದ್ರ ತೀರ್ಥ ಗುರು ಸಾರ್ವಭೌಮರ 354ನೇ ಆರಾಧನಾ ಮಹೋತ್ಸವ. ಬೆಳಗ್ಗೆ 7 ಗಂಟೆಗೆ ಉತ್ಸವ, ರಾಯರಿಗೆ ಪಾದಪೂಜೆ, ಪಂಚಾಮೃತ, ಮಧ್ಯಾಹ್ನ 12 ಗಂಟೆಗೆ ಹಸ್ತೋದಕ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ. ಸಂಜೆ 5ಕ್ಕೆ ಕುಮಾರಿ ಶ್ರೀಧನ್ಯ ಗುರುರಾಜ್ ಅವರಿಂದ ದಾಸವಾಣಿ, ರಾತ್ರಿ 8 ಗಂಟೆಗೆ ಶ್ರೀಮತಿ ದೀಪಿಕಾ ಪಾಂಡುರಂಗಿ ಅವರಿಂದ ದಾಸವಾಣಿ. ಸ್ಥಳ: ಮಠದ ಆವರಣ, ನಾರಾಯಣಶಾಸ್ತ್ರಿ ರಸ್ತೆ.

■ **ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್:** ಶ್ರೀ ವೀರಭದ್ರೇಶ್ವರ ಸ್ವಾಮಿಯವರ ಜನ್ಮೋತ್ಸವ, ಮಹಾರಥೋತ್ಸವ, ಶ್ರಾವಣ ಮಾಸದ ಪೂಜಾ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಪ್ರಾಂಗಣ, ಡಿ.ಬನುಮಯ್ಯ ರಸ್ತೆ, ಕೆ.ಅರ್.ಮೊಹಲ್ಲಾ. ಬೆಳಗ್ಗೆಯಿಂದ.

■ **ಯೋಗ ಫೆಡರೇಷನ್ ಆಫ್ ಇಂಡಿಯಾ, ಕರ್ನಾಟಕ ಸ್ಟೇಟ್ ಅಮೆಚೂರ್ ಯೋಗ ಸ್ಪೋರ್ಟ್ಸ್ ಅಸೋಸಿಯೇಷನ್, ಗ್ಲೋಬಲ್ ಯೋಗ ಫೋರಂ, ಜೆಎಸ್‌ಎಸ್ ಯೋಗ:** 50ನೇ ಹಿರಿಯರ ರಾಷ್ಟ್ರೀಯ ಯೋಗ ಸ್ಪೋರ್ಟ್ಸ್ ಚಾಂಪಿಯನ್‌ಶಿಪ್–2025. ಸ್ಥಳ: ಗಣಪತಿ ಸಚ್ಚಿದಾನಂದ ಆಶ್ರಮ. ಬೆಳಗ್ಗೆಯಿಂದ.

■ **ಶ್ರೀ ಶ್ರೀ ಸುಬ್ಬರಾಯದಾಸರ ಶ್ರೀ ಪ್ರತಿನಾಮ ಗೋಪಾಲ ಒಡೆಯರ ಶ್ರೀ ಪ್ರಸನ್ನ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನ:** ಶ್ರೀ ರಾಘವೇಂದ್ರ ಸ್ವಾಮಿಗಳವರ ಆರಾಧನಾ ಮಹೋತ್ಸವ–2025. ಬೆಳಗ್ಗೆ ಶ್ರೀ ಗುರು ಸಾರ್ವಭೌಮರ ಮಧ್ಯಾರಾಧನೆ. ಸಂಜೆ ಉತ್ಸವ, ಮಹಾಮಂಗಳಾರತಿ ಸ್ಥಳ: ದೇವಸ್ಥಾನದ ಪ್ರಾಂಗಣ, ಕೃಷ್ಣವಿಲಾಸ ರಸ್ತೆ, ದೇವರಾಜ ಮೊಹಲ್ಲಾ.

■ **ಶ್ರೀಕೃಷ್ಣ ಟ್ರಸ್ಟ್, ಶ್ರೀಕೃಷ್ಣಧಾಮ:** ಶ್ರೀ ಗುರು ರಾಘವೇಂದ್ರ ಸಾರ್ವಭೌಮರ 354ನೇ ಆರಾಧನಾ ಮಹೋತ್ಸವ. ಮಧ್ಯಾರಾಧನೆ, ಬೆಳಗ್ಗೆ 5.30ರಿಂದ ಸುಪ್ರಭಾತ, 7.30ರಿಂದ ಪಂಚಾಮೃತ ಅಭಿಷೇಕ. 9.30ಕ್ಕೆ ಕನಕಾಭಿಷೇಕ, 11.30ಕ್ಕೆ ಅಲಂಕಾರ ಸೇವೆ, 12.30ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗ. ನಟರಾಜ ಪರ್ಫಾಮಿಂಗ್ ಆರ್ಟ್ ವೃಂದದವರಿಂದ ನೃತ್ಯಾಂಜಲಿ. ಸ್ಥಳ: ಶ್ರೀಕೃಷ್ಣಧಾಮ, ಸಾಹುಕಾರ್ ಚೆನ್ನಯ್ಯ ರಸ್ತೆ, ಸರಸ್ವತಿಪುರಂ.

■ **ಶ್ರೀ ಗುರು ರಾಘವೇಂದ್ರ ಸೇವಾ ಟ್ರಸ್ಟ್:** ಶ್ರೀ ಗುರು ರಾಘವೇಂದ್ರಸ್ವಾಮಿಗಳ 354ನೇ ಆರಾಧನಾ ಮಹೋತ್ಸವ. ಬೆಳಗ್ಗೆ 5.30ಕ್ಕೆ ಸುಪ್ರಭಾತ, 6 ಗಂಟೆಗೆ ನಿರ್ಮಾಲ್ಯ ವಿಸರ್ಜನೆ, ಪಂಚಾಮೃತ, 7 ಗಂಟೆಗೆ ರಾಯರಿಗೆ ಪಾದ ಪೂಜೆ, ಕನಕಾಭಿಷೇಕ, ಸರ್ವ ಸೇವೆ, ಅರ್ಚನೆ, ಅಲಂಕಾರ. ಬೆಳಗ್ಗೆ 9ರಿಂದ 11.30ರವರೆಗೆ ಭಜನೆ, ದೇವರನಾಮ. ಸಂಜೆ 6.30ರಿಂದ 8 ಗಂಟೆಯವರೆಗೆ ವಿದುಷಿ ಶ್ರೀಮತಿ ಸಾಯಿ ಪ್ರಾರ್ಥನಾ, ಪ್ರಭಾರಾವ್ ಅವರಿಂದ ಭರತನಾಟ್ಯ. ಸ್ಥಳ: ದೇವಸ್ಥಾನದ ಆವರಣ, 4ನೇ ಹಂತ, ಟಿ.ಕೆ.ಬಡಾವಣೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ. ಬೆಳಗ್ಗೆ 9ರಿಂದ ಮೈಗ್ರೇನ್‌ಗೆ ಪರಿಹಾರ–ಆಕ್ಯುಪಂಕ್ಚರ್ ಚಿಕಿತ್ಸೆ, ಯಾವುದೇ ತರಹದ ತಲೆನೋವಿಗೆ ಚಿಕಿತ್ಸಾ ಶಿಬಿರ. ಆರ್ಥರೈಟಿಸ್‌ಗೆ ಚಿಕಿತ್ಸಾ ಶಿಬಿರ. ಸ್ಥಳ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿ ರಸ್ತೆ. ಆಲನಹಳ್ಳಿ.

■ **ಸಂಚಲನ, ಮೈಸೂರು, ರಂಗ ರಥ, ಬೆಂಗಳೂರು:** ನಟನಾಭ್ಯಾಸ ಶಿಬಿರ. ಶಿಬಿರದ ನಿರ್ದೇಶಕರು: ಆಸಿಫ್ ಕ್ಷತ್ರಿಯ, ಶ್ವೇತಾ ಶ್ರೀನಿವಾಸ್. ಸ್ಥಳ: ತಾಲೀಮು ಕೊಠಡಿ, ಕಲಾಮಂದಿರ, ಬೆಳಗ್ಗೆ 6.30ರಿಂದ.

■ **ಬಲಮುರಿ ಶಕ್ತಿ ಮಹಾಗಣಪತಿ ದೇವಾಲಯ:** 35ನೇ ವರ್ಷದ ವಾರ್ಷಿಕೋತ್ಸವ. ಬೆಳಗ್ಗೆ 7 ಗಂಟೆಗೆ ರುದ್ರಾಭಿಷೇಕ. ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನೆ ಪ್ರಯುಕ್ತ ಪೂಜೆ, ಶ್ರೀ ರುದ್ರ ಹೋಮ, ಪೂರ್ಣಾಹುತಿ. ಸ್ಥಳ: ದೇವಸ್ಥಾನದ ಆವರಣ, ಹುಡ್ಕೋ ಒಂದನೇ ಹಂತ, ಬನ್ನಿಮಂಟಪ.

■ **ಜೆಎಸ್‌ಎಸ್ ಕಾನೂನು ಕಾಲೇಜು:** ದೀಕ್ಷಾರಂಭ ಪುನಶ್ಚೇತನ ಕಾರ್ಯಕ್ರಮ. ಸ್ಥಳ: ಸಿಲ್ವರ್ ಜ್ಯೂಬಿಲಿ ಸಭಾಂಗಣ. ಬೆಳಗ್ಗೆ 9ಕ್ಕೆ.

■ **ರಾಮ್‌ಸನ್ಸ್ ಬೊಂಬೆ ಮನೆ:** ಬೊಂಬೆ ಪ್ರದರ್ಶನ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಡಿಜಿಟಲ್ ಡಿಟಾಕ್ಸ್ ಮತ್ತು ಸ್ಕ್ರೀನ್ ಅತ್ಯಾಶಕ್ತಿ ಅರಿವು ಶಿಬಿರ, ಗರ್ಭ ಸಂಸ್ಕಾರ, ಇಸುಬು ರೋಗ ಮತ್ತು ಹುಳಕಡ್ಡಿ, ಬೆರಳು ಸಂದಿಯ ಫಂಗಲ್ ಇನ್ಫೆಕ್ಷನ್, ಕಿಟಿಬ ಕುಷ್ಟಕ್ಕೆ ಚಿಕಿತ್ಸಾ ಶಿಬಿರ. ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್. ಬೆಳಗ್ಗೆ 10ರಿಂದ.

■ **ಪಿ.ಆರ್.ತಿಪ್ಪೇಸ್ವಾಮಿ ಪ್ರತಿಷ್ಠಾನ (ಮೈಸೂರು), ಪಿ.ಆರ್.ತಿಪ್ಪೇಸ್ವಾಮಿ ಅಧ್ಯಯನ ಪೀಠ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ (ಮೈಸೂರು ವಿವಿ):** ಕಲಾವಿದ, ಜಾನಪದ ವಿದ್ವಾಂಸ, ಸಾಹಿತಿ, ಸಮಾಜ ಸೇವಕ ದಿ. ಪಿ.ಆರ್.ತಿಪ್ಪೇಸ್ವಾಮಿ ಅವರ ಜನ್ಮ ದಿನೋತ್ಸವ ಆಚರಣೆ. ಉದ್ಘಾಟನೆ: ಪ್ರಗತಿಪರ ಚಿಂತಕ ಪ್ರೊ. ಕಾಳೇಗೌಡ ನಾಗವಾರ. ಸ್ಥಳ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ. ಬೆಳಗ್ಗೆ 11ಕ್ಕೆ.

■ **ಭಾರತೀಯ ಜನತಾಪಾರ್ಟಿ, ನರಸಿಂಹರಾಜ ಕ್ಷೇತ್ರ:** ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ತ್ರಿವರ್ಣ ಧ್ವಜ ಹಿಡಿದು ಬೈಕ್ ಜಾಥಾ. ಸ್ಥಳ: ಟೆರಿಷಿಯನ್ ಕಾಲೇಜು ಸರ್ಕಲ್, ಸಂಜೆ 4 ಗಂಟೆಗೆ.

■ **ಶ್ರೀಸುತ್ತೂರು ಮಠ (ಮೈಸೂರು ಶಾಖೆ):** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ. ಪ್ರಾಧ್ಯಾಪಕ ಡಾ.ಬಿ.ವಿ.ವಸಂತಕುಮಾರ್ ಅವರಿಂದ ಪ್ರವಚನ, ಗಮಕ ವಿದ್ವಾನ್ ಕೃ.ರಾಮಚಂದ್ರ ಅವರಿಂದ ವಾಚನ, ಸಾಮೂಹಿಕ ಪ್ರಾರ್ಥನೆ, ಸ್ಥಳ: ಮಠದ ಆವರಣ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ, 6.15–ಗೀತಾರಾಧನ, 6.35 ಮತ್ತು ಸಂಜೆ 6.10: ಸಸ್ಯ ಸಿರಿ ಮನೆಯಂಗಳದಲ್ಲಿರುವ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40–ಅರಿವಿನ ಶಿಖರ, ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ದೀಪಿಕಾ ಪಾಂಡುರಂಗಿ, ಸಿ.ವಿಶ್ವನಾಥ್, ವ್ಯಾಖ್ಯಾನ–ಡಾ.ಜ್ಯೋತಿಶಂಕರ್, 6.50–ರೈತರಿಗೆ ಸಲಹೆ, 7.15–ಭಾವಗೀತೆಗಳು, 8.30–ಕನ್ನಡ ಚಿತ್ರಗೀತೆಗಳು, 9.00–ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ), 10.00–ಕರ್ನಾಟಕ ಶಾಸ್ತ್ರೀಯ ಸಂಗೀತ ಬಳ್ಳಾರಿ ಎಂ.ರಾಘವೇಂದ್ರ–ಹಾಡುಗಾರಿಕೆ, 10.30–ಹಿಂದಿ ಚಿತ್ರಗೀತೆಗಳು, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಗೇಮ್ ಷೋ, ಪ್ರಸ್ತುತಿ–ಬಿ.ದಿಗ್ವಿಜಯ್, **ಮಧ್ಯಾಹ್ನ** 12.05–ವನಿತಾ ವಿಹಾರ, 12.35–ದೇವರನಾಮ, 12.45–ನಮ್ಮ ಆರೋಗ್ಯ ಒಸಡು ರೋಗ ಚಿಕಿತ್ಸೆ ಕುರಿತು ಮೈಸೂರಿನ ಜೆಎಸ್‌ಎಸ್ ದಂತವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಒಸಡುಶಾಸ್ತ್ರ ವಿಭಾಗದ ಪ್ರೊಫೆಸರ್ ಹಾಗೂ ಮುಖ್ಯಸ್ಥರಾದ ಡಾ.ಸುಮನ್ ಬಸವರಾಜು ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ, 1.00–ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳ ಸರಣಿ, 1.20–ಭಾವಗೀತೆಗಳು, ಕೆ.ಆರ್.ಹರ್ಷದೀಪ್, 2.30–ಪ್ರದೇಶ ಸಮಾಚಾರ, 2.40–ಚಿತ್ರಗೀತೆಗಳು, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಸಿ.ಸರೋಜಾ ಮತ್ತು ಸಿ.ಲಲಿತಾ ಅವರ ಯುಗಳ ಹಾಡುಗಾರಿಕೆ, 4.00–ಮಹಿಳಾರಂಗ–ಡಾಕ್ಟರ್ ಸಮಯ–ಮಹಿಳಾ ಆರೋಗ್ಯ ಕಾರ್ಯಕ್ರಮ, ವಿಷಯ: ಬಂಜೆತನ ಹಾಗೂ ಅತಿಯಾದ ಗರ್ಭಪಾತ, ಭಾಗವಹಿಸುತ್ತಾರೆ: ಡಾ.ಶಿಲ್ಪಶ್ರೀ. ಎಂ.ಕೆ., ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞರು, ಉಪವಿಭಾಗೀಯ ಆಸ್ಪತ್ರೆ, ಪಾಂಡವಪುರ. ಪ್ರಸ್ತುತಿ: ಕೀರ್ತನ.ವಿ, 4.45–ಹಿಂದಿ ಪಾಠ, ಪ್ರಸ್ತುತಿ: ಎಸ್.ಈಶ್ವರಭಟ್, 5.05–ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50–ಕೃಷಿರಂಗ: ಮುಸುಕಿನ ಜೋಳದ ರೋಗಗಳ ಸಮಗ್ರ ನಿರ್ವಹಣೆ ಈ ಕುರಿತು ಮಂಡ್ಯದ ವಿ.ಸಿ.ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ಡಾ.ಎನ್.ಮಲ್ಲಿಕಾರ್ಜುನ್ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎನ್.ಕೇಶವಮೂರ್ತಿ, 7.45–ವಿಧಾನಮಂಡಲದಲ್ಲಿ ಇಂದು, 8.00–ಸಂಸತ್ ಸಮೀಕ್ಷಾ, 8.15–ಯುವವಾಣಿ–ಮೈಸೂರಿನ ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿನಿ ಪ್ರತೀಕ್ಷಾ.ಪಿ.ಕೆ ಅವರಿಂದ ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ವಿಶೇಷ ಚಿತ್ರಚಿತ್ತಾರ., 9.30–ಕರ್ನಾಟಕ ಶಾಸ್ತ್ರೀಯ ಸಂಗೀತ : ವಿ.ವಂಶೀಧರ್–ವೇಣುವಾದನ, 10.00–ಸಂಸತ್‌ನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣ.

ಮೈಸೂರು ಕೊಡವ ಸಮಾಜದಿಂದ ಕೆಬಿಜಿಯವರಿಗೆ ನುಡಿನಮನ



ಮೈಸೂರು ಕೊಡವ ಸಮಾಜದ ವತಿಯಿಂದ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ(ಕೆಬಿಜಿ) ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮೈಸೂರು, ಆ.10(ಎಂಕೆ)– ಇತ್ತೀಚೆಗೆ ನಿಧನರಾದ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ(ಕೆಬಿಜಿ) ಅವರಿಗೆ ಮೈಸೂರು ಕೊಡವ ಸಮಾಜದ ವತಿಯಿಂದ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸಿ, ನುಡಿನಮನ ಸಲ್ಲಿಸಲಾಯಿತು.

ಮೈಸೂರಿನ ವಿಜಯನಗರದಲ್ಲಿರುವ ಕೊಡವ ಸಮಾಜದ ಗುರುಮನೆ ಸಭಾಂಗಣದಲ್ಲಿ ಮೈಸೂರು ಕೊಡವ ಸಮಾಜದ ಪದಾಧಿಕಾರಿಗಳು, ವಿವಿಧ ಕೊಡವ ಸಂಘಟನೆಗಳು ಹಾಗೂ ಅಭಿಮಾನಿಗಳು ಕೆಬಿಜಿ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ, ಮೌನಾಚರಣೆ ಮೂಲಕ ಶ್ರದ್ಧಾಂಜಲಿ ಸಲ್ಲಿಸಿದರು.

ಬಳಿಕ ನುಡಿನಮನ ಕಾರ್ಯಕ್ರಮಕ್ಕೆ ಎಲ್ಲರನ್ನು ಸ್ವಾಗತಿಸಿ ಮಾತನಾಡಿದ ಮೈಸೂರು ಕೊಡವ ಸಮಾಜದ ಅಧ್ಯಕ್ಷ ಪೊಂಜಂಡ ಎ.ಗಣಪತಿ, ಹುಟ್ಟು–ಸಾವು ಸಹಜ. ಹುಟ್ಟಿದವರು ಇವತ್ತಲ್ಲಾ ನಾಳೆ ಸಾಯಲೇಬೇಕು. ಆದರೆ, ಪತ್ರಿಕೋದ್ಯಮ ಕ್ಷೇತ್ರದಲ್ಲಿ ಶಿಸ್ತಿಗೆ ಹೆಸರಾಗಿದ್ದ ಡಾ.ಕೆ.ಬಿ.ಗಣಪತಿ ಅವರು ನಮ್ಮನ್ನು ಅಗಲುತ್ತಾರೆ ಎಂಬ ಕಲ್ಪನೆಯೂ ಇರಲಿಲ್ಲ. ಸೌಮ್ಯ, ಸಜ್ಜನ ವ್ಯಕ್ತಿತ್ವದ ಅವರು ಸದಾ ಸಮಾಜಮುಖಿಯಾಗಿ ಬದುಕಿದವರು. ಅವರನ್ನು ಕಳೆದುಕೊಂಡಿದ್ದು ನಮಗೆ ಅನಾಥ ಪ್ರಜ್ಞೆ ಕಾಡುವಂತೆ ಮಾಡಿದೆ ಎಂದು ವಿಷಾದಿಸಿದರು.

ಮೈಸೂರಿನ ಭಾರತೀಯ ವಿದ್ಯಾಭವನದ ಗೌರವ ಕಾರ್ಯದರ್ಶಿ ಪಿ.ಎಸ್.ಗಣಪತಿ ಮಾತನಾಡಿ, ಕೆಬಿಜಿ ಅವರನ್ನು ನಾನು ಪ್ರೀತಿಯಿಂದ 'ಗಾಂಧಿ' ಎಂದು ಕರೆಯುತ್ತಿದ್ದೆ. 'ಗುಡ್ ಇಮೇಜ್' ಎನ್ನುವ ಪ್ರಿಂಟಿಂಗ್ ಪ್ರೆಸ್‌ನಲ್ಲಿ ಪಾಲುದಾರನಾಗಿದ್ದ ನನಗೆ ಪ್ರತಿ ಹಂತದಲ್ಲಿಯೂ ಮಾರ್ಗದರ್ಶಕರಾಗಿದ್ದರು. ಮೈಸೂರಿನ ಭಾರತೀಯ ವಿದ್ಯಾಭವನದ ಉಪಾಧ್ಯಕ್ಷರಾಗಿ, ಅಧ್ಯಕ್ಷರಾಗಿ ಮಹತ್ವದ ಕೊಡುಗೆ ನೀಡಿದ್ದಾರೆ. ಅವರ ಪ್ರೇರಣೆಯಿಂದಲೇ 35 ಕೋಟಿ ರೂ. ಯೋಜನೆ ಕೈಗೊಳ್ಳಲು ಸಾಧ್ಯವಾಯಿತು. ಕೆಬಿಜಿಯಂತಹ ವ್ಯಕ್ತಿತ್ವವನ್ನು ಮತ್ತೆ ನೋಡಲು ಸಾಧ್ಯವಿಲ್ಲ ಎಂದು ಸ್ಮರಿಸಿದರು.

ಕೆಬಿಜಿ ಪ್ರೇರಕ ಶಕ್ತಿ...!

ಕೊಡವ ಜನಾಂಗದಲ್ಲಿ ಹುಟ್ಟಿರುವ ಕೆಬಿಜಿಯವರು ಪಾಂಡಿತ್ಯಕ್ಕೆ, ವಿದ್ವತ್‌ಗೆ ಬರಹಕ್ಕೆ ಅಧ್ಯಯನ ಶೀಲತೆಗೆ ಇನ್ನೊಂದು ಹೆಸರು. ಇವರ ಪತ್ರಿಕೋದ್ಯಮ ಮೈಸೂರಿನಲ್ಲಿ ಮೋಡಿ ಮಾಡಿದೆ. ಪ್ರತೀ ದಿನ 'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ಪ್ರತೀ ಮನೆಗೆ ತಲುಪುವಂತಾಗಿದ್ದು ಸಣ್ಣ ಸಾಧನೆಯಲ್ಲ. ಎಂದಿಗೂ ರಾಜಕಾರಣಿಗಳ ಬಾಲ ಹಿಡಿದು ಹೋಗಿಲ್ಲ. ಸರ್ಕಾರದ ಜಾಹೀರಾತನ್ನು ಬಯಸಿದವರಲ್ಲ. ಕಲೆ ಸಾಹಿತ್ಯ ಸಂಸ್ಕೃತಿಗೆ ತಮ್ಮನ್ನು ತೆರೆದುಕೊಂಡಿದ್ದರು. ಅವರ 'ಅಬ್ರಕಡಬ್ರ' ಮತ್ತು 'ಛೂ ಮಂತ್ರ' ಓದುವುದೇ ಮಜ. ಅವರ ಬರವಣಿಗೆಯ ಶಕ್ತಿ ಅಂತಹದ್ದು. ಮೈಸೂರಿನಲ್ಲಿ ನಡೆದಿರುವ ಅನೇಕ ಅಭಿವೃದ್ಧಿ ಮತ್ತು ಸುಧಾರಣೆಗೆ ಕೆಬಿಜಿ ಪ್ರೇರಕ ಶಕ್ತಿಯಾಗಿದ್ದರು. ಕೊಡಗಿನ ಬಗ್ಗೆ, ಕೊಡವ ಜನಾಂಗದ ಬಗ್ಗೆ ವಿಶೇಷ ಕಾಳಜಿ ವಹಿಸಿದ್ದ ಅವರ ಮನಸ್ಸು ತುಡಿಯುತ್ತಾ ಇತ್ತು. ಅವರದ್ದು ಒಂದು ಪತ್ರಿಕಾ ಉದ್ಯಮದ ಕಚೇರಿಯಾಗಿರಲಿಲ್ಲ. ಬದಲಿಗೆ ಸಾರ್ವಜನಿಕ ಸೇವೆಯ ಸ್ಥಳವಾಗಿತ್ತು.

- ಅಡ್ಡಂಡ ಸಿ.ಕಾರ್ಯಪ್ಪ, ಮೈಸೂರು ರಂಗಾಯಣದ ಮಾಜಿ ನಿರ್ದೇಶಕ

ಗುಂಡೂರಾವ್ ಅವರ ಕಾಲದಲ್ಲಿ ಅವರ ಮೇಲೆ ಪ್ರಭಾವ ಬೀರಿದ ಕೆಬಿಜಿ, ಕಾವೇರಿ ವಿದ್ಯಾಸಂಸ್ಥೆಗೆ ಜಾಗ ಕೊಡಿಸಿದ್ದರು. ಹಾಗೆಯೇ ಬಾಳುಗೋಡಿನಲ್ಲಿರುವ ಕೊಡವ ಫೆಡರೇಶನ್‌ಗೆ ಹಣದ ಕೊರತೆ ಇದ್ದಾಗ 6 ಲಕ್ಷ ರೂ. ಹಣ ಸಹಾಯ ಮಾಡಿದ್ದರು. ಅಲ್ಲದೆ, ಮೈಸೂರು ಕೊಡವ ಸಮಾಜಕ್ಕೆ ಆರ್ಥಿಕ ಸಹಕಾರ ನೀಡಿರುವ ಅವರು ಎಲ್ಲಾ ರಾಜಕಾರಣಿಗಳೊಂದಿಗೆ ಉತ್ತಮ ಬಾಂಧವ್ಯ ಇಟ್ಟುಕೊಂಡಿದ್ದರು ಎಂದರು.

ನ್ಯಾಯ ದೊರಕಿಸಿಕೊಟ್ಟ ಕೆಬಿಜಿ: ಅಖಿಲ ಕೊಡವ ಸಮಾಜದ ಅಧ್ಯಕ್ಷ ಪರದಂಡ ಸುಬ್ರಹ್ಮಣಿ ಮಾತನಾಡಿ, ವಿರಾಜಪೇಟೆಯ ಕಾವೇರಿ ಆಶ್ರಮದಲ್ಲಿ ವಿವಾದ ಎದ್ದಿದ್ದಾಗ ಕೆಲ ಪಟ್ಟಭದ್ರ ಹಿತಾಸಕ್ತಿಯಿಂದ ಕೊಡಗಿನ ಯಾವ ಪತ್ರಿಕೆಗಳು ಸುದ್ದಿ ಮಾಡದಿದ್ದಾಗ, ಕೆಬಿಜಿಯವರು ತಮ್ಮ ಪತ್ರಿಕೆಗಳಲ್ಲಿ ವರದಿ ಪ್ರಕಟಿಸಿ ನ್ಯಾಯ ದೊರಕಿಸಿಕೊಟ್ಟಿದ್ದರು. ಕಾನೂನಿನ ಅರಿವುಳ್ಳ ಅವರು ಧೈರ್ಯವಾಗಿ ನಮ್ಮೊಂದಿಗೆ ನಿಂತು 'ಕಾವೇರಿ ಆಶ್ರಮ ನಮ್ಮದು' ಎಂಬ ಘೋಷಣೆ ಮೊಳಗಿಸಿದ್ದರು. ಪತ್ರಿಕೋದ್ಯಮದ ದೈತ್ಯ ಶಕ್ತಿಯಾಗಿದ್ದ ಅವರು ನಿಷ್ಠೆ, ಶ್ರದ್ಧೆಗೆ ಹೆಸರಾಗಿದ್ದರು ಎಂದು ನೆನೆದರು.

ಪತ್ರಿಕೋದ್ಯಮದ ಅಜಾತಶತ್ರು: ಅರುಣಾಚಲ ಪ್ರದೇಶದ ರಾಜೀವ್ ಗಾಂಧಿ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಕೆ.ಸಿ.ಬೆಳ್ಳಿಯಪ್ಪ ಮಾತನಾಡಿ, ಕೆಬಿಜಿ ಎಂದರೆ ವಿಶಿಷ್ಟ ವ್ಯಕ್ತಿತ್ವ. 5 ವರ್ಷ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ಕೆಲಸ ಮಾಡಿರುವ ಅವರು ಸುಮಾರು 53 ವರ್ಷಗಳ ಪತ್ರಿಕೋದ್ಯಮದಲ್ಲಿ ಸೇವೆ ಸಲ್ಲಿಸಿದ್ದು, ಅವರನ್ನು ಪತ್ರಿಕೋದ್ಯಮದ ಅಜಾತಶತ್ರು ಎನ್ನಬಹುದು. ಪತ್ರಿಕೋದ್ಯಮಕ್ಕೆ ಬಹಳ ಮುಖ್ಯವಾದ ಬರಹ ಅವರಲಿತ್ತು. ಓದುಗರ ಆಸಕ್ತಿಗೆ ಅನುಗುಣವಾಗಿ, ಓದುವ ಆಸಕ್ತಿಯನ್ನು ಅರಳಿಸುವ ರೀತಿಯಲ್ಲಿ ಕಲೆ, ಸಾಹಿತ್ಯ ರಾಜಕೀಯ ಸೇರಿದಂತೆ ಎಲ್ಲಾ ಕ್ಷೇತ್ರದ ವಿಷಯಗಳ ಕುರಿತು ಬರೆಯುವ ಶಕ್ತಿ ಅವರಲ್ಲಿತ್ತು. ಎಂದಿಗೂ ಲ್ಯಾಪ್‌ಟಾಪ್ ಮೊರೆ ಹೋಗದ ಅವರು, ಹಳೇ ಶಾಲೆಯ ಪತ್ರಿಕೋದ್ಯಮ ವಿದ್ಯಾರ್ಥಿ ಎಂದು ಬಣ್ಣಿಸಿದರು.

ಜಾನ್ ಕೊಡವ: ಕೊಡುಗೈ ದಾನಿಯಾಗಿದ್ದ ಕೆಬಿಜಿ ಅವರು ಕಷ್ಟದಲ್ಲಿರುವ ಇರುವವರಿಗೆ ಸದಾ ಸ್ಪಂದಿಸುತ್ತಿದ್ದರು. ಅವರಲ್ಲಿ ಗಮನಿಸಬೇಕಾದ ವಿಷಯವೆಂದರೆ ಅವರಲ್ಲಿದ್ದ ಶಿಸ್ತು. ಯಾವಾಗಲೂ ನಗು ಮುಖದಲ್ಲೇ ಇರುತ್ತಿದ್ದ ಅವರು ಎಂದಿಗೂ ರಾಜೀಯಾಗದ ವ್ಯಕ್ತಿತ್ವ ಅವರೆಂದೂ ಸರ್ಕಾರದ ಜಾಹೀರಾತಿಗೆ ಅವಲಂಭಿತರಾಗಿರಲಿಲ್ಲ. ಅವರ ತಂದೆಯ ಆದರ್ಶಗಳನ್ನು ಪಾಲಿಸುತ್ತಿದ್ದ ಕೆಬಿಜಿ ಅವರು ಓರ್ವ ಜಾನ್ ಕೊಡವ ಎಂದು ಗುಣಗಾನ ಮಾಡಿದರು.

ಪರಿಸರ ಪ್ರೇಮಿ: ಸಮಾಜ ಸೇವಕ ಜಮ್ಮಡ ಗಣೇಶ್ ಅಯ್ಯಣ್ಣ ಮಾತನಾಡಿ, ಪ್ರಾಮಾಣಿಕತೆ ಎಂಬುದನ್ನು ಡಾ.ಕೆ.ಬಿ.ಗಣಪತಿಯವರ ನಡೆ–ನುಡಿಯಲ್ಲಿ ಕಂಡಿದ್ದೇನೆ. ಕೊಡಗಿಗೆ ರೈಲ್ವೆ ಮಾರ್ಗವಾದರೆ ಪರಿಸರ ಹಾಳಾಗುತ್ತದೆ ಎಂದು ಪ್ರತಿಭಟಿಸಿದ ಪರಿಸರ ಪ್ರೇಮಿ. ಅವರು ನೀಡಿರುವ ಕೊಡುಗೆಗಳು ಅಪಾರ ಎಂದು ಕೆಬಿಜಿಯವರೊಂದಿಗೆ ಒಡನಾಟವನ್ನು ಮೆಲುಕು ಹಾಕಿದರು.

ಚಿತ್ರ ಕಲಾವಿದ ನೆಲ್ಲಮಕ್ಕಡ ಕಾವೇರಪ್ಪ ಮಾತನಾಡಿ, ಕೆಬಿಜಿ ಅವರು ತಮ್ಮ 'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ವರದಿ ಪ್ರಕಟಿಸುವ ಮೂಲಕ ಕಲೆ ಮತ್ತು ಸಂಸ್ಕೃತಿಗೆ ಸದಾ ಪ್ರೋತ್ಸಾಹ ನೀಡಿದ ಕಲಾ ಪೋಷಕರು ಎಂದು ಹೇಳಿದರು.

ಮೈಸೂರು ಕೊಡವ ಸಮಾಜದ ಉಪಾಧ್ಯಕ್ಷ ಮಾಚಿಮಾಡ ಪಿ ನಾಣಯ್ಯ, ಗೌರವ ಕಾರ್ಯದರ್ಶಿ ಕೆಟೋಳಿರ ಪಿ.ಬೆಳ್ಳಿಯಪ್ಪ, ಜಂಟಿ ಕಾರ್ಯದರ್ಶಿ ಅಜ್ಜಿಕುಟ್ಟೀರ ದಯಾನ ಪೂವಯ್ಯ, ಖಜಾಂಚಿ ಇಟ್ಟೀರ ಜಿ ಕಾಶಿಯಪ್ಪ ನಗರ ಪಾಲಿಕೆ ಸದಸ್ಯ ಎ.ಯು.ಸುಬ್ಬಯ್ಯ, ಮೂಳೆ ಶಸ್ತ್ರ ಚಿಕಿತ್ಸಕ ಡಾ.ಅಜ್ಜಿಕುಟ್ಟೀರ ದೇವಯ್ಯ, ನಿವೃತ್ತ ಐಎಎಸ್ ಅಧಿಕಾರಿ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

ಮೈಸೂರಲ್ಲಿದ್ದ ಕೊಡವರ ಧ್ವನಿ ಕೆಬಿಜಿ...


ಕೊಡವರು, ಕೊಡವ ಸಮಾಜವನ್ನು ಇಡೀ ವಿಶ್ವಕ್ಕೆ ಪರಿಚಯಿಸಿದ ಕೆಬಿಜಿ ಅವರು ಕಟ್ಟಡಗಳನ್ನು ಕಟ್ಟಿಸಿದ್ದಾರೆ, ಅನುದಾನ ನೀಡಿದ್ದಾರೆ ಎನ್ನುವುದಕ್ಕಿಂತ ಅವರ ವ್ಯಕ್ತಿತ್ವದಿಂದ ಏನನ್ನು ಕಟ್ಟಿಕೊಟ್ಟಿದ್ದಾರೆ ಎಂಬುದು ಮುಖ್ಯ. ಮೈಸೂರಿನಲ್ಲಿ ಗೌಡರಿಗೆ, ಕುರುಬ ಸಮುದಾಯಕ್ಕೆ ಮತ್ತು ಅಲ್ಪ ಸಂಖ್ಯಾತರು ಸೇರಿದಂತೆ ಇನ್ನಿತರೆ ಸಮುದಾಯಗಳ ಕಷ್ಟ ಕೇಳಲು ಹಲವು ನಾಯಕರಿದ್ದರು. ಆದರೆ ಕೊಡವರಿಗೆ ಯಾರೂ ಇರಲಿಲ್ಲ. ಹಾಗಾಗಿ ಸರ್ಕಾರಿ ಕೆಲಸದಲ್ಲಿರುವ ಕೊಡವರು ವರ್ಗಾವಣೆ ಮಾಡಿಸಿಕೊಳ್ಳಬೇಕಿದ್ದರೆ, ಪೊಲೀಸ್ ಠಾಣೆಯ ಸಮಸ್ಯೆಯಾಗಿದ್ದರೆ, ತಮ್ಮ ಮಕ್ಕಳಿಗೆ ಎಲ್ಲಿಯಾದರೂ ಸೀಟ್ ಬೇಕಿದ್ದರೆ ಕೆಬಿಜಿ ಅವರ ಬಳಿಗೆ ಬರುತ್ತಿದ್ದರು. ಅವರ ಕಚೇರಿ ಉದ್ಯಮದ ಕಚೇರಿ ಬದಲಿಗೆ ಸಾರ್ವಜನಿಕರ ಸಹಕಾರ ಕಚೇರಿಯಾಗಿತ್ತು. ಮೈಸೂರು ಭಾಗದಲ್ಲಿ ಕೊಡವರಿಗೆ ಧ್ವನಿಯಾಗಿದ್ದ ಕೆಬಿಜಿಯವರು ವ್ಯಾಪಾರಕ್ಕೆ ಕೂತಿರಲಿಲ್ಲ ಸಮಾಜ ಸೇವೆಗೆ ಕೂತಿದ್ದರು. ಕೊಡುಗೆ ಬರಿ ಹಣದಲ್ಲಿ ಅಲ್ಲ, ವ್ಯಕ್ತಿತ್ವದ ಮೂಲಕ ನೀಡುವುದು. ಮನುಷ್ಯನ ಬಳಿ ಹಣವಿದ್ದರೆ ಸಾಲದು ತೂಕ ಇರಬೇಕು. ಮುಳ್ಳಾದರೂ ಗಟ್ಟಿಯಾಗಿ ಹಿಡಿಯಬೇಕು. ಉಪ್ಪನ್ನು ತರಲು ಹೋದರೆ, ಉಪ್ಪನ್ನೇ ತರಬೇಕು ಎನ್ನುವ ಕೆಬಿಜಿಯವರ ಆದರ್ಶಗಳಿಂದಲೇ 'ಸ್ಟಾರ್ ಆಫ್ ಮೈಸೂರ್' ಇಡೀ ಭಾರತದಲ್ಲಿಯೇ ಪ್ರಭಾವಶಾಲಿ ಇಂಗ್ಲೀಷ್ ಸಂಜೆ ಪತ್ರಿಕೆಯಾಗಿ ಹಾಗೂ 'ಮೈಸೂರು ಮಿತ್ರ' ಅತೀ ಹೆಚ್ಚು ಪ್ರಸಾರವುಳ್ಳ ಕನ್ನಡ ಪ್ರಾದೇಶಿಕ ಪತ್ರಿಕೆಯಾಗಿ ಬೆಳೆಯಲು ಸಾಧ್ಯವಾಯಿತು.

- ವಿಕ್ರಂ ಮುತ್ತಣ್ಣ, ವ್ಯವಸ್ಥಾಪಕ ಸಂಪಾದಕರು, 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್'

ಇಂದಿನಿಂದ ಮಹಾರಾಜ ಟ್ರೋಫಿ ಸೀಸನ್–4 ಆರಂಭ: ಪ್ರತಿದಿನ ಎರಡು ಪಂದ್ಯಗಳು

● ವಾಸು ವಿ ಹೊಂಗನೂರು

ಮೈಸೂರು, ಆ.10– ಬಹು ನಿರೀಕ್ಷಿತ ಮಹಾರಾಜ ಟ್ರೋಫಿ ಸೀಸನ್–4 ನಾಳೆಯಿಂದ (ಆಗಸ್ಟ್–11) ಪ್ರಾರಂಭವಾಗಲಿದೆ. ಟೂರ್ನಿಯ ಉದ್ಘಾಟನಾ ಪಂದ್ಯದಲ್ಲಿ ಗುಲ್ಬರ್ಗ ಮಿಸ್ಟಿಕ್ಸ್ ಮತ್ತು ಮಂಗಳೂರು ಡ್ರ್ಯಾಗನ್ಸ್ ಎದುರಾದರೇ, ಅದೇ ದಿನ ಎರಡನೇ ಪಂದ್ಯದಲ್ಲಿ ನಮ್ಮ ಮೈಸೂರು ವಾರಿಯರ್ಸ್ ಮತ್ತು ಬೆಂಗಳೂರು ಬ್ಲಾಸ್ಟರ್ಸ್ ಮುಖಾಮುಖಿಯಾಗಲಿವೆ.



ಈ ಬಾರಿ ಟೂರ್ನಿಯಲ್ಲಿ ಪ್ರತಿದಿನ ಎರಡು ಪಂದ್ಯಗಳನ್ನು ಆಯೋಜಿಸಲಾಗಿದೆ.

ಕಳೆದ ಬಾರಿ ಬೆಂಗಳೂರಿನ ಎಂ.ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದಿದ್ದ ಸೀಸನ್‌ನಲ್ಲಿ ಮೈಸೂರು ವಾರಿಯರ್ಸ್ ತಂಡ ಚಾಂಪಿಯನ್ ಆಗಿ ಹೊರಹೊಮ್ಮಿತ್ತು. ಆರ್‌ಸಿಬಿ ವಿಜಯಯಾತ್ರೆ ವೇಳೆ ಕಾಲ್ತುಳಿತದಿಂದ 11 ಮಂದಿ ಮೃತರಾದ ಹಿನ್ನೆಲೆಯಲ್ಲಿ ಬೆಂಗಳೂರಿನಿಂದ ಮೈಸೂರಿಗೆ ಟೂರ್ನಿಯನ್ನು ಸ್ಥಳಾಂತರಿಸಲಾಗಿದೆ. ಜೊತೆಗೆ ಮೈಸೂರಿಗೆ ಎಲ್ಲಾ ಪಂದ್ಯಗಳು ಸ್ಥಳಾಂತರಗೊಂಡಿದ್ದು, ಈ ಬಾರಿ ಪ್ರೇಕ್ಷಕರಿಲ್ಲದೇ ಇಡೀ ಪಂದ್ಯಾವಳಿಯನ್ನು ಮುಚ್ಚಿದ ಕ್ರೀಡಾಂಗಣದಲ್ಲಿ ಆಯೋಜನೆ ಮಾಡುವಂತೆ ಕಟ್ಟುನಿಟ್ಟಿನ ಸೂಚನೆ ಹೊರಡಿಸಲಾಗಿದೆ. ಹಾಗಾಗಿ ಈ ಬಾರಿ ಪ್ರೇಕ್ಷಕರಿಲ್ಲದೇ ಟೂರ್ನಿ ನಡೆಯಲಿದೆ.

ಈ ಬಾರಿ 34 ಪಂದ್ಯಗಳು: ಮಹಾರಾಜ ಟ್ರೋಫಿಯ ನಾಲ್ಕನೇ ಆವೃತ್ತಿಯಲ್ಲಿ ಒಟ್ಟು 34 ಪಂದ್ಯಗಳು ನಡೆಯುತ್ತದೆ. ಅದರಲ್ಲಿ ಲೀಗ್ 30 ಪಂದ್ಯಗಳು ಮತ್ತು ಕ್ವಾಲಿಫೈ, ಎಲಿಮಿನೇಟರ್, ಫೈನಲ್ಸ್ ಪಂದ್ಯಗಳು ಸೇರಿ 34 ಪಂದ್ಯಗಳು ನಡೆಯುತ್ತದೆ.

ವೀಕ್ಷಣೆ ಹೇಗೆ: ಫ್ಯಾನ್ಸ್ ಇಲ್ಲದೇ ನಡೆಯುತ್ತಿರುವ ನಾಲ್ಕನೇ ಆವೃತ್ತಿಯ ಪಂದ್ಯಾವಳಿಗಳನ್ನು 'ಸ್ಟಾರ್ ಸ್ಪೋರ್ಟ್ಸ್' ಚಾನೆಲ್ ಮೂಲಕ ವೀಕ್ಷಿಸಬಹುದಾಗಿದೆ. ಮತ್ತು ಲೈವ್ ಸ್ಟ್ರೀಮಿಂಗ್ 'ಫ್ಯಾನ್ ಕೋಡ್' ನಲ್ಲಿ ಲಭ್ಯವಿದೆ.

ಮಹಾರಾಜ ಟ್ರೋಫಿ ಸೀಸನ್ 4ರ ವೇಳಾಪಟ್ಟಿ

ಆ.11	ಗುಲ್ಬರ್ಗ ಮಿಸ್ಟಿಕ್ಸ್ vs ಮಂಗಳೂರು ಡ್ರ್ಯಾಗನ್ಸ್ (ಮಧ್ಯಾಹ್ನ 3.15) ಬೆಂಗಳೂರು ಬ್ಲಾಸ್ಟರ್ಸ್ vs ಮೈಸೂರು ವಾರಿಯರ್ಸ್ (ಸಂಜೆ 7.15)
ಆ.12	ಹುಬ್ಬಳ್ಳಿ ಟೈಗರ್ಸ್ vs ಶಿವಮೊಗ್ಗ ಲಯನ್ಸ್ (ಮಧ್ಯಾಹ್ನ 3.15) ಮೈಸೂರು ವಾರಿಯರ್ಸ್ vs ಗುಲ್ಬರ್ಗ ಮಿಸ್ಟಿಕ್ಸ್ (ಸಂಜೆ 7.15)
ಆ.13	ಬೆಂಗಳೂರು ಬ್ಲಾಸ್ಟರ್ಸ್ vs ಹುಬ್ಬಳ್ಳಿ ಟೈಗರ್ಸ್ (ಮಧ್ಯಾಹ್ನ 3.15) ಮಂಗಳೂರು ಡ್ರ್ಯಾಗನ್ಸ್ vs ಶಿಮೊಗ್ಗ ಲಯನ್ಸ್ (ಸಂಜೆ 7.15)
ಆ.14	ಮೈಸೂರು ವಾರಿಯರ್ಸ್ vs ಮಂಗಳೂರು ಡ್ರ್ಯಾಗನ್ಸ್ (ಮಧ್ಯಾಹ್ನ 3.15) ಗುಲ್ಬರ್ಗ ಮಿಸ್ಟಿಕ್ಸ್ vs ಬೆಂಗಳೂರು ಬ್ಲಾಸ್ಟರ್ಸ್ (ಸಂಜೆ 7.15)
ಆ.15	ಶಿವಮೊಗ್ಗ ಲಯನ್ಸ್ vs ಬೆಂಗಳೂರು ಬ್ಲಾಸ್ಟರ್ಸ್ (ಮಧ್ಯಾಹ್ನ 3.15) ಹುಬ್ಬಳ್ಳಿ ಟೈಗರ್ಸ್ vs ಮಂಗಳೂರು ಡ್ರ್ಯಾಗನ್ಸ್ (ಸಂಜೆ 7.15)
ಆ.16	ಶಿವಮೊಗ್ಗ ಲಯನ್ಸ್ vs ಗುಲ್ಬರ್ಗ ಮಿಸ್ಟಿಕ್ಸ್ (ಮಧ್ಯಾಹ್ನ 3.15) ಮೈಸೂರು ವಾರಿಯರ್ಸ್ vs ಹುಬ್ಬಳ್ಳಿ ಟೈಗರ್ಸ್ (ಸಂಜೆ 7.15)
ಆ.17	ಮಂಗಳೂರು ಡ್ರ್ಯಾಗನ್ಸ್ vs ಬೆಂಗಳೂರು ಬ್ಲಾಸ್ಟರ್ಸ್ (ಮಧ್ಯಾಹ್ನ 3.15) ಮೈಸೂರು ವಾರಿಯರ್ಸ್ vs ಶಿವಮೊಗ್ಗ ಲಯನ್ಸ್ (ಸಂಜೆ 7.15)
ಆ.18	ಮೈಸೂರು ವಾರಿಯಸ್ vs ಬೆಂಗಳೂರು ಬ್ಲಾಸ್ಟರ್ಸ್ (ಮಧ್ಯಾಹ್ನ 3.15) ಗುಲ್ಬರ್ಗ ಮಿಸ್ಟಿಕ್ಸ್ vs ಹುಬ್ಬಳ್ಳಿ ಟೈಗರ್ಸ್ (ಸಂಜೆ 7.15)
ಆ.19	ಗುಲ್ಬರ್ಗ ಮಿಸ್ಟಿಕ್ಸ್ vs ಶಿವಮೊಗ್ಗ ಲಯನ್ಸ್ (ಮಧ್ಯಾಹ್ನ 3.15) ಮಂಗಳೂರು ಡ್ರ್ಯಾಗನ್ಸ್ vs ಹುಬ್ಬಳ್ಳಿ ಟೈಗರ್ಸ್ (ಸಂಜೆ 7.15)
ಆ.20	ಗುಲ್ಬರ್ಗ ಮಿಸ್ಟಿಕ್ಸ್ vs ಮೈಸೂರು ವಾರಿಯರ್ಸ್ (ಮಧ್ಯಾಹ್ನ 3.15) ಹುಬ್ಬಳ್ಳಿ ಟೈಗರ್ಸ್ vs ಬೆಂಗಳೂರು ಬ್ಲಾಸ್ಟರ್ಸ್ (ಸಂಜೆ 7.15)
ಆ.21	ಮಂಗಳೂರು ಡ್ರ್ಯಾಗನ್ಸ್ vs ಮೈಸೂರು ವಾರಿಯರ್ಸ್ (ಮಧ್ಯಾಹ್ನ 3.15) ಬೆಂಗಳೂರು ಬ್ಲಾಸ್ಟರ್ಸ್ vs ಶಿವಮೊಗ್ಗ ಲಯನ್ಸ್ (ಸಂಜೆ 7.15)
ಆ.22	ಹುಬ್ಬಳ್ಳಿ ಟೈಗರ್ಸ್ vs ಗುಲ್ಬರ್ಗ ಮಿಸ್ಟಿಕ್ಸ್ (ಮಧ್ಯಾಹ್ನ 3.15) ಶಿವಮೊಗ್ಗ ಲಯನ್ಸ್ vs ಮಂಗಳೂರು ಡ್ರ್ಯಾಗನ್ಸ್ (ಸಂಜೆ 7.15)
ಆ.23	ಹುಬ್ಬಳ್ಳಿ ಟೈಗರ್ಸ್ vs ಮೈಸೂರು ವಾರಿಯರ್ಸ್ (ಮಧ್ಯಾಹ್ನ 3.15) ಬೆಂಗಳೂರು ಬ್ಲಾಸ್ಟರ್ಸ್ vs ಗುಲ್ಬರ್ಗ ಮಿಸ್ಟಿಕ್ಸ್ (ಸಂಜೆ 7.15)
ಆ.24	ಬೆಂಗಳೂರು ಬ್ಲಾಸ್ಟರ್ಸ್ vs ಮಂಗಳೂರು ಡ್ರ್ಯಾಗನ್ಸ್ (ಮಧ್ಯಾಹ್ನ 3.15) ಶಿವಮೊಗ್ಗ ಲಯನ್ಸ್ vs ಮೈಸೂರು ವಾರಿಯರ್ಸ್ (ಸಂಜೆ 7.15)
ಆ.25	ಶಿವಮೊಗ್ಗ ಲಯನ್ಸ್ vs ಹುಬ್ಬಳ್ಳಿ ಟೈಗರ್ಸ್ (ಮಧ್ಯಾಹ್ನ 3.15) ಮಂಗಳೂರು ಡ್ರ್ಯಾಗನ್ಸ್ vs ಗುಲ್ಬರ್ಗ ಮಿಸ್ಟಿಕ್ಸ್ (ಸಂಜೆ 7.15)
ಆ.26	ಕ್ವಾಲಿಫೈಯರ್–1 (ಮಧ್ಯಾಹ್ನ 3.15) ಎಲಿಮಿನೇಟರ್ (ಸಂಜೆ 7.15)
ಆ.27	ಕ್ವಾಲಿಫೈಯರ್–2 (ಸಂಜೆ 7.15)
ಆ.28	ಫೈನಲ್ಸ್ (ಸಂಜೆ 7.15)

ಈ ಬಾರಿ ಟೂರ್ನಿಯ ಎಲ್ಲಾ ಪಂದ್ಯಗಳು ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿಯ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಆಯೋಜನೆಗೊಂಡಿವೆ.

ಸಂಭ್ರಮದ ತಳೂರು ಸರ್ಕಾರಿ ಶಾಲೆ ಹಳ್ಳಿ ಹಬ್ಬ



ಮೈಸೂರು ತಾಲೂಕು, ಜಯಪುರ ಹೋಬಳಿಯ ತಳೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ನವೀಕರಣ ಸೇರಿದಂತೆ ಮುಂದಿನ ಅಭಿವೃದ್ಧಿ ಕಾರ್ಯಗಳಲ್ಲಿ ಸಾರ್ವಜನಿಕರ ಸಹಕಾರ ಬೆಸೆಯುವ ಉದ್ದೇಶದೊಂದಿಗೆ ಆಯೋಜಿಸಿದ್ದ ಹಳ್ಳಿಹಬ್ಬವನ್ನು ದೇಸಿ ಸೊಗಡಿನ ದವಸ ಧಾನ್ಯ ಹಾಗೂ ಬಾಳೆ ಗೊನೆ ಇಟ್ಟು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಲಾಯಿತು.

ಮೈಸೂರು, ಆ.10– ತಾಲೂಕಿನ ಜಯಪುರ ಹೋಬಳಿ ತಳೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಹಳ್ಳಿ ಹಬ್ಬ ಹಾಗೂ ಕಟ್ಟಡ ನವೀಕರಣ ಕಾಮಗಾರಿಯ ಭೂಮಿ ಪೂಜೆ ಸಂಭ್ರಮದಿಂದ ನೆರವೇರಿತು.

ಟಿವಿಎಸ್ ಕಂಪನಿಯ ಶ್ರೀನಿವಾಸನ್ ಸರ್ವಿಸಸ್ ಟ್ರಸ್ಟ್, ಸಿಂಧುವಳ್ಳಿ ಮತ್ತು ತಳೂರು ಗ್ರಾಮಸ್ಥರ ಸಹಯೋಗದಲ್ಲಿ 23 ಲಕ್ಷ ರೂ. ಅಂದಾಜು ಮೊತ್ತದಲ್ಲಿ ಕೈಗೊಂಡಿರುವ ಶಾಲಾ ಕಟ್ಟಡ ನವೀಕರಣ ಕಾಮಗಾರಿಗೆ ಗಣ್ಯರು ಗುದ್ದಲಿಪೂಜೆ ನೆರವೇರಿಸಿದ ಬಳಿಕ ಶ್ರೀನಿವಾಸನ್ ಸರ್ವಿಸಸ್ ಟ್ರಸ್ಟ್‌ನ ಹಿರಿಯ ನಿರ್ದೇಶಕ ಮೋಹನ್ ಕಾರ್ನಾಡ್, ಶಾಲೆಯ ಹಳ್ಳಿಹಬ್ಬಕ್ಕೆ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಮೈಸೂರು ಗ್ರಾಮಾಂತರ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಪ್ರಕಾಶ್ ಮಾತನಾಡಿ, ಮಹಾನ್ ಸಾಧನೆ ಮಾಡಿದವರಲ್ಲಿ ಬಹುತೇಕರು ಸರ್ಕಾರಿ ಶಾಲೆಯಲ್ಲಿಯೇ ಓದಿದವರಾಗಿದ್ದಾರೆ. ಸರ್ಕಾರಿ ಶಾಲೆಗಳ ನವೀಕರಣ ಹಾಗೂ ಹೊಸ ಕಟ್ಟಡ ನಿರ್ಮಾಣಕ್ಕೆ ಟಿವಿಎಸ್ ಮೋಟಾರ್ ಕಂಪನಿಯ ಸಿಎಸ್‌ಆರ್ ನಿಧಿಯಿಂದ ಅನುದಾನ ನೀಡುತ್ತಿರುವುದು ಶ್ಲಾಘನೀಯ. ಸರ್ಕಾರಿ ಶಾಲೆಗಳ ಬೆಳವಣಿಗೆಗೆ ಹೀಗೆ ಖಾಸಗಿ ಸಂಘ ಸಂಸ್ಥೆಗಳು, ದಾನಿಗಳು ನೆರವಾಗುವುದು ಬಹಳ ಮುಖ್ಯ. ಪೋಷಕರು ತಮ್ಮ ಮಕ್ಕಳನ್ನು ಉಚಿತ ಶಿಕ್ಷಣದ ಜೊತೆಗೆ ಉತ್ತಮ ಸೌಲಭ್ಯ ಹೊಂದಿರುವ ಸರ್ಕಾರಿ ಶಾಲೆಗೆ ದಾಖಲಿಸಬೇಕು ಎಂದು ಮನವಿ ಮಾಡಿದರು.

ಇದೇ ವೇಳೆ ಪರಿಸರ ಪ್ರೇಮಿ ಮಹದೇವಪ್ಪ ಅವರನ್ನು ಸನ್ಮಾನಿಸಲಾಯಿತು. ವಿದ್ಯಾರ್ಥಿಗಳು, ಮಹಿಳಾ ಸಂಘ ಸೇರಿದಂತೆ ವಿವಿಧ ಸಂಘ ಸಂಸ್ಥೆಗಳ ಸದಸ್ಯರಿಗೆ ನಡೆಸಲಾಗಿದ್ದ ದೇಸಿ ಆಟ ಕ್ರೀಡಾಕೂಟದಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ತಳೂರು ಗ್ರಾಮಸ್ಥರು ಮತ್ತು ಸಂಘ ಸಂಸ್ಥೆಗಳ ಮಹಿಳಾ ಪ್ರತಿನಿಧಿಗಳು ಶಾಲಾ ಕಟ್ಟಡ ನವೀಕರಣಕ್ಕಾಗಿ ಶ್ರೀನಿವಾಸನ್ ಸರ್ವಿಸಸ್ ಟ್ರಸ್ಟ್‌ಗೆ 1.25 ಲಕ್ಷ ರೂ. ದೇಣಿಗೆಯನ್ನು ಡಿಡಿ ಮೂಲಕ ನೀಡಿದರು. ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು.

ಹಬ್ಬದ ಸಡಗರ: ಈ ಕಾರ್ಯಕ್ರಮ ಹಿನ್ನೆಲೆಯಲ್ಲಿ ಗ್ರಾಮದಲ್ಲಿ ಹಬ್ಬದ ಸಡಗರ ಮನೆ ಮಾಡಿತ್ತು. ತಳೂರು ಹಾಗೂ ಸುತ್ತಮುತ್ತಲಿನ ಗ್ರಾಮಗಳ ಮಹಿಳಾ ಸ್ವಸಹಾಯ ಸಂಘಗಳ ಮಹಿಳೆಯರು ಗಣ್ಯರಿಗೆ ಪೂರ್ಣಕುಂಭ ಸ್ವಾಗತ ಕೋರಿದರು. ಅವರನ್ನು ನಂದಿಧ್ವಜ, ಡೋಲು, ತಮಟೆ ವಾದ್ಯ ಮೇಳದೊಂದಿಗೆ ಗಣ್ಯರನ್ನು ಎತ್ತಿನ ಗಾಡಿಯಲ್ಲಿ ಮೆರವಣಿಗೆ ಮೂಲಕ ವೇದಿಕೆ ಬಳಿ ಕರೆತರಲಾಯಿತು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದವರಿಗೆ ಸಿಹಿ ಭೋಜನ ಏರ್ಪಡಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಶ್ರೀನಿವಾಸನ್ ಸರ್ವಿಸಸ್ ಟ್ರಸ್ಟ್ ಕ್ಷೇತ್ರ ನಿರ್ದೇಶಕರಾದ ಶಶಿಕಾಂತ್, ಪ್ರೇಮ ಕುಮಾರ್, ಪೃಥ್ವಿರಾಜ್, ದೂರ ಗ್ರಾಮ ಪಂಚಾಯಿತಿ ಅಧ್ಯಕ್ಷ ನಂಜುಂಡಸ್ವಾಮಿ, ಉಪಾಧ್ಯಕ್ಷೆ ಶಿಲ್ಪಾ, ಪ್ರಗತಿಪರ ರೈತರಾದ ತಳೂರು ಸೋಮಶೇಖರ್, ಶಿವಕುಮಾರ್, ಶಾಲೆಯ ಮುಖ್ಯಶಿಕ್ಷಕಿ ಕೆ.ಆರ್.ಹೇಮ ಲತಾ, ಹಿರಿಯ ವಿದ್ಯಾರ್ಥಿ ಸಂಘದ ಅಧ್ಯಕ್ಷ ಚಂದ್ರಶೇಖರ್, ಎಸ್‌ಡಿಎಂಸಿ ಅಧ್ಯಕ್ಷ ಕೆಂಪರಾಜು, ಗ್ರಾಪಂ ಸದಸ್ಯರಾದ ಮಹೇಶ್, ಮಹದೇವ ಸ್ವಾಮಿ, ರವಿಕುಮಾರ್ ಹಾಗೂ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು, ಗ್ರಾಮಸ್ಥರು ಭಾಗವಹಿಸಿದ್ದರು.

ಆರೋಗ್ಯ ತಪಾಸಣಾ ಶಿಬಿರ




ಮೈಸೂರು ಇಟ್ಟಿಗೆಗೂಡಿನ ಶ್ರೀ ವಿಶ್ವಕರ್ಮ ರಾಮಮಂದಿರ, ಲಯನ್ ಕ್ಲಬ್ ಆಫ್ ಮೈಸೂರು ಚಾಮುಂಡಿ ಸಂಸ್ಥೆ, ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಸಹಯೋಗದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿತ್ತು. ಶಾಸಕ ಟಿ.ಎಸ್.ಶ್ರೀವತ್ಸ, ಸಂಸ್ಥೆಯ ಅಧ್ಯಕ್ಷ ಕೆ.ಪುರುಷೋತ್ತಮ್, ಲಯನ್ ಸಂಸ್ಥೆಯ ಲಯನ್ ರವಿಕುಮಾರ್, ಕಾರ್ಯದರ್ಶಿ ಎಂ.ಎಸ್.ರಾಜಾ ರಾಮ್, ಎಸ್.ರಮೇಶ್, ಏಕಾಂಬರಂ ಕೆ.ಕೃಷ್ಣ, ಶೇಖರ್, ಲಯನ್.ಲೋಕೇಶ ಮತ್ತಿತರರು ಭಾಗವಹಿಸಿದ್ದರು.

ಹುಟ್ಟುಹಬ್ಬದ ಶುಭಾಶಯ



ಮಾಜಿ ಸಚಿವ ಸಾ.ರಾ.ಮಹೇಶ್ ಅವರ 59ನೇ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರಿಗೆ ಮಾಜಿ ಉಪಮೇಯರ್ ವಿ.ಶೈಲೇಂದ್ರ ಶ್ರೀಕೃಷ್ಣನ ವಿಗ್ರಹ ನೀಡಿ, ಶುಭಾಶಯ ಕೋರಿದರು. ಈ ವೇಳೆ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಜಿಲ್ಲಾ ಪಂಚಾಯ್ತಿ ಮಾಜಿ ಅಧ್ಯಕ ದ್ವಾರಕೀಶ್, ಪಾಲಿಕೆಯ ಮಾಜಿ ಸದಸ್ಯ ಪ್ರಶಾಂತ್ ಗೌಡ, ವಿ.ಶ್ರೀನಿವಾಸ್ ಪ್ರಸಾದ್ ಅಭಿಮಾನಿ ಬಳಗದ ಅಧ್ಯಕ್ಷ ಎಂರಾಜಕುಮಾರ್, ಅಶೋಕಪುರಂ ಮಹೇಶ್, ಟಿ.ಕೆ.ಲೇಔಟ್ ಬಸವರಾಜು ಮತ್ತಿತರರಿದ್ದರು.



ಮಾಜಿ ಸಚಿವ ಸಾ.ರಾ.ಮಹೇಶ್ ಅವರಿಗೆ ಜೆಡಿಎಸ್ ರಾಜ್ಯ ವಕ್ತಾರರೂ ಆದ ವಕೀಲ ಎನ್.ಆರ್.ರವಿಚಂದ್ರೇಗೌಡ ಹುಟ್ಟುಹಬ್ಬದ ಶುಭಾಶಯ ಕೋರಿ, ಅಭಿನಂದಿಸಿದರು.

ಇಂದು 'ಶ್ರೀ ಸಂದೇಶ್ ನಾಗರಾಜು–80' ಪೂರ್ವಭಾವಿ ಸಭೆ



ಮೈಸೂರು, ಆ.10– ವಿಧಾನಪರಿಷತ್ ಮಾಜಿ ಸದಸ್ಯ ಸಂದೇಶ್ ನಾಗರಾಜು ಅವರು ಉದ್ಯಮಿಯಾಗಿ, ರಾಜಕಾರಣಿಯಾಗಿ, ಚಿತ್ರ ನಿರ್ಮಾಪಕರಾಗಿ, ಸಮಾಜ ಸೇವಕರಾಗಿ ದಶಕಗಳಿಂದ ತಮ್ಮದೇ ಛಾಪು ಮೂಡಿಸುವುದರೊಂದಿಗೆ 80 ವಸಂತಗಳನ್ನು ಪೂರೈಸುತ್ತಿರುವ ಹಿನ್ನೆಲೆಯಲ್ಲಿ ಆ.31ರಂದು 'ಶ್ರೀ ಸಂದೇಶ್ ನಾಗರಾಜು–80' ಬೃಹತ್ ಸಮಾರಂಭ ನಡೆಸಲು ಉದ್ದೇಶಿಸಲಾಗಿದ್ದು, ಈ ಸಂಬಂಧ ಸೋಮವಾರ(ಆ.11) ಸಂಜೆ 4ಕ್ಕೆ ಕಾಸ್ಮೋಪಾಲಿಟನ್ ಕ್ಲಬ್‌ನ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ಕರೆಯಲಾಗಿದೆ ಎಂದು ಸಂದೇಶ ಅಭಿನಂದನಾ ಸಮಿತಿಯ ಸಂಚಾಲಕ ವಿಕ್ರಾಂತ್ ಪಿ.ದೇವೇಗೌಡ ತಿಳಿಸಿದ್ದಾರೆ.

ಸಂದೇಶ್ ನಾಗರಾಜು ಅವರಿಗೆ ಶುಭಕೋರಲು ಆ.31ರಂದು ಆಯೋಜಿಸಲಾಗುವ ಸಮಾರಂಭಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರಾದ ಹೆಚ್.ಸಿ.ಮಹದೇವಪ್ಪ, ಭೈರತಿ ಸುರೇಶ್, ಜಮೀರ್ ಅಹಮದ್ ಖಾನ್, ಚಲುವರಾಯಸ್ವಾಮಿ, ಕೆ.ವೆಂಕಟೇಶ್ ಸೇರಿದಂತೆ ಅನೇಕ ಸಚಿವರು, ಜಿಲ್ಲೆಯ ಎಲ್ಲಾ ಜನಪ್ರತಿನಿಧಿಗಳನ್ನೂ ಆಹ್ವಾನಿಸಲಾಗುತ್ತಿದ್ದು, ಕಾರ್ಯಕ್ರಮ ಸಂಬಂಧ ಪೂರ್ವಭಾವಿ ಸಭೆಯಲ್ಲಿ ಸಲಹೆ ನೀಡುವಂತೆ ಅವರು ಮನವಿ ಮಾಡಿದ್ದಾರೆ.

ಸಂತಾನಾಕಾಂಕ್ಷಿ ದಂಪತಿಗಳಲ್ಲಿ ವಿಶ್ವಾಸ ತುಂಬಿದ ಮಣಿಪಾಲ್ ಆಸ್ಪತ್ರೆ

ಮೈಸೂರು, ಆ.10(ಎಸ್‌ಬಿಡಿ)– ಸಂತಾನಾಕಾಂಕ್ಷಿ ದಂಪತಿಗಳಲ್ಲಿ ವಿಶ್ವಾಸ ತುಂಬುವ ಉದ್ದೇಶದೊಂದಿಗೆ ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಭಾನುವಾರ ವಿಶೇಷ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.



ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಭಾನುವಾರ ಸಂತಾನಾಕಾಂಕ್ಷಿ ದಂಪತಿಗಳಿಗೆ ಏರ್ಪಡಿಸಿದ್ದ ವಿಶೇಷ ಕಾರ್ಯಕ್ರಮದಲ್ಲಿ ಡಾ.ನಿವೇದಿತಾ ಶೆಟ್ಟಿ ಮಾತನಾಡಿದರು.

'ದಿ ಬಿಗಿನಿಂಗ್ ಆಫ್ ಅಸ್–ಎ ಸೆಲೆಬ್ರೇಷನ್ ಆಫ್ ಹೋಪ್ ಅಂಡ್ ಜಾಯ್(ನಮ್ಮ ಮೊದಲ ಹೆಜ್ಜೆ–ಭರವಸೆ ಮತ್ತು ಸಂತೋಷದ ಆಚರಣೆ) ಶೀರ್ಷಿಕೆಯಡಿ ಏರ್ಪಡಿಸಿದ್ದ ಸ್ಫೂರ್ತಿದಾಯಕ ಕಾರ್ಯಕ್ರಮದಲ್ಲಿ ಪೋಷಕರಾಗುವ ಇಚ್ಛೆಯುಳ್ಳವರಿಗೆ ಭರವಸೆ ಮೂಡಿಸುವುದರ ಜೊತೆಗೆ ವೈಜ್ಞಾನಿಕ ಮಾಹಿತಿಯನ್ನು ನೀಡಲಾಯಿತು.

ಆಸ್ಪತ್ರೆಯ ನಿರ್ದೇಶಕರೂ ಆದ ಸಂತಾನೋತ್ಪತ್ತಿ ವೈದ್ಯಕೀಯ ವಿಭಾಗ (ಐವಿಎಫ್)ದ ಸಲಹೆಗಾರರಾದ ಡಾ.ನಿವೇದಿತಾ ಶೆಟ್ಟಿ ಅವರು, ಬಂಜೆತನದ ಸವಾಲುಗಳು ಮತ್ತು ನವೀನ ಸಂತಾನೋತ್ಪತ್ತಿ ತಂತ್ರಗಳಾದ ಎಂಬ್ರಿಯೋ ಪೂಲಿಂಗ್, ಬ್ಲಾಸ್ಟೋಸಿಸ್ಟ್ ಟ್ರಾನ್ಸ್‌ಫರ್ ಮತ್ತು ಪ್ರೀ–ಇಂಪ್ಲಾಂಟೇಷನ್ ಜೆನೆಟಿಕ್ ಟೆಸ್ಟಿಂಗ್ (PGT) ಕುರಿತು ವಿವರಿಸಿದರು.

ಎಂಬ್ರಿಯೋ ಪೂಲಿಂಗ್ ವಿಧಾನವು ಹಲವಾರು ಐವಿಎಫ್ ಚಕ್ರಗಳಿಂದ ಭ್ರೂಣಗಳನ್ನು ರಚಿಸಿ ಸಂಗ್ರಹಿಸುವ ಪ್ರಕ್ರಿಯೆಯಾಗಿದ್ದು, ಈ ತಂತ್ರದಿಂದ ಉತ್ತಮ ಗುಣಮಟ್ಟದ ಭ್ರೂಣಗಳ ಆಯ್ಕೆ ಹಾಗೂ ಯಶಸ್ಸಿನ ಸಾಧ್ಯತೆಯನ್ನು ಹೆಚ್ಚಿಸಬಹುದಾಗಿದೆ. ಬ್ಲಾಸ್ಟೋಸಿಸ್ಟ್ ಟ್ರಾನ್ಸ್‌ಫರ್ ಎನ್ನುವುದು ಗರ್ಭಾಶಯದಲ್ಲಿ ಭ್ರೂಣ ನಿಲ್ಲುವಿಕೆ ಸಾಧ್ಯತೆಯನ್ನು ಹೆಚ್ಚಿಸಲು ವಿನ್ಯಾಸಗೊಳಿಸಲಾದ ಒಂದು ಸುಧಾರಿತ ತಂತ್ರವಾಗಿದ್ದು, ಈ ಪ್ರಕ್ರಿಯೆಯಲ್ಲಿ 5 ಅಥವಾ 6ನೇ ದಿನದ ಬ್ಲಾಸ್ಟೋಸಿಸ್ಟ್ ಹಂತದಲ್ಲಿರುವ ಭ್ರೂಣಗಳನ್ನು ವರ್ಗಾಯಿಸಲಾಗುತ್ತದೆ. ಇನ್ನು ಪ್ರೀ–ಇಂಪ್ಲಾಂಟೇಷನ್ ಜೆನೆಟಿಕ್ ಟೆಸ್ಟಿಂಗ್ ಗರ್ಭಪಾತದ ಸಾಧ್ಯತೆಯನ್ನು ಕಡಿಮೆ ಮಾಡುವ, ಮಗುವಿನಲ್ಲಿ ಅನುವಂಶಿಕ ಸಮಸ್ಯೆಗಳನ್ನು ಗುರುತಿಸುವ ಸುಧಾರಿತ ಹಾಗೂ ನಿಖರವಾದ ಜೆನೆಟಿಕ್ ಸ್ಕ್ರೀನಿಂಗ್ ವಿಧಾನವಾಗಿದೆ ಎಂದು ವಿವರಿಸಿದರು.

ವಿಶೇಷ ಪ್ಯಾಕೇಜ್ ಘೋಷಣೆ

ಕಾರ್ಯಕ್ರಮದಲ್ಲಿ ಸುಧಾರಿತ ಸಂತಾನೋತ್ಪತ್ತಿ ಚಿಕಿತ್ಸೆಗಳ ಬಗ್ಗೆ ಜಾಗೃತಿ ಮೂಡಿಸುವುದು ಹಾಗೂ ಅತ್ಯಾಧುನಿಕ ಚಿಕಿತ್ಸೆಗಳ ಪ್ರಯೋಜನ ಪಡೆಯಲು ಅನುವಾಗುವ ನಿಟ್ಟಿನಲ್ಲಿ ಮೈಸೂರಿನ ಮಣಿಪಾಲ್ ಆಸ್ಪತ್ರೆ ಹೊಂದಿರುವ ಬದ್ಧತೆಯನ್ನು ಮನದಟ್ಟು ಮಾಡಿಕೊಡುವುದರ ಜೊತೆಗೆ ಹೊಸ ನೋಂದಣಿಗಳಿಗೆ ಅಕ್ಟೋಬರ್ 31ರವರೆಗೆ ಆರಂಭಿಕ ಸ್ಕ್ರೀನಿಂಗ್ ಮತ್ತು ಇಮೇಜಿಂಗ್ ಪರೀಕ್ಷೆಗಳಿಗೆ ರಿಯಾಯ್ತಿ ನೀಡುವ ವಿಶೇಷ ಪ್ಯಾಕೇಜ್ ಘೋಷಿಸಲಾಯಿತು.

ಈ ಮೂರು ವಿಧಾನಗಳು ಯಶಸ್ಸಿನ ಪ್ರಮಾಣವನ್ನು ಹೆಚ್ಚಿಸಿ, ಉತ್ತಮ ಗರ್ಭಧಾರಣೆಯ ಫಲಿತಾಂಶ ನೀಡುತ್ತವೆ. ಪ್ರತಿ ದಂಪತಿಯ ವೈದ್ಯಕೀಯ ಮತ್ತು ಭಾವನಾತ್ಮಕ ಅಗತ್ಯಗಳಿಗೆ ಅನುಗುಣವಾಗಿ ಚಿಕಿತ್ಸೆ ನೀಡಲು ಇವು ನೆರವಾಗುತ್ತವೆ. ಗರ್ಭಧಾರಣೆ ಸಾಧ್ಯತೆಯ ಸುಧಾರಣೆ ಜೊತೆಗೆ ವಿಫಲ ಪ್ರಯತ್ನಗಳಿಂದ ಉಂಟಾಗುವ ಮಾನಸಿಕ ಮತ್ತು ದೈಹಿಕ ಒತ್ತಡವನ್ನು ನಿವಾರಿಸುವ ಮೂಲಕ ದಂಪತಿಗಳಿಗೆ ತಮ್ಮ ಕನಸಿನ ಕುಟುಂಬವನ್ನು ರಚಿಸಲು ಉತ್ತಮ ಅವಕಾಶವನ್ನು ಒದಗಿಸುತ್ತವೆ ಎಂದು ತಿಳಿಸಿದರು.

ನಮ್ಮ ಪ್ರಯತ್ನಗಳಿಗೆ ಭರವಸೆ ಅಡಿಪಾಯವಾಗಿದ್ದರೂ, ಇದನ್ನು ಸಾಕಾರಗೊಳಿಸುವ ಸೇತುವೆ ವಿಜ್ಞಾನವಾಗಿದೆ. ಈ ನಿಟ್ಟಿನಲ್ಲಿ ಮೈಸೂರಿನ ಮಣಿಪಾಲ್ ಆಸ್ಪತ್ರೆಯು ಪೋಷಕರಾಗಲು ಬಯಸುವ ಪ್ರತಿ ದಂಪತಿಗೂ ನೆರವಾಗುತ್ತಿದೆ. ಪ್ರತಿ ದಂಪತಿಯೂ ಪೋಷಕರಾಗಲು ಅರ್ಹರು ಎಂಬ ವಿಶ್ವಾಸದೊಂದಿಗೆ ಅಗತ್ಯ ಮಾರ್ಗದರ್ಶನ ಹಾಗೂ ಪರಿಣಾಮಕಾರಿ ಚಿಕಿತ್ಸೆ ಕಲ್ಪಿಸಿದೆ ಎಂದು ಹೇಳಿದರು.

ಇದೇ ವೇಳೆ ದಂಪತಿಗಳಿಗಾಗಿ ವಿವಿಧ ಕ್ರಿಯಾತ್ಮಕ ಆಟಗಳು ಹಾಗೂ ಕಾರ್ಯಾಗಾರ ನಡೆಸಲಾಯಿತು. ಹಲವು ದಂಪತಿಗಳು ಅಭಿಪ್ರಾಯ ಹಂಚಿಕೊಳ್ಳುವ ಮೂಲಕ ಸಂತಾನಾಕಾಂಕ್ಷಿಗಳಲ್ಲಿ ವಿಶ್ವಾಸ ತುಂಬಿದರು.

ನಕ್ಕರೆ ಅದೇ ಸ್ವರ್ಗ

ಹೆಂಡತಿ : ರೀ ನಾನು ಸತ್ತೋದ್ರೆ ಏನ್ರಿ ಮಾಡ್ತೀರಾ?
ಗಂಡ : ನಾನು ಸತ್ತೋಗ್ತಿನಿ...
ಹೆಂಡತಿ : ಯಾಕ್ರಿ...?
ಗಂಡ : ಯಾವನಿಗೊತ್ತು ಖುಷಿಗೆ ಹಾರ್ಟ್ ಅಟ್ಯಾಕ್ ಆದ್ರೂ ಆಗಬಹುದು.

ಮೈಸೂರು ಮಿತ್ರ
ಸೋಮವಾರ, 11 ಆಗಸ್ಟ್ 2025
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಗೋಡೆಗಳಲ್ಲಿ ಬಿರುಕು ಬಿಟ್ಟರೆ ಗೋಡೆಗಳು ಬಿದ್ದು ಬಿಡುತ್ತವೆ.
ಸಂಬಂಧಗಳಲ್ಲಿ ಬಿರುಕು ಬಿಟ್ರೆ ಗೋಡೆಗಳು ಹುಟ್ಟಿಕೊಳ್ಳುತ್ತವೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕುರುಡನಿಗೆ ದೀಪ ಬೇಡವಾದರೆ ಮನೆ ಮಂದಿಗೆಲ್ಲಾ ದೀಪ ಬೇಡವೆ?

ನಿಮ್ಮ ಪತ್ರಗಳು

ಗಣೇಶೋತ್ಸವ ರಾಜ್ಯದಲ್ಲೂ ಉತ್ಸವವಾಗಲಿ

ಮಾನ್ಯರೆ,

1893ರಲ್ಲಿ ಲೋಕಮಾನ್ಯ ಬಾಲ ಗಂಗಾಧರ ತಿಲಕರು, ಸಾಮಾಜಿಕ ಏಕತೆ, ರಾಷ್ಟ್ರೀಯತೆ, ಸ್ವಾತಂತ್ರ್ಯ ಹೋರಾಟಕ್ಕೆ ಸ್ಪೂರ್ತಿ, ಆತ್ಮ ಗೌರವ ಮತ್ತು ಭಾಷೆಯ ಬಗೆಗಿನ ಹೆಮ್ಮೆಯನ್ನು ಪ್ರತಿಬಿಂಬಿಸುವ ಸಲುವಾಗಿ ಮಹಾರಾಷ್ಟ್ರದಲ್ಲಿ ಆರಂಭಿಸಿದ ಗಣೇಶ ಹಬ್ಬವು 132ನೇ ವರ್ಷಕ್ಕೆ ಕಾಲಿಟ್ಟಿದೆ. ಮಹಾರಾಷ್ಟ್ರ ಸರ್ಕಾರವು ಇದೀಗ ಗಣೇಶೋತ್ಸವವನ್ನು ಇದೇ 10.7.25ರಂದು ಆದೇಶ ಹೊರಡಿಸಿ, ಅಧಿಕೃತವಾಗಿ ರಾಜ್ಯದ ಉತ್ಸವ ಎಂದು ಘೋಷಣೆ ಮಾಡಿದೆ. ಅಷ್ಟೇ ಅಲ್ಲದೆ, ಗಣೇಶೋತ್ಸವಕ್ಕೆ ಮೂಲ ಸೌಕರ್ಯ ಮತ್ತು ಪೊಲೀಸ್ ಭದ್ರತೆ ಒದಗಿಸಲಾಗುವುದು ಹಾಗೂ ಪುಣೆ, ಮುಂಬೈ ಸೇರಿದಂತೆ ರಾಜ್ಯದ ನಗರಗಳಲ್ಲಿ ಅದ್ದೂರಿ ಆಚರಣೆಗಳಿಗೆ ಆರ್ಥಿಕ ನೆರವನ್ನೂ ಒದಗಿಸಲಾಗುವುದು ಎಂದು ಅಲ್ಲಿನ ಸಂಸ್ಕೃತಿ ಸಚಿವ ಆಶೀಶ್ ಶೆಲಾರ್ ವಿಧಾನಸಭೆಯಲ್ಲಿ ತಿಳಿಸಿದ್ದಾರೆ. ಗಣೇಶೋತ್ಸವ ಕೇವಲ ಆಚರಣೆಯಷ್ಟೇ ಅಲ್ಲದೆ ಮಹಾರಾಷ್ಟ್ರದ ಸಾಂಸ್ಕೃತಿಕ ಹೆಮ್ಮೆ ಮತ್ತು ಅಸ್ಮಿತೆ ಎಂದು ಹೇಳಿದ್ದಾರೆ.

ಗಣೇಶೋತ್ಸವವನ್ನು ದೇಶದೆಲ್ಲೆಡೆ ಆಚರಿಸಲಾಗುತ್ತದೆ. ಕರ್ನಾಟಕದಲ್ಲೂ ರಾಜ್ಯದಾದ್ಯಂತ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಅಷ್ಟೇ ಅಲ್ಲದೆ ಪ್ರತಿ ಊರು, ನಗರದ ಪ್ರತಿ ಬಡಾವಣೆಗಳಲ್ಲೂ ಗಣೇಶೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಸರ್ಕಾರ, ಪೊಲೀಸ್‌ರಿಂದ ಅನುಮತಿ ಪಡೆಯಬೇಕು, ಇಷ್ಟೇ ದಿನ ಪೂಜಿಸಬೇಕು, ಹೀಗೇ ವಿಸರ್ಜನೆ ಮಾಡಬೇಕು ಎಂದು ನಿರ್ಬಂಧಗಳನ್ನು ವಿಧಿಸುತ್ತದೆ.

ಇದು ಕೂಡ ರಾಜ್ಯದ ಉತ್ಸವವಾಗಿದೆ. ಆದ್ದರಿಂದ ಕರ್ನಾಟಕ ಸರ್ಕಾರ ಕೂಡ ಮಹಾರಾಷ್ಟ್ರದಂತೆ ಗಣೇಶೋತ್ಸವವನ್ನು ರಾಜ್ಯದ ಉತ್ಸವ ಎಂದು ಘೋಷಣೆ ಮಾಡಿ ಜಿಲ್ಲಾ ಮಟ್ಟದಲ್ಲಿ ಆಚರಿಸಲು ಹಣಕಾಸು ನೆರವು ನೀಡುವ ಘೋಷಣೆ ಮಾಡಲಿ. ಸರ್ಕಾರ ಇದಕ್ಕಾಗಿ ಪ್ರತ್ಯೇಕ ಹಣ ಬಿಡುಗಡೆ ಮಾಡದಿದ್ದರೂ, ಮುಜರಾಯಿ ಇಲಾಖೆಯ ದೇವಸ್ಥಾನಗಳ ಆದಾಯದಲ್ಲಿ ಹಣ ನೀಡುವ ವ್ಯವಸ್ಥೆಯಾಗಲಿ. ಇದನ್ನು ಜಾರಿಗೆ ತಂದ ಶ್ರೇಯಸ್ಸು ಈಗಿನ ಸರ್ಕಾರದ್ದಾಗಲಿ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.


ಮೈಸೂರಲ್ಲೊಬ್ಬರು ಜನಪರ ಅಧಿಕಾರಿ

ಮಾನ್ಯರೆ,

ಶ್ರೀ ಚಂದ್ರಶೇಖರ್, ಹೂಟಗಳ್ಳಿ ನಗರಸಭೆಯ ಪೌರಾಯುಕ್ತರು. ಇವರು ಮೈಸೂರಿನ ಜನಪರ ಅಧಿಕಾರಿ, ಈ ಕಚೇರಿಗೆ ಯಾರೇ ಒಬ್ಬ ಸಾಮಾನ್ಯ ವ್ಯಕ್ತಿ ಸಮಸ್ಯೆ ಹೊತ್ತು ಇವರನ್ನು ಸಂಪರ್ಕಿಸಿದರೆ, ನಾನು ಅಧಿಕಾರಿ ಎಂಬ ಯಾವ ಹಮ್ಮು–ಬಿಮ್ಮು ಇಲ್ಲದೆ ಸಾಮಾನ್ಯರಲ್ಲಿ ಸಾಮಾನ್ಯರಂತೆ ಸ್ಪಂದಿಸುವ ರೀತಿ ಅಪಾರ ಮೆಚ್ಚುಗೆಗೆ ಪಾತ್ರವಾಗಿದೆ. ಈ ಭಾಗದ ನಿವಾಸಿಗಳಿಗೆ ಅತ್ಯಾಪ್ತವಾಗಿರುವ ಒಬ್ಬ ಅಧಿಕಾರಿ ಎಂದರೆ ತಪ್ಪಾಗಲಾರದು. ಬಂದ ಕೆಲವೇ ದಿನಗಳಲ್ಲೇ ಜನ ಮನ್ನಣೆ ಗಳಿಸಿರುವ ಅಧಿಕಾರಿಯಾಗಿದ್ದಾರೆ. ಗಂಟೆಗಟ್ಟಲೆ–ದಿನಗಟ್ಟಲೆ ಕಾದರೂ ಕೆಲವು ಅಧಿಕಾರಿಗಳ ದರ್ಶನ ಸಿಗುವುದೇ ಕಷ್ಟ ಅಂತಹದುರಲ್ಲಿ ಈ ಅಧಿಕಾರಿ ಹೊರಗೆ ಕೂತಿರುವವರನ್ನು ಕರೆದು ಏನು ಕೆಲಸ ಆಗಬೇಕು, ಏನು ಸಮಸ್ಯೆ ಇದೆ ಎಂದು ಕೇಳಿ, ಇಷ್ಟು ದಿನಗಳಲ್ಲಿ ಇವರ ಸಮಸ್ಯೆ ಬಗೆಹರಿಸಿ ಎಂದು ತಾಕೀತು ಮಾಡುತ್ತಾರೆ. ಇವರ ಸಾಮಾಜಿಕ ಕಳಕಳಿ ಜನಪರ ಸೇವೆ ನಿಜಕ್ಕೂ ಶ್ಲಾಘನೀಯ. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವನ್ನೇ ಮುಚ್ಚುವ ಸ್ಥಿತಿಗೆ ತಂದ ಅಧಿಕಾರಿಗಳನ್ನು ನೋಡಿದ್ದೇವೆ. ಅಷ್ಟೆಲ್ಲಾ ಅಕ್ರಮವೆಸಗಿದ್ದ ಅಧಿಕಾರಿಗಳ ಮೇಲೆ ಯಾವುದೇ ಕ್ರಮ ಆಗದಿರುವುದು ಯಕ್ಷಪ್ರಶ್ನೆಯಾಗಿದೆ. ಇಂತಹ ಅಧಿಕಾರಿಗಳ ನಡುವೆ ಇಂತಹ ಅಧಿಕಾರಿ ಇರುವುದು ಮೈಸೂರಿನ ಹೆಮ್ಮೆ. ಮೈಸೂರಿಗೆ ಇಂತಹ ಒಬ್ಬ ಜನಪರ ಅಧಿಕಾರಿಯನ್ನು ಕೊಟ್ಟ ಸರ್ಕಾರಕ್ಕೆ ನನ್ನದೊಂದು ಸಲಾಂ.

–ಬಿ.ಜಿ.ರಂಗೇಗೌಡ, ಮೈಸೂರು

ಗಿಡಗಂಟಿ ತೆರವುಗೊಳಿಸಿ



ಮಾನ್ಯರೆ,

ಹೆಚ್.ಡಿ.ಕೋಟೆ ತಾಲೂಕಿನ ಬಿದರಹಳ್ಳಿ ಗ್ರಾಪಂ ವ್ಯಾಪ್ತಿಗೆ ಸೇರಿರುವ ಬಿದರಹಳ್ಳಿ ಮೂಲಕ ಹಾದು ಹೋಗುವ ತೆರಣಿಮುಂಟಿ–ಬಿದರ ಹಳ್ಳಿ–ಉಯ್ಯಂಬಳ್ಳಿ ಮುಖ್ಯ ರಸ್ತೆಯ ಎಡ ಮತ್ತು ಬಲ ಭಾಗದಲ್ಲಿ ಗಿಡ ಮರಬಳ್ಳಿಗಳು ಬೆಳೆದು ನಿಂತಿದೆ. ವಾಹನಗಳು, ಬಸ್ಸುಗಳು ಸೇರಿ ಇತರ ಖಾಸಗಿ ವಾಹನಗಳು ಓಡಾಡುವಾಗ ಎದುರಿನಿಂದ ಬರುವ ವಾಹನಗಳು ಸರಿಯಾಗಿ ಕಾಣದೆ ಕೆಲ ಅಪಘಾತಗಳು ಸಂಭವಿಸಿದ್ದೂ ಉಂಟು. ವಾಹನ ಸವಾರರು ಕಷ್ಟಪಟ್ಟು ವಾಹನಗಳನ್ನು ಚಾಲನೆ ಮಾಡುವಂತಾಗಿದೆ.

ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ರಸ್ತೆಯ ಸಮಸ್ಯೆಗಳನ್ನು ಬಗೆಹರಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಲು ಮುಂದಾಗಬೇಕೆಂದು ಮನವಿ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು.

ರಸ್ತೆ ದುರಸ್ತಿ ಮಾಡಿಸಿ

ಮಾನ್ಯರೆ,

ಮೈಸೂರು ಜಿಲ್ಲೆ ಹೆಚ್.ಡಿ.ಕೋಟೆ ಹಾಗೂ ಸರಗೂರು ತಾಲೂಕಿಗೆ ಸೇರಿದ ನುಗು ಜಲಾಶಯದಿಂದ ಯಡಿಯಾಲ ಗ್ರಾಮದವರೆಗೂ ರಸ್ತೆ ಹಾಳಾಗಿ ಸಾರ್ವಜನಿಕರಿಗೆ, ಪ್ರವಾಸಿಗರಿಗೆ ಹಾಗೂ ವಾಹನ ಸವಾರರಿಗೆ ಬಹಳ ತೊಂದರೆಯಾಗುತ್ತಿದೆ. ಹೆಚ್.ಡಿ.ಕೋಟೆ ಹಾಗೂ ಸರಗೂರು ಕಡೆಯಿಂದ ನಂಜನಗೂಡು ಹಾಗೂ ಹುರ, ಹುಲ್ಲಹಳ್ಳಿ, ಚಾಮರಾಜನಗರ ಸೇರಿದಂತೆ ಇತರೆ ಗ್ರಾಮಗಳಿಗೆ, ಹಾಗೆಯೇ ಬಡಗಲಪುರ, ಹಾದನೂರು, ಬೇಲದಕುಪ್ಪೆ ದೇವಸ್ಥಾನಕ್ಕೆ, ಹಾಗೆಯೇ ನುಗು ಜಲಾಶಯದ ಕಡೆಗೆ ದಿನನಿತ್ಯ ಪ್ರವಾಸಿಗರು ಬರುತಿರುತ್ತಾರೆ. ಆದರೆ ಈ ರಸ್ತೆಯಲ್ಲಿ ಪ್ರಯಾಣ ಮಾಡಬೇಕಾದರೆ ಹರಸಾಹಸ ಪಡಬೇಕಾಗುತ್ತದೆ.

ಮಳೆಗಾಲ ಬಂದರಂತೂ ನುಗು ಜಲಾಶಯದ ಹತ್ತಿರ ಕೆಸರು ಗದ್ದೆಯಂತಾಗುತ್ತದೆ. ಅಪ್ಪಿ ತಪ್ಪಿ ಏನಾದರೂ ರಸ್ತೆಯಲ್ಲಿ ಸ್ಕಿಡ್ಡಾಗಿ ಬಿದ್ದರೆ ನುಗು ಜಲಾಶಯದ ಹೊಳೆಗೆ ಬೀಳಬೇಕಾಗುತ್ತದೆ. ಈ ರಸ್ತೆಯು ಕೆಸರುಮಯವಾಗಿದ್ದು ರಸ್ತೆಯಲ್ಲಿ ವಾಹನ ಸವಾರರು ತುಂಬಾ ಕಷ್ಟಪಡುವಂತಾಗಿದೆ. ಸಂಬಂಧ ಪಟ್ಟ ಅಧಿಕಾರಿಗಳು ಹಾಗೂ ನಂಜನಗೂಡು ತಾಲೂಕು, ಹಾಗೆಯೇ ಹೆಚ್.ಡಿ.ಕೋಟೆ ತಾಲೂಕಿನ ಶಾಸಕರು ಹಾಗೂ ಚಾಮರಾಜನಗರ ಜಿಲ್ಲೆಯ ಸಂಸದರು ಕೂಡಲೆ ರಸ್ತೆಯನ್ನು ಸರಿಪಡಿಸಿ, ಸಾರ್ವಜನಿಕರಿಗೆ, ವಾಹನ ಸವಾರರಿಗೆ ಅನುಕೂಲ ಮಾಡಿಕೊಡಲಿ.

–ಸಿದ್ದಲಿಂಗೇಗೌಡ, ಹೈರಿಗೆ ಗ್ರಾಮ, ಹೆಚ್.ಡಿ.ಕೋಟೆ ತಾಲೂಕು.



ಜಿ. ಎಲ್. ತ್ರಿಪುರಾಂತಕ
ಮೊ: 96866–77284

ಅರಿವು

ಕನ್ನಡ ಸಾಹಿತ್ಯ ಲೋಕಕ್ಕೆ ಹಾಸ್ಯನಾಕ ತೋರಿಸಿದ ನಾ.ಕ. ...!

ಕನ್ನಡ ಸಾಹಿತ್ಯ ಲೋಕದಲ್ಲಿ ಹಾಸ್ಯ ಸಾಹಿತ್ಯದ ಧ್ರುವತಾರೆ ನಾ.ಕಸ್ತೂರಿಯವರ ಸಂಸ್ಮರಣೋತ್ಸವವು ಅವರ ಕರ್ಮಭೂಮಿ ಮೈಸೂರಿನಲ್ಲಿ ಏರ್ಪಾಡಾಗಿದೆ. ಕಸ್ತೂರಿ ಹಾಸ್ಯ ರಸಿಕ ವೃಂದ ಹಾಗೂ ಮೈಸೂರು ಆಕಾಶವಾಣಿ ಸಹಯೋಗದೊಂದಿಗೆ ಅರ್ಥಪೂರ್ಣವಾದ ಸ್ಮರಣೋತ್ಸವ ಕಾರ್ಯಕ್ರಮವನ್ನು ಇದೇ 14ರಂದು ಬೆಳಗ್ಗೆ 9.30ಕ್ಕೆ ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಆವರಣದಲ್ಲಿರುವ ನವಜ್ಯೋತಿ ಸಭಾಂಗಣದಲ್ಲಿ ನೆರವೇರಲಿದೆ. ಅಂದು ಡಾ.ಹೇಮಂತ್‌ಕುಮಾರ್. ಎಸ್. ಅವರ ಸಂಶೋಧನಾ ಮಹಾಪ್ರಬಂಧ ನಾ.ಕಸ್ತೂರಿ ಬದುಕು–ಬರಹ? ಹಾಗೂ ಕೊರವಂಜಿ ಪತ್ರಿಕೆಯಲ್ಲಿ 1942ರಿಂದ ಪ್ರಕಟಕೊಂಡ ನಾ.ಕಸ್ತೂರಿ ಬರಹಗಳ ಸಮಗ್ರ ಸಂಪುಟ ಕೊರವಂಜಿ ಕಸ್ತೂರಿ ಸಮಗ್ರ ಸಂಪುಟ–1 ಕೃತಿಗಳ ಲೋಕಾರ್ಪಣೆಯಾಗಲಿವೆ.

ನಾ.ಕಸ್ತೂರಿಯವರನ್ನು ಸ್ಮರಿಸುವುದು ಕನ್ನಡ ನಾಡಿನ ಸಾಹಿತ್ಯಾಸಕ್ತರಿಗೆ ಕಸ್ತೂರಿ ಪರಿಮಳವನ್ನು ಆಘ್ರಾಣಿಸಿದಷ್ಟೇ ಆನಂದವನ್ನು ನೀಡಲಿದೆ. ಕಸ್ತೂರಿ ಕನ್ನಡ ಭಾಷೆಯಲ್ಲಿ ನಾ.ಕಸ್ತೂರಿಯವರು ಅಂದರೆ ನಾ.ಕ.ಅವರು ಸೃಷ್ಟಿಸಿದ ಹಾಸ್ಯ ಸಾಹಿತ್ಯವು, ಒಂದು ವಿಶೇಷ ಪ್ರಕಾರವಾಗಿ ಗುರುತಿಸಿಕೊಂಡು, ಸಾಹಿತ್ಯ ಪ್ರೇಮಿಗಳಿಗೆ ಹೊಸ ಅಭಿರುಚಿಯನ್ನು ಸೃಜಿಸಿದ್ದು ಅಂದಿನ ಗಂಭೀರ ಸಾಹಿತಿಗಳ ಹುಬ್ಬೇರಿಸುವಂತೆ ಮಾಡಿದ್ದು ಸುಳ್ಳಲ್ಲ. ನಾ.ಕ.ಅವರು ರಾ.ಶಿ. ಅವರೊಂದಿಗೆ ಸೇರಿ ವಿಭಿನ್ನ ಪದಪುಂಜಗಳ ರಾಶಿ ರಾಶಿ ಹಾಸ್ಯ ಸಾಹಿತ್ಯವನ್ನು ರಚಿಸಿದ ಕೀರ್ತಿ ಅವರಿಗೆ ಸಲ್ಲಬೇಕು. ಇಷ್ಟೆಲ್ಲಾ ಪ್ರಯೋಗಗಳನ್ನು ಮಾಡಿದ ನಾ.ಕ. ಅವರ ಜನ್ಮಭೂಮಿ ಕರುನಾಡಲ್ಲ ಬದಲಿಗೆ ನೆರೆ ರಾಜ್ಯವಾದ ಕೇರಳ ಎಂದರೆ ಓದುಗರಿಗೆ ಆಶ್ಚರ್ಯವಾಗುತ್ತದೆ ಅಲ್ಲವೇ? ಅವರ ಬದುಕಿನ ಯಾನ ಒಂದು ನದಿಯ ಹಾಗೆ, ಕೇರಳದಲ್ಲಿ ಹುಟ್ಟಿ, ಕರ್ನಾಟಕದಲ್ಲಿ ಹರಿದು ಕೊನೆಗೆ ಆಂಧ್ರಪ್ರದೇಶದಲ್ಲಿ ಅಂತ್ಯವಾಗುತ್ತದೆ.

ನಾ.ಕಸ್ತೂರಿ ಎಂದೇ ಖ್ಯಾತರಾದ ನಾರಾಯಣ ಕಸ್ತೂರಿ ರಂಗನಾಥ ಶರ್ಮ ಅವರು ಕೇರಳ ತಿರುಪುಣಿತ್ತರ ಗ್ರಾಮದಲ್ಲಿ 1897ರಲ್ಲಿ ಜನಿಸಿದರು. ತಮ್ಮ ಪ್ರತಿಭೆ ಹಾಗೂ ಪರಿಶ್ರಮದ ಫಲದಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ರಾಜ್ಯಕ್ಕೆ ಐದನೇ ಸ್ಥಾನ ಪಡೆಯುತ್ತಾರೆ. ಮುಂದಿನ ಎರಡು ವರ್ಷ ವಿದ್ಯಾರ್ಥಿವೇತನದ ಸಹಾಯದಿಂದ ಎರ್ನಾಕುಲಂ ಮಹಾರಾಜ ಕಾಲೇಜಿನಲ್ಲಿ ಇಂಟರ್‌ಮೀಡಿಯಟ್ ಓದಿದರು. ರಾಜ್ಯಕ್ಕೆ ಎರಡನೆಯ ಸ್ಥಾನ ಪಡೆದ ಕಸ್ತೂರಿಯವರು ತಿರುವನಂತಪುರದ ಮಹಾರಾಜ ಕಾಲೇಜಿನಲ್ಲಿ ಬಿ.ಎ.ಆನರ್ಸ್ ಪದವಿ ಪಡೆದರು. ಕರ್ನಾಟಕದ ಡಿ.ಬನುಮಯ್ಯಾಸ್ ಹೈಸ್ಕೂಲಿನಿಂದ ಕರ್ನಾಟಕದ ನಂಟು ಪ್ರಾರಂಭವಾಯಿತು. ಚರಿತ್ರೆ, ಇಂಗ್ಲೀಷ್ ಹಾಗೂ ಅರ್ಥಶಾಸ್ತ್ರಗಳನ್ನು ಬೋಧಿಸುವುದರ ಜೊತೆಗೆ ಕಾಲೇಜು ಪತ್ರಿಕೆಯನ್ನು ನಡೆಸುತ್ತಿದ್ದರು. ಕನ್ನಡಿಗರಲ್ಲದ ಅವರು ಕರ್ನಾಟಕಕ್ಕೆ ಬಂದ ಮೇಲೆ ಕನ್ನಡ ಭಾಷೆಯನ್ನು ಕಲಿತರು, ಭಾಷೆಯಲ್ಲಿ ಪ್ರಭುತ್ವವನ್ನು ಸಾಧಿಸಿದರು. ಈ ಸಮಯದಲ್ಲಿ ಡಾ.ಎಂ.ವಿ. ಗೋಪಾಲಸ್ವಾಮಿಯವರ ಪ್ರಯತ್ನದ ಫಲವಾಗಿ ಮೈಸೂರು ಬಾನುಲಿ ಕೇಂದ್ರ ಪ್ರಾರಂಭವಾಯಿತು. ಬಾನುಲಿ ಕೇಂದ್ರಕ್ಕೆ ಆಕಾಶವಾಣಿ ಎಂಬ ಹೆಸರನ್ನು ಸೂಚಿಸಿದವರು ಕಸ್ತೂರಿಯವರೇ. ಪೂರ್ಣಾವಧಿ ಅಸಿಸ್ಟಂಟ್ ಡೈರೆಕ್ಟರ್ ಆಗಿ ಆಕಾಶವಾಣಿಯಲ್ಲಿ ನಾ.ಕ.ಅವರು ಕೆಲಕಾಲ ಸೇವೆ ಸಲ್ಲಿಸಿದರು.

ಬೆಂಗಳೂರಿನಲ್ಲಿ ನೆಲೆಸಿದ್ದ ರಾ.ಶಿ.ಯವರೊಂದಿಗೆ ಕೈ ಜೋಡಿಸಿ ಕೊರವಂಜಿ ಮಾಸ ಪತ್ರಿಕೆಯನ್ನು ಪ್ರಾರಂಭಿಸುತ್ತಾರೆ. ರಾ.ಶಿ.ಯವರ ಪೂರ್ಣ ಹೆಸರು ರಾಮಸ್ವಾಮಯ್ಯ ಶಿವರಾಂ ಎಂದು, ಅವರು



ನಾ.ಕಸ್ತೂರಿ

ಆ.14ರಂದು ಮೈಸೂರಲ್ಲಿ ನಾ.ಕಸ್ತೂರಿಯವರ ಸಂಸ್ಮರಣೋತ್ಸವ

ವೃತ್ತಿಯಿಂದ ವೈದ್ಯರಾದರೂ ಕನ್ನಡ ಸಾಹಿತ್ಯ ಕಂಡ ಚಿರಪರಿಚಿತ ಹಾಸ್ಯ ಲೇಖಕರು. ಕೊರವಂಜಿಯು 1942ರ ಮಾರ್ಚಿ ತಿಂಗಳಿನ ಯುಗಾದಿಯಿಂದ ಪ್ರಾರಂಭವಾಗಿ 1967ರವರೆಗೆ 25 ವರ್ಷಗಳ ಕಾಲ ಪ್ರತಿಮಾಸವೂ ನಗೆಚೆಲ್ಲಿ, ಮುಖವರಳಿಸಿ, ಎದೆ ತುಂಬಿ ಮಂಗಳ ಹಾಡುತ್ತಾಳೆ. ಮೊದಲಿಗೆ ಬಹುಪಾಲು ಲೇಖನಗಳನ್ನು ಕಸ್ತೂರಿ ಹಾಗೂ ರಾಶಿಯವರೆ ಬೇರೆ ಬೇರೆ ಕಾವ್ಯನಾಮಗಳಲ್ಲಿ ಬರೆದು ತುಂಬಿಸುತ್ತಿದ್ದುದು ಹಾಸ್ಯ ಎನಿಸಿದರೂ ಸತ್ಯ ಸಂಗತಿಯಾಗಿತ್ತು. ಕಸ್ತೂರಿಯವರು ಖಾರಂತ, ಪಾಟಾಳಿ, ನಾ.ಕ. ಇವೇ ಮುಂತಾಗಿ ಹತ್ತು ಹಲವು ಹೆಸರುಗಳಲ್ಲಿ ಬರಹಗಳನ್ನು ಹೊಂದಿಸುತ್ತಿದ್ದರು. ಬರಹಗಳ ಜೊತೆಗೆ ವ್ಯಂಗ್ಯ ಚಿತ್ರಗಳನ್ನೂ ಒದಗಿಸುವ ಪ್ರಯತ್ನವು ನಡೆದೇ ಇತ್ತು. ವ್ಯಂಗ್ಯಚಿತ್ರ ಕ್ಷೇತ್ರದಲ್ಲಿ ಅಂತಾರಾಷ್ಟ್ರೀಯ ಖ್ಯಾತಿ ಹೊಂದಿದ ಆರ್.ಕೆ.ಲಕ್ಷ್ಮಣ್ ಅವರು ಆ ಕಾಲಘಟ್ಟದಲ್ಲಿ ನಾ.ಕ.ಅವರಿಗೆ ಪರಿಚಯದ ವಿದ್ಯಾರ್ಥಿಯಾಗಿದ್ದರು. ಅವರನ್ನು ಮನವೊಲಿಸಿ ನಾಲ್ಕು ವರ್ಷಗಳ ಅವಧಿಯಲ್ಲಿ ನೂರಾರು ವ್ಯಂಗ್ಯಚಿತ್ರಗಳನ್ನು ಬರೆಸಿದ್ದರು. ಮೊದಲ ಚಿತ್ರಕ್ಕೆ 10 ರೂ.ಗಳ ಸಂಭಾವನೆಯನ್ನು ನೀಡಿದ್ದರು ಎಂಬುದು ಇಲ್ಲಿ ಉಲ್ಲೇಖಿಸಬಹುದು.

ಕೊರವಂಜಿ ಮೊದಲ ಸಂಚಿಕೆಯಲ್ಲಿ ಸರ್ವಜ್ಞ ಪದವೊಂದನ್ನು ನೋಡಿ,

ಕನ್ನಡದಿ ಇಂಗ್ಲೀಷ ಕಿಂಚಿತ್ತು ಬೆರೆಸದಿರು
ಸಿನ್ನುಗಳ ಲಿಸ್ಟಿನಲ್ಲಿ ಹೈಯೆಸ್ಟು ಅದರಿಂದ
ಫನ್ನಿಗೂ ಮಿಕ್ಕದಿರು ಸರ್ವಜ್ಞ

ಎಂದು ಹಾಸ್ಯ ಮಿಶ್ರಿತ ಕನ್ನಡ ಹಾಗೂ ಇಂಗ್ಲಿಷ್ ಬಾಷೆಗಳ ಪದಗಳನ್ನು ಸಂಯೋಜಿಸಿ ಓದುಗರ ನಗೆ ಬುಗ್ಗೆ ಉಕ್ಕಿಸಿದ ಬಗೆಯು ವಿಶಿಷ್ಟವಾಗಿದೆ. ಪ್ರತಿ ಸಂಚಿಕೆಯಲ್ಲೂ ಊಹಿಸಲಸಾಧ್ಯವಾದ ಶೀರ್ಷಿಕೆಗಳು ಪ್ರಕಟವಾಗುತ್ತಿದ್ದವು. ಉರಿಗಾಳು, ಕುಹಕಕಿಡಿಗಳು, ಅನರ್ಥಕೋಶ, ಎನನ್ಯಾಯ, ಕಲಿಗನ್ನಡ ಸ್ಪರ್ಧೆ, ಕೊರವೇಶ್ವರ ವಚನಗಳು ಇತ್ಯಾದಿ ಇತ್ಯಾದಿ.

ನಾ.ಕಸ್ತೂರಿಯವರ ಬಹುಭಾಷಾ ಪ್ರಾವೀಣ್ಯತೆ, ಪದಬಳಕೆಯ, ಜೋಡಣೆಯ, ಸೃಷ್ಟಿಯ ಚಾಕಚಕ್ಯತೆ ನೋಡಿದಾಗ ಇವರು ಅಪ್ಪಟ ಕನ್ನಡಿಗರೇ ಎನಿಸುತ್ತದೆ. ಅವರ ಹಾಸ್ಯ ಬರಹ ಶೈಲಿಯನ್ನು ದ.ರಾ. ಬೇಂದ್ರೆಯವರು 1940ರಲ್ಲಿ ಪ್ರಕಟಗೊಂಡ ನಾ.ಕ. ಅವರ ಗಾಳಿಗೋಪುರ ಪುಸ್ತಕದ ನಲ್ನುಡಿಯಲ್ಲಿ ಹೀಗೆ ಬರೆದಿದ್ದಾರೆ. ಇವರ ಹಾಸ್ಯವು ಕೃತಿಯ ಚಮತ್ಕಾರವಲ್ಲ. ಸಹಜದೃಷ್ಟಿಯ ಸ್ವಭಾವ. ಈ ವಿದೂಷಕ ದೃಷ್ಟಿಗೆ ಪ್ರಪಂಚದ ವೈಪರೀತ್ಯಗಳು ಅಂಗೈ–ನೆಲ್ಲಿಯಂತೆ ಎದ್ದು ಕಾಣುವವು. ಅಭಾಸವೇ ಅಭ್ಯಾಸವಾದ ಸಮಾಜಕ್ಕೆ ಹಾಸ್ಯವೇ ತಕ್ಕ ಮದ್ದು. ಈ ವಿನೋದ ಪ್ರಪಂಚದಲ್ಲಿ ಕಸ್ತೂರಿಯವರ ಹಾಸ್ಯ ಶೈಲಿಯು ತನ್ನದೇ ಆದ ಒಂದು ರೀತಿಯನ್ನು ಅನುಸರಿಸಿ ಬಂದಿದೆ.? ಎಂದು ಕಸ್ತೂರಿಯವರ ಹಾಸ್ಯ ಬರಹಗಳನ್ನು ಬಣ್ಣಿಸಿದ್ದಾರೆ.

ನಾ.ಕ.ಅವರ ಹಾಸ್ಯ ಯಾಕೆ ಅಷ್ಟು ಅಚ್ಚ, ಶುದ್ಧ, ನಿರ್ಮಲ, ಶುಭ್ರ, ಸರಳ ಎಂದರೆ ಅವರದೇ ಮಾತಿನಲ್ಲಿ ಹೇಳುವುದಾದರೆ, ಹಾಸ್ಯ ನಾನಾ ರೂಪವನ್ನು ತಾಳುತ್ತದೆ; ಬಗೆಬಗೆಯ ಉಡಿಗೆ ತೊಡಿಗೆಗಳನ್ನು ಧರಿಸಿ ಮೆರೆಯುತ್ತದೆ. ಒಬ್ಬರಿಗೆ ಕಂಡಂತೆ ಅದು ಮತ್ತೊಬ್ಬರಿಗೆ ಕಾಣಲಾರದು; ಒಬ್ಬರಿಗೆ ಹೊಳೆದಷ್ಟು ಅದು ಮತ್ತೊಬ್ಬರ ಬುದ್ಧಿಗೆ ಹೊಳೆಯಲಾರದು. ಎಂದಿದ್ದಾರೆ. ಮುಂದುವರೆದು ಒಮ್ಮೆ ಮಾತಿನ ಧೋರಣೆ, ಒಮ್ಮೆ ವಿಲಕ್ಷಣ ವಿಡಂಬನೆ, ಮತ್ತೊಮ್ಮೆ ಅಂಕೆ ಮೀರಿದ ಅತಿಶಯೋಕ್ತಿ, ಒಮ್ಮೆ ಬೆಚ್ಚಿ ಬೀಳಿಸುವ ರೂಪಕ, ಮತ್ತೊಮ್ಮೆ ಭಲಾ ಎಂದೆನಿಸುವ ಫಲೋತ್ಪ್ರೇಕ್ಷೆ ಅಥವಾ ಕೇವಲ ವಿರೋಧಭಾಸ–ಅದರ ವಾಹಕವಾಗಿರಬಹುದು? ಎಂದಿದ್ದಾರೆ.

ಹಾಸ್ಯ ಸಾಹಿತಿಗಳಾದ ಅ.ರಾ.ಮಿತ್ರ ಅವರು ಲೋಕಾರ್ಪಣೆಗೊಳ್ಳುತ್ತಿರುವ ಪುಸ್ತಕವೊಂದರ ಮುನ್ನುಡಿಯಲ್ಲಿ ತಮ್ಮ ಅನುಭವವನ್ನು ಹೀಗೆ ಹಂಚಿಕೊಂಡಿದ್ದಾರೆ. ಕನ್ನಡದಲ್ಲಿ ಬಹಳ ಜನ ಹಾಸ್ಯಗಾರರಿದ್ದಾರೆ. ಅದರೆ, ಲಾಂಗೂಲಾಚಾರ್ಯರವರನ್ನು ಬಿಟ್ಟರೆ ಹಾಸ್ಯಕ್ಕಾಗಿಯೇ ತಮ್ಮನ್ನು ತಾವು ಅರ್ಪಿಸಿಕೊಂಡಂತಹ ವ್ಯಕ್ತಿಗಳ ಸಂಖ್ಯೆ ಕಡಿಮೆ. ಹಾಸ್ಯಕ್ಕೆ ಒಂದು ದಿಕ್ಕನ್ನೇ ತೋರಿಸಿದವರು ನಾ.ಕಸ್ತೂರಿ. ಆಗೆಲ್ಲಾ ಪಂಡಿತರಿಗೆ ಹಾಸ್ಯಪ್ರಜ್ಞೆ ಇರುತ್ತಿತ್ತು ನಿಜ. ಆದರೆ ಅದು ಬಹಳ ಪ್ರಮುಖ ಎಂದು ಅವರು ತಿಳಿದುಕೊಂಡಿರಲಿಲ್ಲ. ನಾ.ಕ. ಅವರು ಕನ್ನಡ ಹಾಸ್ಯ ಸಾಹಿತ್ಯಕ್ಕೆ ಪ್ರಚೋದನೆಯನ್ನು ಕೊಟ್ಟಂತಹವರು. ಹಾಸ್ಯಗಾರರನ್ನು ಬಡಿದೆಬ್ಬಿಸಿದವರು. ಅವರಿಗೆ ಕನ್ನಡ ಅಭಿಮಾನ ಎಷ್ಟು ಇತ್ತು ಎನ್ನುವುದನ್ನು ತಿಳಿಯಬೇಕಾದರೆ ನೀವು ಅವರ ಕನ್ನಡ ಲೇಖನಗಳನ್ನು ಓದಬೇಕು. ಕನ್ನಡದಲ್ಲಿ ಅಷ್ಟೊಂದು ಉಪನ್ಯಾಸಗಳನ್ನು ಕೇಳಿ ಅರಗಿಸಿಕೊಂಡಂಥ ವ್ಯಕ್ತಿ ಇವರೊಬ್ಬರೆ ಎಂದು ಹೇಳಬೇಕಾಗುತ್ತದೆ ಎಂದು ಕಸ್ತೂರಿಯವರ ಕನ್ನಡ ಪ್ರೇಮವನ್ನು ಕೊಂಡಾಡಿದ್ದಾರೆ.

ನಾ.ಕಸ್ತೂರಿಯವರ ವ್ಯಕ್ತಿತ್ವನ್ನು ಬಣ್ಣಿಸುತ್ತಾ, ಅವರ ಸ್ನೇಹ ವಲಯ ಬಹಳ ದೊಡ್ಡದು, ಬಹುಶಃ ಆ ಕಾಲದಲ್ಲಿ ನಾ.ಕಸ್ತೂರಿಯವರ ಪರಿಚಯವಿಲ್ಲದ ಸಾಹಿತಿಗಳೇ ಇರಲಿಲ್ಲ. ಏಕೆಂದರೆ ಸ್ನೇಹಕ್ಕೆ ಕೈಚಾಚುವಂಥ ವ್ಯಕ್ತಿತ್ವ ಅವರದು. ಎಂದಿದ್ದಾರೆ. ಅವರ ಮತ್ತೊಂದು ಆಸಕ್ತಿ ಕ್ಷೇತ್ರ ಎಂದರೆ ಸಮಾಜ ಸೇವೆ. ಗ್ರಾಮೀಣ ಭಾಗದಲ್ಲಿ ಸ್ವಚ್ಛತೆ ಕಾಪಾಡುವ ಬಗ್ಗೆ ಹರಿಕಥೆ ಮಾದರಿಯಲ್ಲಿ ಹಳ್ಳಿ ಹಳ್ಳಿಗೆ ಹೋಗಿ ಜಾಗೃತಿ ಮೂಡಿಸುತ್ತಿದ್ದರು. ಮಹಾರಾಜ ಕಾಲೇಜಿನಂತಹ ಪ್ರತಿಷ್ಠಿತ ಸಂಸ್ಥೆಯಲ್ಲಿದ್ದವರಿಗೆ ಹಳ್ಳಿಯ ಜೀವನ ಸುಧಾರಿಸಬೇಕು ಎಂಬ ಭಾವನೆ ಇದ್ದದ್ದು ಒಂದು ಕಲ್ಪನಾತೀತ ಆದರ್ಶ ವ್ಯಕ್ತಿತ್ವಕ್ಕೆ ಹಿಡಿದ ಕೈಗನ್ನಡಿ ಎನ್ನುತ್ತಾರೆ.

ಕಸ್ತೂರಿಯವರು ಜೀವನದ ಬದುಕಿನ ಕೊನೆಯ ವರ್ಷಗಳಲ್ಲಿ ಪುಟ್ಟಪರ್ತಿಯ ಸಾಯಿಬಾಬಾ ರವರ ಬಳಿ ಹೋಗಿ ಸೇರುತ್ತಾರೆ. ಹಾಸ್ಯ ಸಾಹಿತ್ಯ ದಿಂದ ಕ್ರಮೇಣ ದೂರ ಸರಿದುಬಿಡುತ್ತಾರೆ. ಅಲ್ಲಿಯೂ ಸಹ ಅನೇಕ ಸೇವಾ ಕೆಲಸಗಳನ್ನು ಮಾಡಿದ್ದಾರೆ. ಸಾಹಿಬಾಬಾರವರಿಗೂ ಕೂಡ ಅದು ಹೆಮ್ಮೆಯ ವಿಷಯವಾಗಿ, ಅವರನ್ನು ಬಹಳ ಮೆಚ್ಚಿಕೊಳ್ಳುತ್ತಿದ್ದರು.

ಇಂತಹ ಅಪರೂಪ ವ್ಯಕ್ತಿತ್ವದ, ಬಹುಭಾಷಾ ಪಂಡಿತರು ಕನ್ನಡ ನಾಡಿನಲ್ಲಿ ಸೇವೆ ಸಲ್ಲಿಸಿದರು ಎಂದರೆ ಅದು ಕನ್ನಡಿಗರ ಪುಣ್ಯವೇ ಸರಿ. ಕಸ್ತೂರಿಯವರನ್ನು ಅರ್ಥಪೂರ್ಣವಾಗಿ ಸ್ಮರಿಸುವ ಒಂದು ಅವಕಾಶ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಒದಗಿಬಂದಿರುವುದು ಸಾಹಿತ್ಯಾಸಕ್ತರಿಗೆ ಒಂದು ಸದವಕಾಶವೇ ಸರಿ. ನಾ ಕಸ್ತೂರಿ ಹಾಸ್ಯ ರಸಿಕ ವೃಂದ ಹಾಗೂ ಮೈಸೂರು ಆಕಾಶವಾಣಿ ಸಹಯೋಗದಲ್ಲಿ ಆಗಸ್ಟ್ 14ರಂದು ಮೈಸೂರಿನಲ್ಲಿ ನಾ ಕಸ್ತೂರಿ ಸ್ಮರಣೋತ್ಸವ ಆಯೋಜಿಸಿದ್ದಾರೆ. ಅವರ ಮಗಳಾದ ಶ್ರೀಮತಿ ಪದ್ಮಮ್ಮ ಅವರ ಮಗನಾದ ಶ್ರೀ ಬಿ.ಎಸ್.ರಾಜಾರಾಂ ಅವರು ವಿಶೇಷ ಆಸ್ಥೆ ವಹಿಸಿದ್ದಾರೆ. ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆಯುವ ಈ ಸಮಾರಂಭದಲ್ಲಿ ನಾ.ಕ.ಅವರು ಕುರಿತು ಚಿಂತಕರು, ಕವಿಗಳು, ವಾಗ್ಮಿಗಳು ನಾಕು ಮಾತುಗಳನ್ನಾಡಲಿದ್ದಾರೆ. ರಾಶಿ ಅವರ ಪುತ್ರ ಎಂ.ಶಿವಕುಮಾರ್ ಅವರು ಕೊರವಂಜಿ ಪರಂಪರೆ ಕುರಿತಾಗಿ ಮಾತನಾಡಿದರೆ, ಹೆಚ್‌ಎಂಟಿ ಸಂಸ್ಥೆ ಹಾಗೂ ಭಾರತೀಯ ವಿದ್ಯಾಭವನದ ಪೂರ್ವ ಛೇರ್ಮನ್ ಎನ್.ರಾಮಾನುಜ ಅವರು ಆ ಕನಸಿನ ದಿನಗಳು ಎಂಬ ವಿಚಾರವಾಗಿಯೂ, ಮೈಸೂರು ಆಕಾಶವಾಣಿ ಕೇಂದ್ರದ ಉಪನಿರ್ದೇಶಕರಾದ ಉಮೇಶ್ ಎಸ್.ಎಸ್. ಅವರು ಆಕಾಶದ ನಾಕ ವಿಷಯವಾಗಿ ಮಾತನಾಡಲಿದ್ದಾರೆ. ಕವಿ ಕೆ.ಸಿ.ಶಿವಪ್ಪನವರು ಮುದ್ದುರಾಮ ಕಂಡ ನಾಕ ಕುರಿತಾಗಿ ಮಾತನಾಡುತ್ತಾರೆ, ಚಿಂತಕರಾದ ಬೇಲೂರು ರಾಮಮೂರ್ತಿ ಅವರು ಕಸ್ತೂರಿ ಒನ್–ಟೂ–ತ್ರೀ–ಶಿಕ್ಷಣ–ಹಾಸ್ಯ–ಆಧ್ಯಾತ್ಮ ವಿಷಯವಾಗಿ ಮಾತನಾಡಲಿದ್ದಾರೆ. ಹಾಸ್ಯವಾಗ್ಮಿಗಳಾದ ವೈ.ವಿ. ಗುಂಡೂರಾವ್ ಅವರು ಕಸ್ತೂರಿ ಅನರ್ಥ–ಅಣುಕು ವಿಷಯವಾಗಿಯೂ, ಖ್ಯಾತ ವಾಗ್ಮಿಗಳಾದ ಪ್ರೊ.ಎಂ.ಕೃಷ್ಣೇಗೌಡ ಅವರು ಕಸ್ತೂರಿ ಮಾತ್ರೆ ವಿಷಯವಾಗಿ ಮಾತನಾಡಲಿದ್ದಾರೆ. ಅಂದು ಬೆಳಗ್ಗೆ 9.30ಕ್ಕೆ ನಿತಿನ್ ರಾಜಾರಾಂ ಶಾಸ್ತ್ರಿ ಮತ್ತು ಸಂಗಡಿಗರು ನಾ.ಕಸ್ತೂರಿಯವರ ಆಯ್ದ ಕವನಗಳ ಗೀತಗಾಯನ ನಡೆಸಿಕೊಡಲಿದ್ದಾರೆ. ಹಾಸ್ಯಾಭಿಮಾನಿಗಳಿಗೆ ಅಂದು ರಸದೌತಣವೇ ಸರಿ. ಸಮಾರಂಭಕ್ಕೆ ಆಗಮಿಸಿ, ಆನಂದಿಸಿ.

> “ಹಾಸ್ಯ ಸಾಹಿತಿಗಳಾದ ಅ.ರಾ.ಮಿತ್ರ ಅವರು ಬಿಡುಗಡೆಗೊಳ್ಳುತ್ತಿರುವ ಪುಸ್ತಕವೊಂದರ ಮುನ್ನುಡಿಯಲ್ಲಿ ತಮ್ಮ ಅನುಭವವನ್ನು ಹೀಗೆ ಹಂಚಿಕೊಂಡಿದ್ದಾರೆ. ಕನ್ನಡದಲ್ಲಿ ಬಹಳ ಜನ ಹಾಸ್ಯಗಾರರಿದ್ದಾರೆ. ಅದರೆ, ಲಾಂಗೂಲಾಚಾರ್ಯರವರನ್ನು ಬಿಟ್ಟರೆ ಹಾಸ್ಯಕ್ಕಾಗಿಯೇ ತಮ್ಮನ್ನು ತಾವು ಅರ್ಪಿಸಿಕೊಂಡಂತಹ ವ್ಯಕ್ತಿಗಳ ಸಂಖ್ಯೆ ಕಡಿಮೆ. ಹಾಸ್ಯಕ್ಕೆ ಒಂದು ದಿಕ್ಕನ್ನೇ ತೋರಿಸಿದವರು ನಾ.ಕಸ್ತೂರಿ. ಆಗೆಲ್ಲಾ ಪಂಡಿತರಿಗೆ ಹಾಸ್ಯ ಪ್ರಜ್ಞೆ ಇರುತ್ತಿತ್ತು ನಿಜ. ಆದರೆ ಅದು ಬಹಳ ಪ್ರಮುಖ ಎಂದು ಅವರು ತಿಳಿದುಕೊಂಡಿರಲಿಲ್ಲ. ನಾ.ಕ.ಅವರು ಕನ್ನಡ ಹಾಸ್ಯ ಸಾಹಿತ್ಯಕ್ಕೆ ಪ್ರಚೋದನೆಯನ್ನು ಕೊಟ್ಟಂತಹವರು. ಹಾಸ್ಯಗಾರರನ್ನು ಬಡಿದೆಬ್ಬಿಸಿದವರು. ಅವರಿಗೆ ಕನ್ನಡ ಅಭಿಮಾನ ಎಷ್ಟು ಇತ್ತು ಎನ್ನುವುದನ್ನು ತಿಳಿಯಬೇಕಾದರೆ ನೀವು ಅವರ ಕನ್ನಡ ಲೇಖನಗಳನ್ನು ಓದಬೇಕು.

ತಂದೆ–ತಾಯಿಯ ಪೂಜಿಸಿ ಗೌರವಿಸುವುದು ಉತ್ತಮ ಸಂಪ್ರದಾಯ

ಶ್ರೀ ವಾಸುದೇವ ಮಹಾರಾಜರ ಆರಾಧನಾ ಮಹೋತ್ಸವದಲ್ಲಿ ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ ಅಭಿಮತ

ಮೈಸೂರು, ಆ.10– ಒಬ್ಬ ವ್ಯಕ್ತಿ ತನ್ನ ಒಳ್ಳೆಯತನದಿಂದ ಮುಂದೆ ಸಮಾಜದಲ್ಲಿ ಪೂಜಾರ್ಹಗೊಳ್ಳುತ್ತಾನೆ ಎಂಬುದಕ್ಕೆ ವಾಸುದೇವ್‌ರಾವ್ ಅವರ ಜೀವನವೇ ಸಾಕ್ಷಿ ಎಂದು ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಹೇಳಿದರು.

ಮೈಸೂರಿನ ಜಯನಗರದ ಶ್ರೀರಾಮ ಮಂದಿರದಲ್ಲಿ ಇಂದು ಶ್ರೀ ವಾಸುದೇವ್ ಮಹಾರಾಜ್ ಫೌಂಡೇಶನ್ ಏರ್ಪಡಿಸಿದ್ದ ಶ್ರೀ ವಾಸುದೇವ ಮಹಾರಾಜರ 18ನೇ ಆರಾಧನಾ ಮಹೋತ್ಸವವನ್ನು ಉದ್ಘಾಟಿಸಿ, ಮಾತನಾಡಿದರು.

ಜನ್ಮ ಕೊಟ್ಟು ಬೆಳೆಸಿದ ತಂದೆ ತಾಯಿಗಳನ್ನು ಉಪೇಕ್ಷಿಸುತ್ತಿರುವ ಇಂದಿನ ಕಾಲಮಾನದಲ್ಲಿ ತಂದೆ–ತಾಯಿಗಳನ್ನೇ ದೈವವೆಂದು ಭಾವಿಸಿ ಪೂಜಿಸುವುದು ಬಹಳ ಅಪರೂಪ ಎಂದ ಅವರು ಸಮಾಜಕ್ಕೆ ಇದು ಮಾದರಿ ಎಂದರು. ತಾವು ಹಿಂದೆ ವೈದ್ಯಾಧಿಕಾರಿಗಳಾಗಿದ್ದಾಗ ಬ್ಯಾಂಕಿನ ಮ್ಯಾನೇಜರ್ ಆಗಿದ್ದ ಎಸ್ ಎನ್ ವಾಸುದೇವ ರಾವ್ ಅವರನ್ನು ಹಾಗೂ ಅವರ ಸಾತ್ವಿಕ ಗುಣಗಳನ್ನು ಅಂದಿನ ದಿನಗಳಲ್ಲಿ ತಾವು ಕಂಡಿದ್ದಾಗಿ ತಿಳಿಸಿದರು.

ತಂದೆಯವರ ವಿಗ್ರಹವನ್ನು ಮಾಡಿ ಅವರನ್ನೇ ದೈವವೆಂದು ಪೂಜಿಸುತ್ತಿರುವ ಎಂ.ವಿ.ನಾಗೇಂದ್ರ ಬಾಬು ಸಮಾಜಕ್ಕೆ ಮಾದರಿಯಾಗಿದ್ದಾರೆ ಎಂದರು.



ವಿವಿಧ ಕ್ಷೇತ್ರಗಳ ಸಾಧಕರಾದ ಶ್ರೀಮತಿ ನಾಗಮ್ಮ (ಸಾಹಿತ್ಯ), ಬಿ.ಶಾಂತಾರಾಮ್ (ಯೋಗ), ಮುರಳಿ (ಶಿಕ್ಷಣ) ಹಾಗೂ ಉತ್ತಮ ಸಂಸ್ಥೆಗಾಗಿ ದಾಸ್ತಿ ಶಿಕ್ಷಣ ಸಂಸ್ಥೆಯ ಪ್ರಶಸ್ತಿಯನ್ನು ಎಂಎಲ್‌ಸಿ ಡಾ.ತಿಮ್ಮಯ್ಯ ಅವರಿಗೆ ಪ್ರದಾನ ಮಾಡಲಾಯಿತು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಮಾತನಾಡಿ, ಸಮಾಜದಲ್ಲಿ ತಂದೆಯವರ ಆರಾಧನೆಯನ್ನು ಮಾಡಿ ಆ ಮೂಲಕ ಸಮಾಜಕ್ಕೆ ಒಳ್ಳೆಯ ಸಂದೇಶ ನೀಡಿರುವ ಅವರ ಪುತ್ರ ನಾಗೇಂದ್ರಬಾಬು ಅವರನ್ನು ಪ್ರಶಂಸಿಸಿದರು.

ಸಮಾರೋಪ ಸಮಾರಂಭದಲ್ಲಿ ಶಾಸಕ ಶ್ರೀವತ್ಸ ಮಾತನಾಡಿ, ತಂದೆ ತಾಯಿಯ ಸ್ಮರಣೆ ಪ್ರತಿಯೊಬ್ಬರಿಗೂ ಆದರ್ಶ ಎಂದು ತಿಳಿಸಿದರಲ್ಲದೇ ಶ್ರೀ ವಿಷ್ಣು ಸಹಸ್ರನಾಮ, ಲಲಿತ ಸಹಸ್ರನಾಮದಂತಹ ಪಾರಾಯಣಗಳು ಸಮಾಜದಲ್ಲಿ ಆಧ್ಯಾತ್ಮಿಕ ವಾತಾವರಣ ನಿರ್ಮಾಣವಾಗಲು ನೆರವಾಗುತ್ತದೆ ಎಂದು ಹೇಳಿದರು.

ಇದೇ ಸಂದರ್ಭ ವಿವಿಧ ಕ್ಷೇತ್ರಗಳ ಸಾಧಕರಾದ ಶ್ರೀಮತಿ ನಾಗಮ್ಮ (ಸಾಹಿತ್ಯ), ಬಿ ಶಾಂತಾ ರಾಮ್ (ಯೋಗ), ಮುರಳಿ (ಶಿಕ್ಷಣ) ಹಾಗೂ ಉತ್ತಮ ಸಂಸ್ಥೆಗಾಗಿ ಪ್ರಶಸ್ತಿ ಪಡೆದ ದಾಸ್ತಿ ಶಿಕ್ಷಣ ಸಂಸ್ಥೆಯ ಪ್ರಶಸ್ತಿಯನ್ನು ಡಾ.ತಿಮ್ಮಯ್ಯ ಪಡೆದುಕೊಂಡರು. ಕಾರ್ಯಕ್ರಮದಲ್ಲಿ ಕರ್ನಾಟಕ ಮುಕ್ತಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಸ್ ರಾಮಪ್ರಸಾದ್, ಶ್ರೀ ಲಕ್ಷ್ಮೀ ನರಸಿಂಹ ಸ್ವಾಮಿ ದೇವಸ್ಥಾನದ ಆಡಳಿತ ಅಧಿಕಾರಿ ಕೆ.ಆರ್.ಯೋಗಾ ನರಸಿಂಹನ್, ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಎಂ.ವಿ.ನಾಗೇಂದ್ರ ಬಾಬು, ಪ್ರಧಾನ ಸಂಚಾಲಕ ಎನ್.ಅನಂತ, ಸಂಚಾಲಕ ಡಾ.ಚಕ್ರಪಾಣಿ ಉಪಸ್ಥಿತರಿದ್ದರು. ಇದೇ ವೇಳೆ ಆಧ್ಯಾತ್ಮಿಕ ಚಿಂತಕಿ ಶ್ರೀಮತಿ ಸುಮತಿ ಸುಬ್ರಹ್ಮಣ್ಯ ಮತ್ತು ತಂಡದಿಂದ ಸಾಮೂಹಿಕ ಶ್ರೀ ವಿಷ್ಣು ಸಹಸ್ರನಾಮ ಪಾರಾಯಣ ನಡೆಯಿತು.

ಸಹಜರಂಗ ರಂಗ ತರಬೇತಿ ಶಿಬಿರ

ಮೈಸೂರು,ಆ.10–ಮೈಸೂರಿನ ನಿರಂತರ ಫೌಂಡೇಷನ್ ವತಿಯಿಂದ ಕಾಲೇಜು ವಿದ್ಯಾರ್ಥಿಗಳಿಗಾಗಿ ಆ.15ರಿಂದ ಮಾನಸಗಂಗೋತ್ರಿಯ ಗಾಂಧಿ ಭವನದಲ್ಲಿ ಸಹಜ ರಂಗ ತರಬೇತಿ ಶಿಬಿರ ಹಮ್ಮಿಕೊಳ್ಳಲಾಗಿದೆ. ಶಿಬಿರವು ಪ್ರತಿದಿನ ಸಂಜೆ 4.45ರಿಂದ 8.15ರವರೆಗೆ ನಡೆಯಲಿದೆ. 30 ಶಿಬಿರಾರ್ಥಿಗಳಿಗೆ ಮಾತ್ರ ಅವಕಾಶವಿದ್ದು, ಮೊದಲು ಬಂದವರಿಗೆ ಆದ್ಯತೆ ನೀಡಲಾಗುವುದು. ಅರ್ಜಿ ಸಲ್ಲಿಸಲು ಆ.12 ಕೊನೆ ದಿನ. ಮಾಹಿತಿಗೆ ಮೊ. 99802 73167, 96110 74424 ಸಂಪರ್ಕಿಸಬಹುದು.

ಅರ್ಜಿ ಆಹ್ವಾನ

ಮೈಸೂರು: 2025–26ನೇ ಸಾಲಿನಲ್ಲಿ ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮದ ವಿವಿಧ ಯೋಜನೆಗಳ ಸೌಲಭ್ಯ ಪಡೆಯಲು ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು http://sevasindhu.karnataka.gov.in ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಸಲ್ಲಿಸಲು ಸೆಪ್ಟೆಂಬರ್ 10 ಕೊನೆಯ ದಿನವಾಗಿರುತ್ತದೆ. ಮಾಹಿತಿಗಾಗಿ ಕಚೇರಿ ದೂರವಾಣಿ ಸಂಖ್ಯೆ: 9482300400 ಅನ್ನು ಸಂಪರ್ಕಿಸಬಹುದು ಎಂದು ಕರ್ನಾಟಕ ಆದಿ ಜಾಂಬವ ಅಭಿವೃದ್ಧಿ ನಿಗಮ ನಿಯಮಿತ ಜಿಲ್ಲಾ ವ್ಯವಸ್ಥಾಪಕರು ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಸಾಮಾಜಿಕ, ಆರ್ಥಿಕ, ಧಾರ್ಮಿಕ ಸಮಾನತೆಗೆ ಶಿಕ್ಷಣವೇ ಮೂಲ ಅಡಿಗಲ್ಲು

ವಿಧಾನಸಭಾ ಸಭಾಧ್ಯಕ್ಷ ಯು.ಟಿ.ಖಾದರ್ ಅಭಿಮತ



ಮೈಸೂರು, ಆ.10(ವಿವಿಹೆಚ್)– ಶಿಕ್ಷಣ ಎಂಬುದು ಸಾಮಾ ಜಿಕ, ಆರ್ಥಿಕ, ಧಾರ್ಮಿಕ ಸಮಾ ನತೆಯ ಮೂಲ ಅಡಿಗಲ್ಲಾಗಿದೆ ಎಂದು ವಿಧಾನ ಸಭಾಧ್ಯಕ್ಷ ಯು. ಟಿ. ಖಾದರ್ ಹೇಳಿದರು.

ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹ ಯೋಗದೊಂದಿಗೆ ಮೈಸೂರಿನ ತಿಲಕ್ ನಗರದ ಎ.ಆರ್.ಕನ್ವೆನ್ಷನ್ ಹಾಲ್‌ನಲ್ಲಿ ಮೈಸೂರು ಬ್ಯಾರಿ ವೆಲ್ಫೇರ್ ಅಸೋಸಿಯೇಶನ್ ವತಿಯಿಂದ ಭಾನುವಾರ ಆಯೋಜಿಸಿದ್ದ 2024ನೇ ಸಾಲಿನ ಗೌರವ ಪ್ರಶಸ್ತಿ ಪ್ರದಾನ ಮತ್ತು ಬ್ಯಾರಿ ಕುಟುಂಬ ಸಮ್ಮಿಲನ (ಪಿರ್ಸಪ್ಪಾಡ್) ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಬ್ಯಾರಿ ಸಮುದಾಯಕ್ಕೆ ಸರಿಯಾದ ಶಿಕ್ಷಣ ದೊರೆಯುತ್ತಿಲ್ಲ. ಎಷ್ಟೆ ಅಡೆತಡೆಗಳಿದ್ದರೂ ಸಮುದಾಯದ ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸುವ ಕೆಲಸವನ್ನು ಪೋಷಕರು ಮಾಡಬೇಕು. ಆಗ ಸಮುದಾಯ ಸ್ವಾಭಿಮಾನದ ಬದುಕು ಸಾಗಿಸಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಬ್ಯಾರಿ ಸಮುದಾಯಕ್ಕೆ ಎಲ್ಲಾ ರಂಗಗಳಲ್ಲಿಯೂ ಸಮಾನ ಅವಕಾಶಗಳನ್ನು ಸರ್ಕಾರ ಒದಗಿಸಿ ಕೊಡಬೇಕು. ಸಿಕ್ಕ ಅವಕಾಶಗಳನ್ನೆಲ್ಲಾ ಸಮರ್ಥವಾಗಿ ಬಳಸಿಕೊಳ್ಳುವ ಮೂಲಕ ಟೀಕೆ, ಟಿಪ್ಪಣಿಗಳನ್ನು ಮೆಟ್ಟಿಲು ಮಾಡಿಕೊಂಡು ಯಶಸ್ಸು ಮುಟ್ಟಬೇಕು. ಆ ಮೂಲಕ ಸಮುದಾಯದ ಏಳಿಗೆಗೆ ಯುವ ಸಮೂಹ ಶ್ರಮಿಸಬೇಕು ಎಂದರು.

ನಮ್ಮ ಹಿರಿಯರು ಆರ್ಥಿಕವಾಗಿ, ಶೈಕ್ಷಣಿಕವಾಗಿ ಬಹಳ ಹಿಂದೆ ಉಳಿದಿದ್ದರೂ, ಅವರ ತ್ಯಾಗ, ಶ್ರಮದಿಂದಾಗಿ ನಾವಿಂದು ಸಮಾಜದಲ್ಲಿ ಸ್ವಾಭಿಮಾನ, ಗೌರವದಿಂದ ಬಾಳಲು ಸಾಧ್ಯವಾಗಿದೆ. ಮೈಸೂರನ್ನು ಕೇಂದ್ರವನ್ನಾಗಿಸಿಕೊಂಡು ಎಲ್ಲರನ್ನೂ ಒಗ್ಗೂಡಿಸಲು ನಿರಂತರವಾಗಿ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ಸಮುದಾಯವನ್ನು ಜಾಗೃತಗೊಳಿಸಬೇಕು ಎಂದು ಸೂಚಿಸಿದರು.

ಈ ವೇಳೆ 2024ನೇ ಸಾಲಿನ ಗೌರವ ಪ್ರಶಸ್ತಿಗೆ ಭಾಜನರಾದ ಡಾ.ಮಕ್ಸೂದ್ ಅಹ್ಮದ್ ಮುಲ್ಕಿ (ಬ್ಯಾರಿ ಭಾಷೆ–ಸಂಘಟನೆ), ಪಿ.ಎಂ.ಹಸನಬ್ಬ ಮೂಡುಬಿದಿರೆ (ಬ್ಯಾರಿ ಕಲೆ–ಸಂಸ್ಕೃತಿ) ಮತ್ತು ಹೈದರಾಲಿ ಕಾಟಿಪಳ್ಳ (ಬ್ಯಾರಿ ಸಾಹಿತ್ಯ) ಗೌರವಿಸಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ 'ಪೆರಿಮೆ' ಪುಸ್ತಕವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ ಬಿಡುಗಡೆಗೊಳಿಸಿದರು. 'ಬೆಲ್ಕಿರಿ' ಪುಸ್ತಕವನ್ನು ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಬಿಡುಗಡೆಗೊಳಿಸಿದರು.

ದ.ಕ ಮತ್ತು ಕರಾವಳಿ ಜಿಲ್ಲಾ ಸಂಘಗಳ ಒಕ್ಕೂಟದ ಅಧ್ಯಕ್ಷ ಗ್ರೇಶಿಯಸ್ ರೋಡ್ರಿಗಸ್, ಕರ್ನಾಟಕ ವಸ್ತು ಪ್ರದರ್ಶನ ಮಾಜಿ ಅಧ್ಯಕ್ಷ ಅಬ್ದುಲ್ ಅಝೀಝ್, ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಯು.ಎಚ್. ಉಮರ್, ರಿಜಿಸ್ಟ್ರಾರ್ ಜಿ.ರಾಜೇಶ್, ಬ್ಯಾರಿ ವೆಲ್ಫೇರ್ ಅಸೋಸಿಯೇಶನ್ ಕಾರ್ಯಕಾರಿ ಸಮಿತಿ ಸದಸ್ಯ ಜನಾಬ್ ಅತೂರ್ ಚೆಯ್ಯಬ್ಬ, ಮೈಸೂರು ಬ್ಯಾರಿ ವೆಲ್ಫೇರ್ ಅಸೋಸಿಯೇಶನ್ ಅಧ್ಯಕ್ಷ ಯು.ಕೆ.ಹಮೀದ್, ಪ್ರಧಾನ ಕಾರ್ಯದರ್ಶಿ ಎಂ.ಐ.ಅಹ್ಮದ್ ಬಾವ, ಯು.ಎಚ್.ಖಾಲಿದ್ ಉಜಿರೆ ಇತರರಿದ್ದರು.

ಕಥೆಗಾರರು ಪಾತ್ರಗಳ ಸಾರವನ್ನು ಗಟ್ಟಿಗೊಳಿಸುವಲ್ಲಿ ಆದ್ಯತೆ ನೀಡಬೇಕು

ಸಂಸ್ಕೃತಿ ಚಿಂತಕ ಮಹೇಶ್ ಹರವೆ ಸಲಹೆ

ಮೈಸೂರು,ಆ.10(ಎಂಟಿವೈ)–ಕಥೆಗಾರರು ಪಾತ್ರಗಳ ಸಾರವನ್ನು ಗಟ್ಟಿಗೊಳಿಸುವಲ್ಲಿ ಆದ್ಯತೆ ನೀಡಬೇಕು. ಹೊಸದಾಗಿ ಕಥೆ ಬರೆಯುವವರು ಪ್ರಾತ್ರಗಳ ಸಾರದ ಬಗ್ಗೆ ಹೆಚ್ಚಿನ ಗಮನಹರಿಸಬೇಕು ಎಂದು ಸಂಸ್ಕೃತಿ ಚಿಂತಕ ಮಹೇಶ್ ಹರವೆ ಸಲಹೆ ನೀಡಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಹಾರ್ಡ್ವಿಕ್ ಶಾಲಾ ಆವರಣದಲ್ಲಿರುವ ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆಯಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಪ್ರಕಾಶ್ ಪುಟ್ಟಪ್ಪ ಅವರ ಕಥಾ ಸಂಕಲನ 'ಗಾಂಧೀ ಜೋಡಿನ ಮಳಿಗೆ' ಕುರಿತು ಮಾತನಾಡಿದ ಅವರು, ಖ್ಯಾತ ಕಾದಂಬರಿಕಾರ–ಕಥೆಗಾರ ಮಾರ್ಕೋೕವಿಜ್ ಒಂದೇ ಸಲ ಅರವತ್ತಕ್ಕೂ ಹೆಚ್ಚು ಕಥೆಗಳನ್ನು ಬರೆಯುತ್ತಿದ್ದರು. ಬಳಿಕ ಅವುಗಳನ್ನು ಮತ್ತೆ ಪರಾಮರ್ಶಿಸಿ ಪಾತ್ರಗಳು ಎಲ್ಲಿ ಪುನರಾವರ್ತನೆಯಾಗಿದೆ ಎಂದು ಪರಿಶೀಲಿಸುತ್ತಿದ್ದರು. ನಂತರ ಅವುಗಳನ್ನು ಮತ್ತೆ ಮೂವತ್ತು ಕಥೆಗಳಿಗೆ ಇಳಿಸುತ್ತಿದ್ದರು. ಮತ್ತೊಮ್ಮೆ ಪರಾಮರ್ಶಿಸಿ 30ರಿಂದ 15 ಕಥೆಗೆ ಇಳಿಸುತ್ತಿದ್ದರು. ಅಂತಿಮವಾಗಿ ಐದು ಅಥವಾ ಆರು ಕಥೆಗಳಾಗಿ ಹೊರ ಬರುತ್ತಿದ್ದವು. ಇದರಿಂದಾಗಿ ಅವರ ಕಥೆ–ಕಾದಂಬರಿಯಲ್ಲಿ ಗಟ್ಟಿತನ ಎದ್ದು ಕಾಣುತ್ತಿತ್ತು. ಪಾತ್ರಗಳಲ್ಲಿ ಸಾರವೂ ಇತ್ತು. ಪಾತ್ರಗಳು ಘನಿಕೃತಗೊಂಡಿರುತ್ತಿದ್ದವು. ಆದ್ದರಿಂದ ಕಥೆ ಬರೆಯುವ ಹೊಸ ಲೇಖಕರು–ಬರಹಗಾರರು ಪಾತ್ರಗಳ ಪೋಷಣೆ ಕುರಿತು ಆಲೋಚನೆ ಮಾಡಿ, ಅವುಗಳನ್ನು ಗಟ್ಟಿಗೊಳಿಸಬೇಕು. ಆಗ ಪಾತ್ರಗಳ ಕಸುವು ಹೆಚ್ಚಾಗುತ್ತದೆ ಎಂದರು.



'ಗಾಂಧೀ ಜೋಡಿನ ಮಳಿಗೆ' ಕುರಿತು ಮಹೇಶ್ ಹರವೆ ಮಾತನಾಡಿದರು.

ಕಥೆಗಾರರು ಪಾತ್ರಗಳ ಮೂಲಕ ತಮ್ಮ ಚಿಂತನ–ತತ್ವಗಳನ್ನು ಅರುಹಬೇಕು. ಪೂರ್ಣಚಂದ್ರ ತೇಜಸ್ವಿ ಅವರ 'ಅಬಚೂರಿನ ಪೋಸ್ಟ್ ಆಫೀಸ್' ಕಥೆಯು ಹೊಸ ರೀತಿಯ ಬರವಣಿಗೆಯನ್ನು ಹೊಂದಿತ್ತು. ಅದರಲ್ಲಿ ಗಾಂಧೀಜಿ, ಕುವೆಂಪು, ಲೋಹಿಯಾ ಅವರ ಚಿಂತನೆಗಳು ಅಡಕವಾಗಿದ್ದವು. ಕುವೆಂಪು ಅವರು ತಾವು ಸೃಷ್ಟಿಸಿದ ಪಾತ್ರಗಳ ಮೂಲಕ ಹಲವು ವಿಚಾರಗಳನ್ನು ಪ್ರಸ್ತುತಪಡಿಸಿದ್ದಾರೆ. ಅದರಂತೆ ನವ್ಯ ಕಥೆಗಾರರು ತಮ್ಮ ಸುತ್ತಲಿನ ಪರಿಸರದ ವಿಚಾರಗಳನ್ನು ತಿಳಿಸಬೇಕು ಎಂದರು. ನಮ್ಮ ಸಮಾಜವು ಎಷ್ಟೇ ಆಧುನಿಕತೆ ಹೊಂದಿದ್ದರೂ, ಎಲ್ಲ ಹೊಸತನವನ್ನು ಚಲನಶೀಲತೆಯಿಂದ ಸ್ವೀಕರಿಸಿದರೂ ಜಾತಿ ವಿಚಾರಗಳು ಬಂದಾಗ ನಿಂತು ಬಿಡುತ್ತದೆ. ಇಂತಹ ಆಯಾಮಗಳು ಪ್ರಕಾಶ್ ಪುಟ್ಟಪ್ಪ ಅವರ ಕಥಾ ಸಂಕಲನದಲ್ಲಿ ಕಾಣಸಿಗುತ್ತದೆ. ತಮಿಳು ಮತ್ತು ಕನ್ನಡ ಎರಡು ಭಾಷೆಯನ್ನು ಬೆರಸಿಕೊಂಡು ಮಾತನಾಡುವ ಸೋಲಿಗರು, ಪೊನ್ನಾಚ್ಚಿ ಭಾಗದ ಗಣಿಗಾರಿಕೆ ಮುಂತಾದ ವಿಚಾರಗಳು ಗಮನ ಸೆಳೆಯುತ್ತವೆ ಎಂದರು.

ಕಾರ್ಯಕ್ರಮದಲ್ಲಿ ಕಥೆಗಾರ ಪ್ರಕಾಶ್ ಪುಟ್ಟಪ್ಪ, ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆಯ ರಾಜೇಶ್ ಇದ್ದರು.

ಈ ಬಾರಿ ಅದ್ದೂರಿ ದಸರಾ ಆಚರಣೆಗೆ ನಿರ್ಧಾರ

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ

- ಯುವ ದಸರಾ ಸ್ಥಳ ನಿಗದಿಗೆ ಜಿಲ್ಲಾಡಳಿತಕ್ಕೆ ಸೂಚನೆ
- ಮೂರ್ನಾಲ್ಕು ದಿನ ಮುನ್ನವೇ ಆನ್‌ಲೈನ್ ಮೂಲಕ ಜಂಬೂಸವಾರಿ, ಪಂಜಿನ ಕವಾಯತು ಟಿಕೆಟ್‌ಗಳ ಮಾರಾಟ



ಮೈಸೂರು ಅರಮನೆ ಮಂಡಳಿ ಸಭಾಂಗಣದಲ್ಲಿ ಭಾನುವಾರ ನಡೆದ ದಸರಾ ಕಾರ್ಯಕಾರಿ ಸಭೆಯ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ 'ನಾಡಹಬ್ಬ ದಸರಾ–2025' ಪೋಸ್ಟರ್ ಬಿಡುಗಡೆ ಮಾಡಿದರು.

ಮೈಸೂರು, ಆ.10(ಪಿಎಂ)– ಈ ಬಾರಿ ದಸರಾ ಮಹೋತ್ಸವದ ಉದ್ಘಾಟಕರ ಹೆಸರನ್ನು ಮುಖ್ಯಮಂತ್ರಿಗಳು ಪ್ರಕಟಿಸಲಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ಮೈಸೂರು ಅರಮನೆ ಆವರಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ದಸರಾ ಗಜಪಡೆ ಸ್ವಾಗತ ಸಮಾರಂಭದಲ್ಲಿ ಮಾಧ್ಯಮದವರಿಗೆ ಪ್ರತಿಕ್ರಿಯೆ ನೀಡಿದ ಅವರು, ದಸರಾ ಉನ್ನತ ಮಟ್ಟದ ಸಮಿತಿಯು ಉದ್ಘಾಟಕರ ಹೆಸರನ್ನು ಅಂತಿಮಗೊಳಿಸಲು ಮುಖ್ಯಮಂತ್ರಿಗಳ ಇಚ್ಛೆಗೆ ಬಿಟ್ಟಿದೆ. ಹಾಗಾಗಿ ಅವರೇ ಉದ್ಘಾಟಕರ ಹೆಸರು ಪ್ರಕಟಿಸುವರು ಎಂದು ಹೇಳಿದರು.

ಇಂದು ಅರಮನೆ ಮಂಡಳಿ ಸಭಾಂಗಣದಲ್ಲಿ ದಸರಾ ಕಾರ್ಯಕಾರಿ ಸಮಿತಿ ಸಭೆ ನಡೆಸಿ, ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಚರ್ಚಿಸಿ ಹಿಂದಿನ ದಸರಾ ಸಂಗತಿಗಳನ್ನು ಪರಾಮರ್ಶಿಸಿದೆವು. ಈ ಬಾರಿ ದಸರಾದಲ್ಲಿ ಹಿಂದಿನ ಸಮಸ್ಯೆಗಳು ಮರುಕಳಿಸದಂತೆ ಅಚ್ಚುಕಟ್ಟಾಗಿ ಆಯೋಜಿಸಬೇಕೆಂದು ಸಭೆಯಲ್ಲಿ ನಿರ್ಧರಿಸಿದ್ದೇವೆ ಎಂದರು.

ಯುವ ದಸರಾ ಸ್ಥಳ: ಕಳೆದ ಬಾರಿ ಯುವ ದಸರಾವನ್ನು ಉತ್ತನಹಳ್ಳಿ ಸಮೀಪ ಮಾಡಲಾಗಿತ್ತು. ಇದು ದೇಶದ ಶ್ರೇಷ್ಠ ಸಂಗೀತಗಾರರು ಭಾಗವಹಿಸುವ ಬೃಹತ್ ಕಾರ್ಯಕ್ರಮ. ಹಾಗಾಗಿ ಯಾವ್ಯಾವ ಕಲಾವಿದರು ಭಾಗವಹಿಸಲಿದ್ದಾರೆ ಎಂಬುದು ಅಂತಿಮಗೊಳಿಸಿ ಹಾಗೂ ಎಷ್ಟು ಜನ ಪ್ರತಿನಿತ್ಯ ಸೇರುತ್ತಾರೆ ಎಂದು ಅವಲೋಕಿಸಿ ನಂತರದಲ್ಲಿ ಯುವ ದಸರಾದ ಸ್ಥಳ ನಿಗದಿಗೊಳಿಸುವಂತೆ ಜಿಲ್ಲಾಡಳಿತಕ್ಕೆ ಸೂಚನೆ ನೀಡಿದ್ದೇನೆ ಎಂದು ತಿಳಿಸಿದರು.

ದಸರಾ ಉನ್ನತ ಮಟ್ಟದ ಸಮಿತಿ ಸಭೆಯಲ್ಲಿ ಮುಖ್ಯಮಂತ್ರಿಗಳು ಈ ಬಾರಿ ದಸರಾವನ್ನು ಅದ್ದೂರಿಯಾಗಿ ಮಾಡುವಂತೆ ತಿಳಿಸಿದ್ದಾರೆ. ವಿಜಯದಶಮಿ ಮೆರವಣಿಗೆ ಹಾಗೂ ಪಂಜಿನ ಕಾವಯತ್ತು ಸಂಬಂಧ ಆನ್‌ಲೈನ್‌ನಲ್ಲಿ ಟಿಕೆಟ್ ಮಾರಾಟ ಮಾಡುವುದು ಮೂರ್ನಾಲ್ಕು ವಾರಗಳ ಮೊದಲೇ ಮಾಡಬೇಕೆಂದು ಇಂದಿನ ಸಭೆಯಲ್ಲಿ ತೀರ್ಮಾನಿಸಿದ್ದೇವೆ ಎಂದರು.

ಅದೇ ರೀತಿ 3 ಸಾವಿರ ಡ್ರೋನ್‌ಗಳ ಪ್ರದರ್ಶನಕ್ಕೂ ನಿರ್ಧರಿಸಲಾಗಿದೆ. ವಸ್ತು ಪ್ರದರ್ಶನದಲ್ಲಿ ಎಲ್ಲಾ ಸರ್ಕಾರಿ ಮಳಿಗೆಗಳು ಸಕಾಲದಲ್ಲಿ ಆರಂಭಗೊಳ್ಳಲು ಕ್ರಮ ವಹಿಸಬೇಕೆಂದು ತೀರ್ಮಾನಿಸಿದ್ದೇವೆ. ದಸರಾ ದೀಪಾಲಂಕಾರವನ್ನು ಎಲ್ಲಾ ವರ್ಷಕ್ಕಿಂತಲೂ ಅದ್ದೂರಿಯಾಗಿ ಮಾಡಬೇಕೆಂದು ನಿರ್ಧರಿಸಿದ್ದು, ಈ ಬಾರಿಯೂ 21 ದಿನಗಳ ಕಾಲ ದೀಪಾಲಂಕರ ಇರಲಿದೆ ಎಂದು ಹೇಳಿದರು.

ವಿಜಯಶದಮಿ ಮೆರವಣಿಗೆಯು ಗಾಂಧಿ ಜಯಂತಿಯಂದೇ ಇರುವ ಕಾರಣ ಸ್ತಬ್ಧಚಿತ್ರ ಮೆರವಣಿಗೆಯಲ್ಲಿ ಗಾಂಧಿ ವಿಚಾರಧಾರೆಗೆ ವಿಶೇಷ ಒತ್ತು ನೀಡಲಾಗುತ್ತಿದೆ. ಜೊತೆಗೆ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಸಾಧನೆ ಹಾಗೂ ಕೊಡುಗೆ ಬಿಂಬಿಸಲು ಒತ್ತು ನೀಡಲಾಗುವುದು. ಎಲ್ಲಾ ಸಮುದಾಯಗಳು ಸೇರಿ ವಿಜೃಂಭಣೆಯಿಂದ ಆಚರಣೆ ಮಾಡುವ ಮೂಲಕ ಶಾಂತಿ ಸೌಹಾರ್ದತೆಯ ಸಂದೇಶ ಸಾರುವುದಕ್ಕೆ ವಿಶೇಷ ಗಮನ ನೀಡಲಾಗುವುದು. ಈ ಬಾರಿ ದಸರಾ ಬಜೆಟ್ ಕಳೆದ ಬಾರಿಗಿಂತಲೂ ಸ್ವಲ್ಪ ಹೆಚ್ಚಾಗಬಹುದು ಎಂದು ಪ್ರತಿಕ್ರಿಯಿಸಿದರು.

ನಮ್ಮ ಸರ್ಕಾರದ ಮುಂದಿನ ಮೂರು ವರ್ಷಗಳ ಅವಧಿಯಲ್ಲೂ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಅವರೇ ದಸರಾದಲ್ಲಿ ಭಾಗವಹಿಸಲಿದ್ದಾರೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಗರಡಿ ಮನೆಗೆ ಜಿಟಿಡಿ ಭೇಟಿ



ಮೈಸೂರಿನ ಮಂಚೇಗೌಡನಕೊಪ್ಪಲಿನ 'ಕೆಂಪೇಗೌಡರ ಗರಡಿ'ಗೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು ಭೇಟಿ ನೀಡಿದರು. ಈ ವೇಳೆ ಪೈಲ್ವಾನ್‌ಗಳಾದ ನಾರಾಯಣ್, ನಾಗರಾಜು, ಚೇತನ, ಪ್ರಜ್ವಲ್, ಶರತ್, ಮನುರಾಜ್, ದೀಪು, ಅಜಯ್ ಮತ್ತಿತರರಿದ್ದರು.

ಸುರಿವ ಮಳೆಯಲ್ಲೇ ಪ್ರಧಾನಿ ಮೋದಿಗೆ ಬೀಳ್ಕೊಡುಗೆ

ಬೆಂಗಳೂರು, ಆ.10– ನಮ್ಮ ಮೆಟ್ರೋ ಹಳದಿ ಮಾರ್ಗಕ್ಕೆ ಚಾಲನೆ ಸೇರಿದಂತೆ ವಿವಿಧ ಕಾರ್ಯಕ್ರಮಗಳ ಉದ್ಘಾಟನೆ ನೆರವೇರಿಸಿದ ಪ್ರಧಾನಿ ಮೋದಿ ಕರ್ನಾಟಕದ ಕಾರ್ಯಕ್ರಮ ಮುಗಿಸಿ ದೆಹಲಿಗೆ ವಾಪಸ್ಸಾದರು.

ಸುರಿವ ಮಳೆಯ ನಡುವೆಯೇ ಪ್ರಧಾನ ಮಂತ್ರಿಗಳನ್ನು ಕರ್ನಾಟಕ ವಿಧಾನ ಪರಿಷತ್ತಿನ ವಿರೋಧ ಪಕ್ಷ ನಾಯಕರಾದ ಛಲವಾದಿ ಟಿ. ನಾರಾಯಣಸ್ವಾಮಿ ಅವರು ಆತ್ಮೀಯವಾಗಿ ಬೀಳ್ಕೊಟ್ಟರು. ಈ ಸಂದರ್ಭದಲ್ಲಿ ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ಕರ್ನಾಟಕ ಪೊಲೀಸ್ ಮಹಾ ನಿರ್ದೇಶಕರಾದ ಡಾ. ಎಂ.ಎ.ಸಲೀಂ, ಬೆಂಗಳೂರು ನಗರ ಪೊಲೀಸ್ ಆಯುಕ್ತರಾದ ಸೀಮಂತ್ ಕುಮಾರ್ ಸಿಂಗ್ ಸೇರಿದಂತೆ ಹಿರಿಯ ಅಧಿಕಾರಿಗಳು ಹಾಗೂ ಗಣ್ಯರು ಉಪಸ್ಥಿತರಿದ್ದರು.

ರೈತರಿಗೆ ಸುಗ್ಗಿ ಸಂಕ್ರಾಂತಿಯಂತೆ ಬಿತ್ತನೆಯ ಕೃಷಿಗೆ ಮುಂಗಾರು ಪರ್ವಕಾಲ

ಕೇಂದ್ರದಿಂದ 3.20 ಲಕ್ಷ ಮೆಟ್ರಿಕ್ ಟನ್ ಗೊಬ್ಬರ ಬಾಕಿ

ನಾಗಮಂಗಲ, ಆ.10– ರೈತರಿಗೆ ಕೃಷಿಯ ಸುಗ್ಗಿ ಸಂಕ್ರಾಂತಿಯಂತೆ ಬಿತ್ತನೆಯ ಕೃಷಿಗೆ ಮುಂಗಾರು ಪರ್ವಕಾಲ ಆಗಿದೆ ಎಂದು ಕೃಷಿ ಸಚಿವ ಚೆಲುವರಾಯಸ್ವಾಮಿ ತಿಳಿಸಿದರು.

ಇಂದು ನಾಗಮಂಗಲದ ಭೂಸಿರಿ ರೈತ ಉತ್ಪಾದಕರ ಕಂಪನಿ, ಬಿಎಸ್ಎಫ್ ಫೌಂಡೇಶನ್, ಕಂದಾಯ ಇಲಾಖೆ, ಕೃಷಿ ಇಲಾಖೆ, ಅರಣ್ಯ ಇಲಾಖೆ ಹಾಗೂ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಸಂಯುಕ್ತಾಶ್ರಯದಲ್ಲಿ ಬಿತ್ತನೆ ರಾಗಿ ವಿತರಣೆ, ರೈತರತ್ನ ಪ್ರಶಸ್ತಿ ಪ್ರಧಾನ ಹಾಗೂ ಪ್ರತಿಭಾ ಪುರಸ್ಕಾರ ಸಮಾರಂಭವನ್ನು ಕೃಷಿ ಉತ್ಪನ್ನ ಮಾರುಕಟ್ಟೆ ಆವರಣದಲ್ಲಿ ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿ ರಾಗಿ ಮತ್ತು ಭತ್ತದ ಬಿತ್ತನೆ ಬೀಜಗಳು ಸರ್ಕಾರದಿಂದ ರಿಯಾಯಿತಿ ದರದಲ್ಲಿ ನೀಡಲಾಗುತ್ತಿದೆ. ಸರ್ಕಾರ ನೀಡುವ ಬಿತ್ತನೆ ಬೀಜಗಳು ಸಂಸ್ಕರಿಸಿ ಪ್ರಮಾಣೀಕರಿಸಲಾಗಿರುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಕಳೆದ ವರ್ಷ ಬೆಳೆಯ ಬಿತ್ತನೆ ಬೀಜ ಶೇಖರಿಸಿಕೊಳ್ಳುವುದು ವಾಡಿಕೆಯಾಗಿದ್ದು ಇಳುವರಿ ಹೆಚ್ಚು ಪಡೆಯಬೇಕೆಂದರೆ ಪ್ರಾಮಾಣೀಕರಿಸಿದ ಬಿತ್ತನೆ ಬೀಜಗಳನ್ನು ಉಪಯೋಗಿಸಿ ಕೃಷಿ ಕೃಷಿಕರು ಮಧ್ಯವರ್ತಿಗಳ ಬಿಟ್ಟು ನೇರವಾಗಿ ಮಾರುಕಟ್ಟೆಯನ್ನು ಸೃಷ್ಟಿಸಿಕೊಂಡಿದ್ದಲ್ಲಿ ಯಾವುದೇ ನಷ್ಟ ಸಂಭವಿಸುವುದಿಲ್ಲ ಎಂದರು. ರಾಜ್ಯದ ಕೃಷಿ ಮಂತ್ರಿಯಾಗಿ ರೈತಪರ ಹಾಗೂ ಜನಪರ ಕೆಲಸ ಮಾಡುತ್ತಿರುವುದನ್ನು ಸಹಿಸದ ವಿರೋಧ ಪಕ್ಷದ ನಾಯಕರಾದ ಅಶೋಕ್ ಹಾಗೂ ಬಿಜೆಪಿ ನಾಯಕರು ಸರ್ಕಾರ ರಸಗೊಬ್ಬರವನ್ನು ಸರಿಯಾಗಿ ಪೂರೈಕೆ ಮಾಡಿಲ್ಲ ಎನ್ನುತ್ತಿದ್ದು ರಾಜ್ಯದಲ್ಲಿ ಯಾವುದೇ ರಸ ಗೊಬ್ಬರದ ಅಭಾವ ಉಂಟಾಗಿಲ್ಲ. ಕೇಂದ್ರದಿಂದ ಬಾಕಿ ಇರುವ 3.20 ಲಕ್ಷ ಮೆಟ್ರಿಕ್ ಟನ್ ರಸ ಗೊಬ್ಬರವನ್ನು ಬಿಜೆಪಿ ನಾಯಕರು ರಾಜ್ಯಕ್ಕೆ ಕೊಡಿಸಲಿ. ಇದರಿಂದ ರೈತರಿಗೆ ಮತ್ತಷ್ಟು ಅನುಕೂಲವಾಗುತ್ತದೆ. ರಸಗೊಬ್ಬರ ಸರಬರಾಜು ಮಾಡಬೇಕಾಗಿರುವುದು ಕೇಂದ್ರ ಸರ್ಕಾರದ ಕೆಲಸ ಎಂದು ಪ್ರತ್ಯುತ್ತರ ನೀಡಿದರು.

ಈ ಹಿಂದೆ ತುಂಬಾ ತಡವಾಗಿ ರಾಗಿ ಖರೀದಿ ಮಾಡಲಾಗುತ್ತಿತ್ತು. ಈ ಬಾರಿ ಮುಂದಿನ ಸಪ್ಟೆಂಬರ್‌ನಿಂದಲೇ ರಾಗಿ ಖರೀದಿ ನೋಂದಣಿ ಆರಂಭಿಸಿ ಡಿಸೆಂಬರ್ ವರೆಗೆ ನೊಂದಣಿ ಮಾಡಿಕೊಳ್ಳಲಾಗುವುದು. ರೈತರು ಮಧ್ಯವರ್ತಿಗಳಿಗೆ ಮಣೆ ಹಾಕದೆ ನೇರವಾಗಿ ಬಂದು ರಾಗಿ ಮಾರಾಟ ಮಾಡಬೇಕು ಎಂದು ತಿಳಿಸಿದರು.

ಸಮಾರಂಭದಲ್ಲಿ ಪ್ರಗತಿಪರ ರೈತರಿಗೆ ರೈತರ ರತ್ನ ಪ್ರಶಸ್ತಿ ಪ್ರಧಾನ ಮಾಡಲಾಗಿದ್ದು ಕಳೆದ ವರ್ಷ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಮಕ್ಕಳನ್ನು ಅಭಿನಂದಿಸಲಾಯಿತು.

ಇದೇ ಸಂದರ್ಭದಲ್ಲಿ ಮಂಡ್ಯ ಜಿಲ್ಲಾ ಹಾಲು ಒಕ್ಕೂಟದ ಅಧ್ಯಕ್ಷ ಶಿವಪ್ಪ ಪುರಸಭೆ ಉಪಾಧ್ಯಕ್ಷೆ ವಸಂತಲಕ್ಷ್ಮಿ, ಮಂಡ್ಯ ಜಿಲ್ಲಾ ಹಾಲು ಒಕ್ಕೂಟ ನಿರ್ದೇಶಕರಾದ ಲಕ್ಷ್ಮಿ ನಾರಾಯಣ್ ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ಮುದ್ದಿಗೌಡ, ಕೃಷಿ ಇಲಾಖೆ ಜಂಟಿ ನಿರ್ದೇಶಕ ಅಶೋಕ್, ತಾಲೂಕು ದಂಡಾಧಿಕಾರಿ ಆದರ್ಶ ಸಹಾಯಕ ಕೃಷಿ ನಿರ್ದೇಶಕ ಹರೀಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎನ್.ಜೆ.ರಾಜೇಶ್, ಪುರಸಭಾ ಸದಸ್ಯ ಸಂಪತ್ ಕುಮಾರ್. ಭೂ ಸಿರಿ ರೈತ ಉತ್ಪಾದಕ ಕಂಪನಿಯ ಅಧ್ಯಕ್ಷ ವೆಂಕಟೇಶ್ ಹಾಗೂ ಕಂಪನಿಯ ನಿರ್ದೇಶಕರುಗಳು ಮುಖಂಡರು ಹಾಜರಿದ್ದರು.



ಸಮಾರಂಭದಲ್ಲಿ ಪ್ರಗತಿಪರ ರೈತರಿಗೆ ರೈತರ ರತ್ನ ಪ್ರಶಸ್ತಿ ಪ್ರಧಾನ ಮತ್ತು ಕಳೆದ ಬಾರಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ನಿಮ್ಮ ಆಶೀರ್ವಾದದಿಂದ ಅಧಿಕಾರಕ್ಕೆ ಬಂದಿದ್ದೇನೆ. ಆ ಋಣ ತೀರಿಸುವ ಕಮಿಟ್ಮೆಂಟ್ ನನಗಿದೆ. ಅದಕ್ಕೆ ಎಂದೂ ಕೂಡ ನಾನು ಮೋಸ ಮಾಡಿದವನಲ್ಲ. ಆದರೆ ಮತದಾರರು ಯಾರು ಎಷ್ಟು ಕೆಲಸ ಮಾಡಿದ್ದಾರೆ. ಯಾವ ಯಾವ ಅಭಿವೃದ್ಧಿ ಕೆಲಸ ಮಾಡಿದ್ದಾರೆಂದು ಅಳೆದು ತೂಗಿ ಮತ ಹಾಕುವುದಿಲ್ಲ. ಕೆಲಸ ಮಾಡಿದವರನ್ನು ಹಾಗೂ ಕೆಲಸ ಮಾಡದವರನ್ನು ಒಂದೇ ತಕ್ಕಡಿಯಲ್ಲಿ ಹಾಕಿ ಮತ ಹಾಕುತ್ತಿರುವುದು ಬೇಸರ ತರಿಸುತ್ತಿದೆ. ತಾಲೂಕಿಗೆ ಯಾರು ಎಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದಾರೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. – ಚಲುವರಾಯಸ್ವಾಮಿ

ಪ್ರಧಾನಿ ಮೋದಿಗೆ ಸಿ.ಎಸ್.ಪುಟ್ಟರಾಜು ಅಭಿನಂದನೆ



ಬೆಂಗಳೂರು ಮೆಟ್ರೋ ಹಳದಿ ಮಾರ್ಗ ಉದ್ಘಾಟನೆಗೆ ಆಗಮಿಸಿದ್ದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅವರು ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಭೇಟಿ ಮಾಡಿ ಅಭಿನಂದನೆ ಸಲ್ಲಿಸಿದರು.

ಕೆ.ಆರ್.ಪೇಟೆ ತಾಲೂಕು ವಿಕಲಚೇತನರ ಕ್ಷೇಮಾಭಿವೃದ್ಧಿ ಸಂಘಕ್ಕೆ ಸೋಮು ಅಧ್ಯಕ್ಷ



ಸಂಘದ ನೂತನ ಅಧ್ಯಕ್ಷರಾಗಿ ಅನುವಿನಕಟ್ಟೆ ಸೋಮು ಅವಿರೋಧವಾಗಿ ಆಯ್ಕೆಯಾಗಿದ್ದು, ಸಂಘದ ಪದಾಧಿಕಾರಿಗಳು ಅಭಿನಂದಿಸಿದರು.

ಕೆ.ಆರ್.ಪೇಟೆ,ಆ.10– ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ವಿಕಲಚೇತನರ ಸಭೆಯಲ್ಲಿ ತಾಲೂಕು ವಿಕಲಚೇತನರ ಕ್ಷೇಮಾಭಿವೃದ್ಧಿ ಸಂಘದ ನೂತನ ಅಧ್ಯಕ್ಷರಾಗಿ ಅನುವಿನಕಟ್ಟೆ ಸೋಮು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ಉಪಾಧ್ಯಕ್ಷರಾಗಿ ಅಗ್ರಹಾರ ಬಾಚಹಳ್ಳಿ ಜವರೇಗೌಡ, ಕೆ.ಪಿ.ಅಭಿಲಾಷ್, ಕಾರ್ಯದರ್ಶಿಯಾಗಿ ಸಿ.ಎನ್. ಭವ್ಯ, ಖಜಾಂಚಿಯಾಗಿ ಎಂ.ಎಸ್.ಗಂಗಾಧರ್, ಜಂಟಿ ಕಾರ್ಯದರ್ಶಿಯಾಗಿ ಹರೀಶ್ ಮತ್ತು ಶಿವರಾಮ್, ಕಾನೂನು ಸಲಹೆಗಾರರಾಗಿ ಎಂ.ಆರ್.ಪ್ರಭಾಕರ್, ನಿರ್ದೇಶಕರುಗಳಾಗಿ ಧ್ರುವಕುಮಾರ್, ಕುಮಾರ ಶೆಟ್ಟಿ, ನವಿನ್‌ಕುಮಾರ್, ಕೃಷ್ಣ ಶೆಟ್ಟಿ, ಸತೀಶ್, ಸೌಭಾಗ್ಯ ತಾಲೂಕು ಸಂಘದ ಕಾರ್ಯಕಾರಣಿ ಸದಸ್ಯರಾಗಿ ಚಂದ್ರೌಡ, ಧನಲಕ್ಷ್ಮೀ, ನಿವೇದನಗೌಡ, ನಾರಾಯಣ ಶೆಟ್ಟಿ ರಾಹುಲ್, ಶ್ರೀನಿವಾಸ್, ಹರ್ಷಿತ, ವರ್ದನ್, ಭಾಗ್ಯಮ್ಮ ಇತರರು ಸಂಘಕ್ಕೆ ಆಯ್ಕೆಯಾದರು.

ಪದಾಧಿಕಾರಿಗಳಿಂದ ಅಭಿನಂದನೆ ಸ್ವೀಕರಿಸಿ ಮಾತನಾಡಿದ ತಾಲೂಕು ವಿಕಲಚೇತನರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಉಪನ್ಯಾಸಕ ಅನುವಿನಕಟ್ಟೆ ಸೋಮು ತಾಲೂಕಿನಲ್ಲಿರುವ ವಿಕಲ ಚೇತನರಿಗೆ ಸರ್ಕಾರದ ವತಿಯಿಂದ ಸಿಗಬೇಕಾದ ಸೌಲಭ್ಯಗಳನ್ನು ಪಡೆದುಕೊಳ್ಳಲು ವಿಕಲ ಚೇತನರು ಸಂಘಟಿತರಾಗಬೇಕಾದ ಅಗತ್ಯವಿದೆ. ಹಾಗೂ ಇತ್ತೀಚಿನ ದಿನಗಳಲ್ಲಿ ವಿಕಲ ಚೇತನರನ್ನು ಅಧಿಕಾರಿಗಳು, ಜನಪ್ರತಿನಿಧಿಗಳು ಹಾಗೂ ಜನಸಾಮಾನ್ಯರು ಕಡೆಗಣಿಸುತ್ತಿದ್ದಾರೆ ಎಂದರು.

ಆರೋಗ್ಯ, ನೈರ್ಮಲ್ಯ ಕುರಿತಾಗಿ ಗ್ರಾಮೀಣ ಭಾಗದ ಜನರಿಗೆ ಜಾಗೃತಿ ಮೂಡಿಸಬೇಕು

ಮಂಡ್ಯ: ಆರೋಗ್ಯ, ನೈರ್ಮಲ್ಯ, ಶಿಕ್ಷಣ ಸೇರಿದಂತೆ ಇನ್ನಿತರ ವಿಷಯಗಳಲ್ಲಿ ಗ್ರಾಮೀಣ ಭಾಗದ ಜನರಿಗೆ ರಾಷ್ಟ್ರೀಯ ಸೇವಾ ಯೋಜನೆಯ ವಿದ್ಯಾರ್ಥಿಗಳು ಜಾಗೃತಿ ಮೂಡಿಸಬೇಕು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಅವರು ಹೇಳಿದರು.

ಭಾನುವಾರ ತಾಲೂಕಿನ ಚಿಕ್ಕಬುಳ್ಳಿ–ಆನಸೋಸಲು ಗ್ರಾಮದಲ್ಲಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ಮಂಡ್ಯ ರಾಷ್ಟ್ರೀಯ ಸೇವಾ ಯೋಜನೆ ಘಟಕ, ಕೃಷಿ ಮಹಾವಿದ್ಯಾಲಯ ವಿ.ಸಿ. ಫಾರಂ ವತಿಯಿಂದ ನಡೆದ ದ್ವಿತೀಯ ವರ್ಷದ ಬಿಎಸ್ಸಿ ಕೃಷಿ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಸೇವಾ ಯೋಜನೆ ವಿಶೇಷ ಶಿಬಿರ ಕಾರ್ಯಕ್ರಮದಲ್ಲಿ ಪಾಲ್ಗೊಂಡು ವಿಶೇಷ ಉಪನ್ಯಾಸ ನೀಡಿ ಮಾತನಾಡಿದರು.

ಕಾಲೇಜು ಹಂತದಲ್ಲಿಯೇ ಮಕ್ಕಳಲ್ಲಿ ಸೇವಾ ಮನೋಭಾವ ಮೂಡಿಸುವ ಗುರಿ ಎನ್‌ಎಸ್‌ಎಸ್ ಹೊಂದಿದೆ. ಅದರ ತತ್ವ ಆಶಯಗಳನ್ನು ವಿದ್ಯಾರ್ಥಿಗಳು ಅನುಸರಿಸಬೇಕು ಎಂದು ಹೇಳಿದರು.

ವಿದ್ಯಾರ್ಥಿ ದೆಸೆಯಲ್ಲಿ ಯುವಜನತೆ ದುಶ್ಚಟಗಳಿಗೆ ಬಲಿಯಾಗುವ ಸಾಧ್ಯತೆ ಹೆಚ್ಚು ಇರುತ್ತದೆ, ವಿದ್ಯಾರ್ಥಿಗಳು ಯಾವುದೇ ದುಶ್ಚಟಗಳಿಂದ ದೂರವಿರಬೇಕು. ವಿದ್ಯಾರ್ಥಿಗಳು ಹೆಚ್ಚಾಗಿ ಮೊಬೈಲ್‌ನಲ್ಲಿ ಸಮಯ ಕಳೆದು ತಮ್ಮ ಜೀವನವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ಮೊಬೈಲ್ ಅನ್ನು ಅತಿಯಾಗಿ ಬಳಸದೆ ವಿದ್ಯಾಭ್ಯಾಸದತ್ತ ಗಮನ ಹರಿಸಿ ಎಂದು ತಿಳಿ ಹೇಳಿದರು.



ವಿದ್ಯಾರ್ಥಿಗಳು ಉತ್ತಮವಾಗಿ ಅಧ್ಯಯನ ಮಾಡಿದರೆ ಐಎಫ್‌ಎಸ್, ಐಆರ್ ಎಸ್, ಬ್ಯಾಂಕ್ ಅಧಿಕಾರಿಗಳು, ಕೃಷಿ ಅಧಿಕಾರಿಗಳಾಗಬಹುದು. ಸಂಶೋಧನೆ ಮಾಡುವವರಿಗೆ ಸಾಕಷ್ಟು ಅವಕಾಶಗಳಿವೆ. ಇವುಗಳನ್ನು ಬಳಸಿಕೊಂಡು ತಮ್ಮ ಜೀವನವನ್ನು ರೂಪಿಸಿಕೊಳ್ಳಿ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ನಿವೃತ್ತ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಎ.ಎಂ.ಅಣ್ಣಯ್ಯ, ಜಿಲ್ಲಾ ಕೆಡಿಪಿ ಸದಸ್ಯ ಸಿ.ಎಂ.ದ್ಯಾವಪ್ಪ ಸೇರಿದಂತೆ ಇನ್ನಿತರರು ಹಾಜರಿದ್ದರು.

ಅರ್ಜಿ ಆಹ್ವಾನ

ಮಂಡ್ಯ, ಆ.10– ಚಿನಕುರಳಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ 2 ವರ್ಷದ ವೃತ್ತಿಗಳಾದ ಎಲೆಕ್ಟ್ರಾನಿಕ್, ಮೆಕ್ಯಾನಿಕ್, ಎಂಎಂವಿ ಫಿಟ್ಟರ್ ಮತ್ತು ಉದ್ಯೋಗ ಯೋಜನೆ ಅಡಿ ಎಂಇವಿ, ಎಂಪಿಸಿವಿ, ವಿಎಡಿ–ಎಫ್‌ಇಎಮ್ ಹಾಗೂ ಸಿಎನ್‌ಸಿ–ಎಮ್‌ಟಿ 1 ವರ್ಷ ವೃತ್ತಿಗಳಾದ ಐಆರ್‌ಡಿಎಂ, ಇಡಿಟಿ ವೃತ್ತಿಗಳಿಗೆ ಪ್ರವೇಶ ಪಡೆಯಲು ಎಸ್‌ಎಸ್‌ಎಲ್‌ಸಿ ತೇರ್ಗಡೆಯಾಗಿರುವ ಅರ್ಹ ಮಹಿಳಾ ಮತ್ತು ಪುರುಷ ಅಭ್ಯರ್ಥಿಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ: 9483733891, 9980111058, 9964975394 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಚಿನಕುರಳಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಪ್ರಾಚಾರ್ಯರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿವೃತ್ತ ಎಎಸ್‌ಐ ದೇವೇಗೌಡ ನಿಧನ



ಕೆ.ಆರ್.ಪೇಟೆ, ಆ.10– ತಾಲೂಕಿನ ಅಗ್ರಹಾರಬಾಚಹಳ್ಳಿ ಗ್ರಾಮದ ಹಿರಿಯ ಮುಖಂಡರಾದ ದಿ.ಮಿಲ್ ಸಿದ್ದೇಗೌಡರ ಮಗ ನಿವೃತ್ತ ಸಹಾಯಕ ಸಬ್ ಇನ್ಸ್‌ಪೆಕ್ಟರ್ ದೇವೇಗೌಡ ಉರುಫ್ ರಾಮೇಗೌಡ(70) ಬೆಂಗಳೂರಿನಲ್ಲಿ ನಿಧನ ಹೊಂದಿದ್ದಾರೆ.

ಮೃತರು ಪತ್ನಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಸೋಮವಾರ (ಆ.11) ಹುಟ್ಟೂರು ಅಗ್ರಹಾರ ಬಾಚಹಳ್ಳಿ ಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

ಹಳದಿ ಮಾರ್ಗಕ್ಕೆ ಚಾಲನೆ

25 ಲಕ್ಷ ಪ್ರಯಾಣಿಕರಿಗೆ ಅನುಕೂಲ ಆಗಲಿದೆ. ಬೆಂಗಳೂರಿನ ಕಂಪನಿಗಳು ಜಾಗತಿಕವಾಗಿ ಸ್ಪರ್ಧಿಸುತ್ತಿದೆ. ಸ್ಪರ್ಧಿಸುವುದು ಮಾತ್ರ ಅಲ್ಲ ನಾವು ಮುನ್ನಡೆಸುವ ಮಟ್ಟಕ್ಕೆ ಬೆಳೆಯಬೇಕು. ಕರ್ನಾಟಕವನ್ನು ವಿಕಾಸದತ್ತ ಕೊಂಡೊಯ್ಯುತ್ತೇವೆ. ಮೇಕ್ ಇನ್ ಇಂಡಿಯಾದಲ್ಲಿ ಉತ್ಪಾದನೆಯಲ್ಲಿ ಬೆಂಗಳೂರು, ಕರ್ನಾಟಕದ ಪಾಲು ಹೆಚ್ಚು ಹೆಚ್ಚಿರಬೇಕು ಎಂದರು.

ಭಾರತ ಇಂದು ವಿಶ್ವದಲ್ಲಿ ಆರ್ಥಿಕ ವ್ಯವಸ್ಥೆಯಲ್ಲಿ 5ನೇ ಸ್ಥಾನದಲ್ಲಿದೆ. ನಾವು ಮೂರನೇ ಸ್ಥಾನಕ್ಕೆ ತಲುಪಬೇಕು. ಈ ಗುರಿ ತಲುಪಬೇಕಾದರೆ ಇನ್ನೂ ಹೆಚ್ಚಿನ ಪರಿಶ್ರಮದ ಅಗತ್ಯವಿದೆ. ಇದಕ್ಕೆ ಎಲ್ಲರ ಸಹಕಾರವೂ ಅಗತ್ಯ ಎಂದು ಮನವಿ ಮಾಡಿದರು. 2014ಕ್ಕೂ ಮೊದಲು ದೇಶದ 5 ನಗರಗಳಲ್ಲಿ ಮಾತ್ರ ಮೆಟ್ರೋ ರೈಲು ಇತ್ತು. ನಾವು ಇಂದು 24 ನಗರಗಳಿಗೆ ವಿಸ್ತರಣೆ ಮಾಡಿದ್ದೇವೆ. ಮೆಟ್ರೋ ಹೊಂದಿದ ವಿಶ್ವದ ಮೂರನೇ ರಾಷ್ಟ್ರ ಎಂದರೆ ಅದು ಭಾರತ. 2014 ರವರೆಗೆ 20 ಸಾವಿರ ಕಿ.ಮೀ. ವಿದ್ಯುದೀಕರಣ ಮಾಡಲಾಗಿತ್ತು. ಈಗ ಅದರ ಸಂಖ್ಯೆ 40 ಸಾವಿರಕ್ಕೆ ಏರಿಕೆಯಾಗಿದೆ. 74 ಇದ್ದ ವಿಮಾನನಿಲ್ದಾಣಗಳ ಸಂಖ್ಯೆ 160ಕ್ಕೇರಿದೆ ಎಂದು ಸರ್ಕಾರದ ಸಾಧನೆಗಳನ್ನು ಬಣ್ಣಿಸಿದರು.

2014 ಕ್ಕೂ ಮೊದಲು 7 ಏಮ್ಸ್ ಹಾಗೂ 321 ವೈದ್ಯಕೀಯ ಕಾಲೇಜುಗಳಿದ್ದವು. ಈಗ ಏಮ್ಸ್ ಸಂಖ್ಯೆ 22ಕ್ಕೆ ಹಾಗೂ 704 ವೈದ್ಯಕೀಯ ಕಾಲೇಜುಗಳಿವೆ. ನಮ ಸರ್ಕಾರ ಪ್ರತಿಯೊಂದೂ ಕ್ಷೇತ್ರಕ್ಕೂ ಹೆಚ್ಚಿನ ಆದ್ಯತೆ ನೀಡಿದೆ. ಭಾರತ ಇಂದು ವಿಶ್ವದ 3ನೇ ಅತಿದೊಡ್ಡ ರಾಷ್ಟ್ರವಾಗಿ ಹೊರಹೊಮ್ಮುತ್ತಿದೆ ಎಂದು ಕೊಂಡಾಡಿದರು. ಬೆಂಗಳೂರು ಹೊಸ ಭಾರತದ ಪ್ರಗತಿಯ ಸಂಕೇತವಾಗಿದೆ. ಈ ನಗರವು ಜಾಗತಿಕ ವಲಯದಲ್ಲಿ ಕೀರ್ತಿ ಪತಾಕೆಯನ್ನು ಹಾರಿಸಿದೆ. ಇದರ ಯಶಸ್ಸಿಗೆ ಇಲ್ಲಿನ ಜನರ ಶ್ರಮ ಮತ್ತು ಪ್ರತಿಭೆ ಕಾರಣ. ಇಂತಹ ನಗರಗಳನ್ನು ಭವಿಷ್ಯಕ್ಕಾಗಿ ರೂಪಿಸಬೇಕೆಂದು ಕರೆ ಕೊಟ್ಟರು.

ನಮ್ಮ ಮೆಟ್ರೋಗೆ ರಾಜ್ಯದ ಪಾಲೇ ಹೆಚ್ಚು

ಸರ್ಕಾರವೇ ಹೆಚ್ಚು ಖರ್ಚು ಮಾಡುತ್ತಿದೆ. ಕೇಂದ್ರ ತಾಂತ್ರಿಕ ಮತ್ತು ಹಣಕಾಸು ನೆರವು ಕೊಡುತ್ತಿದೆ. ಹಾಗಾಗಿ ಇದು ಕೇಂದ್ರ, ರಾಜ್ಯಗಳ ಜಂಟಿ ಕಾರ್ಯಕ್ರಮ ಎಂದು ಹೇಳಿದರು. ಈಗಾಗಲೇ 96.10 ಕಿಮೀ ಮೆಟ್ರೋ ರೈಲು ಕೆಲಸ ಮುಗಿದಿದೆ. ಇದಕ್ಕೆ ರಾಜ್ಯ 25,387 ಕೋಟಿ ರೂ. ಖರ್ಚು ಮಾಡಿದೆ. ಕೇಂದ್ರ 7,468.86 ಕೋಟಿ ಖರ್ಚು ಮಾಡಿದೆ, ಹಳದಿ ಮಾರ್ಗಕ್ಕೆ 7,160 ಕೋಟಿ ಖರ್ಚಾಗಿದೆ ಎಂದು ಹೇಳಿದ ಸಿಎಂ ಮೋದಿ ಎದುರಲ್ಲೇ ಕ್ರೆಡಿಟ್ ಕ್ಲೈಮ್ ಮಾಡಿಕೊಂಡರು.

2030ರ ಹೊತ್ತಿಗೆ 220 ಕಿ.ಮೀ ಉದ್ದದ ಮೆಟ್ರೋ ಮಾಡುವುದು ಕೇಂದ್ರದ ಉದ್ದೇಶ. ಇದು ಆದರೆ ನಿತ್ಯ 30 ಲಕ್ಷ ಪ್ರಯಾಣಿಕರು ಮೆಟ್ರೋದಲ್ಲಿ ಪ್ರಯಾಣಿಸಬಹುದು. ಇವತ್ತು 3ನೇ ಹಂತಕ್ಕೆ ಶಂಕುಸ್ಥಾಪನೆ ನೆರವೇರಿಸಲಾಗಿದೆ. 3ಎ ಯೋಜನೆಗೆ ಡಿಪಿಆರ್ ರೆಡಿಯಾಗಿದ್ದು, ಕೇಂದ್ರಕ್ಕೆ ಕಳುಹಿಸಿದ್ದೇವೆ. ಕೇಂದ್ರ ಇದಕ್ಕೆ ಅನುಮತಿ ಕೊಟ್ಟರೆ ಶೀಘ್ರ ಕಾಮಗಾರಿ ಶುರು ಮಾಡಬಹುದು ಎಂದರಲ್ಲದೇ, ಮಹಾರಾಷ್ಟ್ರ ಗುಜರಾತ್ ರಾಜ್ಯಗಳಿಗೆ ಒತ್ತು ಕೊಡುವಷ್ಟೇ ಕರ್ನಾಟಕಕ್ಕೂ ಒತ್ತು ಕೊಡಿ ಎಂದು ವೇದಿಕೆಯಲ್ಲೇ ಪ್ರಧಾನಿಗೆ ಸಿಎಂ ಆಗ್ರಹಿಸಿದರು.

ತಂತ್ರಜ್ಞಾನ: ಮೋದಿ ಅಭಿನಂದನೆ

ಹಾಗೂ ಇಲ್ಲಿನ ಯುವ ತಂತ್ರಜ್ಞರ ಯೋಗದಾನವೂ ಇದೆ. ಆಪರೇಷನ್ ಸಿಂಧೂರ ಯಶಸ್ಸಿಗೆ ಕಾರಣಾದ ಬೆಂಗಳೂರು ನವಯುವಕರಿಗೆ ನಾನು ಅಭಿನಂದನೆ ತಿಳಿಸುತ್ತೇನೆ ಎಂದು ಹೇಳಿದರು.

ಬೆಂಗಳೂರು ನ್ಯೂ ಇಂಡಿಯಾದ ಪ್ರಗತಿಯ ಸಂಕೇತ. ಈ ನಗರ ಗ್ಲೋಬಲ್ ಐಟಿಯಲ್ಲಿ ಭಾರತ ಕೀರ್ತಿ ಪತಾಕೆ ಹಾರಿಸಿದೆ. ಬೆಂಗಳೂರು ಯಶಸ್ಸಿಗೆ ಇಲ್ಲಿನ ಜನರ ಶ್ರಮ, ಪ್ರತಿಭೆ ಕಾರಣ. ಬೆಂಗಳೂರಿನಂತಹ ನಗರಗಳನ್ನು ಭವಿಷ್ಯಕ್ಕಾಗಿ ರೂಪಿಸಬೇಕು. ಅದಕ್ಕಾಗಿ ಕೇಂದ್ರದ ಅನುದಾನ ಹರಿದು ಬರುತ್ತಿದೆ ಎಂದರು.

ಹಳದಿ ಹಾಗೂ ಕಿತ್ತಳೆ ಮೆಟ್ರೋ ಮಾರ್ಗಗಳು ಬೆಂಗಳೂರು ಸಂಚಾರಕ್ಕೆ ದೊಡ್ಡ ಬಲ. ಎರಡೂ ಮಾರ್ಗಗಳಿಂದ 25 ಲಕ್ಷ ಪ್ರಯಾಣಿಕರಿಗೆ ಅನುಕೂಲ ಆಗಲಿದೆ. ಬೆಂಗಳೂರಿನ ಕಂಪನಿಗಳು ಜಾಗತಿಕವಾಗಿ ಸ್ಪರ್ಧಿಸುತ್ತಿದೆ. ಸ್ಪರ್ಧಿಸುವುದು ಮಾತ್ರ ಅಲ್ಲ ನಾವು ಮುನ್ನಡೆಸುವ ಮಟ್ಟಕ್ಕೆ ಬೆಳೆಯಬೇಕು ಎಂದು ಹೇಳಿದರು.

ಭಾರತ ಜಗತ್ತಿನ ಮೂರನೇ ದೊಡ್ಡ ಮೆಟ್ರೋ ಸಂಪರ್ಕ ಇರುವ ದೇಶವಾಗಿದೆ. 2014 ವರೆಗೆ 74 ವಿಮಾನ ನಿಲ್ದಾಣಗಳಿದ್ದವು. ಆದರೆ ಈಗ ಈ ಸಂಖ್ಯೆ 160 ಆಗಿದೆ. ಕರ್ನಾಟಕವನ್ನು ವಿಕಾಸದತ್ತ ಕೊಂಡೊಯ್ಯುತ್ತೇವೆ. ಮೇಕ್ ಇನ್ ಇಂಡಿಯಾ ಉತ್ಪಾದನೆಯಲ್ಲಿ ಬೆಂಗಳೂರು, ಕರ್ನಾಟಕದ ಪಾಲು ಹೆಚ್ಚು ಹೆಚ್ಚಿರಬೇಕು. ಉತ್ಪಾದನೆಯಾಗುವ ವಸ್ತುಗಳು ನ್ಯೂನತೆಯಿಲ್ಲದೆ ಉತ್ಕೃಷ್ಟವಾಗಿರಬೇಕು ಎಂದರು.

ಭಾರತದ ಅಗತ್ಯಗಳನ್ನು ಪೂರೈಸಲು ಒಟ್ಟಿಗೆ ಹೆಜ್ಜೆ ಇಡಬೇಕಿದೆ. ಭಾರತ ಉನ್ನತ ಸ್ಥಾನಕ್ಕೆ ಏರಬೇಕು. ಕೇಂದ್ರ ಸರ್ಕಾರ ಇರಲಿ, ರಾಜ್ಯ ಸರ್ಕಾರ ಇರಲಿ, ನಾವೆಲ್ಲರೂ ದೇಶದ ಜನರ ಸೇವೆಗೆ ಇದ್ದೇವೆ. ಒಟ್ಟಿಗೆ ದೇಶ, ದೇಶದ ಜನರ ಹಿತಕ್ಕೆ ಕೆಲಸ ಮಾಡಬೇಕು ಎಂದರು.

ಅಂಗಳದಲ್ಲಿ ಬೀಡು ಬಿಟ್ಟ ಅಭಿಮನ್ಯು ಪಡೆ



ಅಶೋಕಪುರಂನ ಅರಣ್ಯ ಭವನದಲ್ಲಿ ಭಾನುವಾರ ದಸರಾ ಗಜಪಡೆಗೆ ಪೂಜೆ ಸಲ್ಲಿಸಿ ಬೀಳ್ಕೊಡಲಾಯಿತು.

ನಿಲ್ಲಿಸಲಾಯಿತು. ಬಳಿಕ ಎಲ್ಲಾ ಆನೆಗಳ ಕಾಲುಗಳನ್ನು ತೊಳೆದು, ಅರಿಸಿನ–ಕುಂಕುಮ ಲೇಪಿಸಿ ಅವುಗಳ ಕಾಲುಗಳಿಗೆ ಹೂ ಸುತ್ತಲಾಯಿತು.

ಬಳಿಕ ಅರಮನೆ ಮಂಡಳಿಯಿಂದ ಆನೆಗಳಿಗೆ ಹಾರಗಳನ್ನು ಅರ್ಪಿಸಲಾಯಿತು. ನಂತರ ಉಸ್ತುವಾರಿ ಸಚಿವರು ಸೇರಿದಂತೆ ಇನ್ನಿತರ ಜನಪ್ರತಿನಿಧಿಗಳು, ಅಧಿಕಾರಿಗಳು ಆನೆಗಳಿಗೆ ಪೂಜೆ ಸಲ್ಲಿಸಿದರು. ನಂತರ 21 ವಿಧದ ತಿಂಡಿ ತಿನಿಸುಗಳನ್ನು ಆನೆಗಳಿಗೆ ನೀಡಲಾಯಿತು. ಬಳಿಕ ಪುಷ್ಪಾರ್ಚನೆ ಸಲ್ಲಿಸಿ, ಗಣಪತಿ ಅರ್ಚನೆ ಹಾಗೂ ವೇದ ಘೋಷ ಮಂತ್ರಗಳೊಂದಿಗೆ ಆನೆಗಳನ್ನು ಅರಮನೆಗೆ ಸ್ವಾಗತಿಸಲಾಯಿತು.

ಹರ್ಷೋದ್ಗಾರದ ಭಾವ ವ್ಯಕ್ತಪಡಿಸಿದ ಆನೆಗಳು: ಇದೇ ವೇಳೆ ನಗರ ಪೊಲೀಸ್ ವತಿಯಿಂದ ಗಜಪಡೆಗೆ ಗಾಡ್ ಆಫ್ ಹಾನರ್ ಸಲ್ಲಿಸಿ ಗೌರವ ವಂದನೆ ಸಲ್ಲಿಸಲಾಯಿತು. ಬಳಿಕ ಅಶ್ವರೋಹಿ ಪಡೆ, ಕಳಸ ಹೊತ್ತ ಮುತ್ತೈದೆಯರು, ಮಂಗಳವಾದ್ಯ, ಡೊಳ್ಳು ಕುಣಿತ, ಪೂಜಾ ಕುಣಿತ, ಕಂಸಾಳೆ, ಚಂಡೆ ಸೇರಿದಂತೆ ಇನ್ನಿತರ ಜನಪದ ಕಲಾತಂಡಗಳ ಕಲಾತ್ಮಕ ಮೆರಗಿನೊಂದಿಗೆ ಮೆರವಣಿಗೆ ಮೂಲಕ ಅರಮನೆ ಆನೆ ಬಾಗಿಲಿಗೆ ಗಜಪಡೆಯನ್ನು ಕರೆದೊಯ್ಯಲಾಯಿತು. ಇಲ್ಲಿ ತಂಬೂಲ ಹಸ್ತಾಂತರ ಪ್ರಕ್ರಿಯೆಯೊಂದಿಗೆ ಮತ್ತೆ ಆನೆಗಳಿಗೆ ಪೂಜೆ ನೆರವೇರಿಸಿ ಪುಷ್ಪಾರ್ಚನೆ ಸಲ್ಲಿಸಲಾಯಿತು. ಇದೇ ವೇಳೆ ಝಗಮಗಿಸುತ್ತಿದ್ದ ಅರಮನೆ ವಿದ್ಯುತ್ ದೀಪಾಲಂಕಾರದ ಹಿನ್ನೆಲೆಯೊಂದಿಗೆ ಎಲ್ಲಾ ಆನೆಗಳು ಸೊಂಡಿಲು ಎತ್ತಿ ಹರ್ಷೋದ್ಗಾರದ ಭಾವ ವ್ಯಕ್ತಪಡಿಸಿದವು.

ಪೂಜಾ ವಿಧಿವಿಧಾನ ಪೂರ್ಣಗೊಂಡ ಬಳಿಕ ಮೊದಲ ತಂಡದ 9 ಆನೆಗಳ ಮಾವುತರು ಹಾಗೂ ಕಾವಾಡಿಗಳಿಗೆ ಅಗತ್ಯ ವಸ್ತುಗಳನ್ನು ಹೊಂದಿರುವ ಕಿಟ್‌ಗಳನ್ನು ವಿತರಿಸಲಾಯಿತು. ನಂತರ ಅರಮನೆ ಆವರಣಲ್ಲಿ ದಸರಾ ಗಜಪಡೆಗಾಗಿ ನಿರ್ಮಿಸಿರುವ ತಂಗುದಾಣಕ್ಕೆ ಆನೆಗಳನ್ನು ಕರೆದೊಯ್ದು ಅವುಗಳ ವಿಶ್ರಾಂತಿಗೆ ಅನುವು ಮಾಡಿಕೊಡಲಾಯಿತು.

ಸಚಿವ ಕೆ.ವೆಂಕಟೇಶ್, ಶಾಸಕರಾದ ಜಿ.ಟಿ.ದೇವೇಗೌಡ, ತನ್ವೀರ್‌ಸೇಠ್, ಟಿ.ಎಸ್. ಶ್ರೀವತ್ಸ, ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪಾ ಅಮರನಾಥ್, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು, ಜಿಪಂ ಸಿಇಓ ಎಸ್.ಯುಕೇಶ್ ಕುಮಾರ್, ಮೈಸೂರು ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್. ಸುಬ್ರಹ್ಮಣ್ಯ, ಉಪ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ ವಿಭಾಗ) ಡಾ.ಐ.ಬಿ. ಪ್ರಭುಗೌಡ, ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ವಿಷ್ಣುವರ್ಧನ ಸೇರಿದಂತೆ ಮತ್ತಿತರರು ಹಾಜರಿದ್ದರು.

ಗಜಪಡೆ ಕಣ್ತುಂಬಿಕೊಂಡ ಭಾರಿ ಜನಸ್ತೋಮ



ಮೈಸೂರು,ಆ.10(ಪಿಎಂ)– ಗಜಪಡೆಯು ಅರಣ್ಯ ಭವನ ಆವರಣದಿಂದ ಅರಮನೆ ತಲುಪುವರೆಗೂ ಭಾರೀ ಜನಸ್ತೋಮ ಮಳೆ ನಡುವೆಯೂ ಅವುಗಳನ್ನು ನೋಡಿ ಸಂಭ್ರಮಿಸಿತು. ದಾರಿಯುದ್ದಕ್ಕೂ ಕೊಡೆ ಹಿಡಿದು ನಿಂತಿದ್ದ ಜನತೆಯ ನಡುವೆ ಅವರ ಜೊತೆಗಿ ಚಿಣ್ಣರ ಸಂಭ್ರಮ ಹೇಳತೀರದಾಗಿತ್ತು.

ಮೈಸೂರು ಪೇಟದೊಂದಿಗೆ ಸಂಪ್ರದಾಯಕ ಉಡುಗೆ ಧರಿಸಿದ್ದ ಕಲಾವಿದರ ಮಂಗಳವಾದ್ಯದ ಜೊತೆಗೆ ಆನೆಗಳು ಹೆಜ್ಜೆ ಹಾಕಿದವು. ಅಲ್ಲದೆ, ಎಲ್ಲಾ ಅಗತ್ಯ ಬೀಗಿ ಭದ್ರತೆಯೊಂದಿಗೆ ಗಜಪಡೆಯನ್ನು ಅರಮನೆಗೆ ಕರೆದೊಯ್ಯಲಾಯಿತು. ಆನೆಗಳು ಸಾಗುವ ರಸ್ತೆಗಳಲ್ಲಿ ಅವುಗಳು ಮುಂದೆ ಹೋಗುವರೆಗೂ ವಾಹನಗಳ ಸಂಚಾರಕ್ಕೆ ನಿರ್ಬಂಧ ವಿಧಿಸಲಾಗಿತ್ತು. ಅರಣ್ಯ ಭವನದಿಂದ ಹೊರಟ ಗಜಪಡೆ, ಡಾ.ಬಿ.ಆರ್.ಅಂಬೇಡ್ಕರ್ ರಸ್ತೆ, ಅಶೋಕ ವೃತ್ತ (ಬಲ್ಲಾಳ್ ವೃತ್ತ), ಜೆಎಲ್‌ಬಿ ರಸ್ತೆ, ರಾಮಸ್ವಾಮಿ ವೃತ್ತ, ಚಾಮರಾಜ ಜೋಡಿ ರಸ್ತೆ, ಗನ್‌ಹೌಸ್ ವೃತ್ತ, ಬಿಎನ್ ರಸ್ತೆ ಮೂಲಕ ಅರಮನೆ ಜಯಮಾರ್ತಾಂಡ ದ್ವಾರಕ್ಕೆ ತಲುಪಿದವು.

ಹಾಸ್ಯ ಚಟಾಕಿ ಹಾರಿಸಿದ ಪ್ರಧಾನಿ ಮೋದಿ

ಎಂದು ಪ್ರಶ್ನಿಸಿದ್ದಾರೆ. ಈ ವೇಳೆ ಮಹಿಳೆಯರು 'ನಾವು ಮೆಟ್ರೋದಲ್ಲಿ ಹೋಗಲು ಇಷ್ಟ ಪಡುತ್ತೇವೆ. ಮೆಟ್ರೋ ಪ್ರಯಾಣ ಉತ್ತಮ' ಎಂದು ಉತ್ತರಿಸಿದ್ದಾರೆ. ಈ ವಿಚಾರವನ್ನು ಮೋದಿ ಸಿಎಂ, ಡಿಸಿಎಂ ಕಡೆ ತಿರುಗಿ, 'ನೋಡಿ ಸಿದ್ದರಾಮಯ್ಯನವರೇ ನೀವು ಮಹಿಳೆಯರಿಗೆ ಫ್ರೀ ಬಸ್ ಮಾಡಿದ್ರೂ ಅವ್ರು ಬಸ್ ಇಷ್ಟ ಪಡುತ್ತಿಲ್ಲ. ಮೆಟ್ರೋ ಇಷ್ಟ ಅಂತೆ' ಎಂದು ಹೇಳಿದರು. ಪ್ರಧಾನಿ ಮೋದಿ ಅವರ ಸಂದರ್ಭೋಚಿತ ಹಾಸ್ಯ ಚಟಾಕಿಗೆ ಅಲ್ಲಿದ್ದ ಎಲ್ಲರೂ ನಕ್ಕಿದ್ದಾರೆ. ಫ್ರೀ ಬಸ್ ಉಲ್ಲೇಖಿಸಿ ಮೆಟ್ರೋದಲ್ಲಿ ಮೋದಿಯವರಿಂದ ಸಿಎಂ ಡಿಸಿಎಂಗೆ ಹಾಸ್ಯದ ಮೂಲಕ ಟಾಂಗ್ ನೀಡಿದ್ದಾರೆ.

ಪಯಣ ಉದ್ದಕ್ಕೂ ನಗು... ಮಾತುಕತೆ

ನಂತರ ಎಲೆಕ್ಟ್ರಾನಿಕ್ ಸಿಟಿವರೆಗೆ ಮೆಟ್ರೋದಲ್ಲಿ ಪ್ರಯಾಣಿಸಿದರು. ಈ ವೇಳೆ ಕೆಲ ನಿಮಿಷ ಶಾಲಾ ಮಕ್ಕಳೊಂದಿಗೆ ಮಾತುಕತೆ ನಡೆಸಿದರು. ಬಳಿಕ ಪ್ರಧಾನಿ ನರೇಂದ್ರ ಮೋದಿ, ಸಿಎಂ ಸಿದ್ದರಾಮಯ್ಯ, ಡಿಕೆ ಶಿವಕುಮಾರ್ ಅಕ್ಕಪಕ್ಕ ಕುಳಿತುಕೊಂಡು ಮೆಟ್ರೋನಲ್ಲಿ ಪ್ರಯಾಣ ಮಾಡಿದರು. ಪ್ರಯಾಣದುದ್ದಕ್ಕೂ ಮಾತನಾಡುತ್ತಾ ನಗುತ್ತಾ ಸಾಗಿದ್ದು ವಿಶೇಷವಾಗಿತ್ತು. ಈ ಫೋಟೋ, ವಿಡಿಯೋ ಸೋಷಿಯಲ್ ಮೀಡಿಯಾದಲ್ಲಿ ಸಾಕಷ್ಟು ವೈರಲ್ ಆಗಿದೆ. ಈ ಸಂದರ್ಭದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್, ಬಿಜೆಪಿ ಸಂಸದ ತೇಜಸ್ವಿ ಸೂರ್ಯ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಸೇರಿದಂತೆ ಇತರರು ಮೋದಿ–ಸಿಎಂ ಎದುರುಗಡೆಯ ಆಸನದಲ್ಲಿ ಕುಳಿತು ಪ್ರಯಾಣಿಸಿದರು. ಈ ಸಂದರ್ಭ ದಲ್ಲಿ ಮೋದಿ ಮಾತಿಗೆ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಬಿದ್ದು ಬಿದ್ದು ನಕ್ಕಿದ್ದಾರೆ. ಮೋದಿ, ಸಿದ್ದ ರಾಮಯ್ಯ ಹಾಗೂ ಡಿಕೆ ಶಿವಕುಮಾರ್ ನಗುವುದನ್ನು ಬಿಜೆಪಿ ಇತರೆ ನಾಯಕರು ನೋಡುತ್ತ ಕುಳಿತಿದ್ದರು. ನಂತರ ಪ್ರಯಾಣದುದ್ದಕ್ಕೂ ಆ ಕಡೆ ಈ ಕಡೆ ಕೈ ಸನ್ನೆ ಮಾಡುತ್ತಾ ಉಭಯ ನಾಯಕರು ಮಾತುಕತೆ ನಡೆಸುತ್ತಾ ಎಲೆಕ್ಟ್ರಾನಿಕ್ ಸಿಟಿ ನಿಲ್ದಾಣಕ್ಕೆ ಬಂದಿಳಿದರು.

ಕರ್ನಾಟಕದ ರೈಲ್ವೆ ಬಜೆಟ್ 9 ಪಟ್ಟು ಏರಿಕೆ

ಬಜೆಟ್ ಅನ್ನು ಪ್ರಧಾನಿ ಮೋದಿ ಅವರು ಕರ್ನಾಟಕಕ್ಕೆ ನೀಡಿದ್ದಾರೆ. ಅವರಿಗೆ ಧನ್ಯವಾದಗಳು ಎಂದಿದ್ದಾರೆ. ಕರ್ನಾಟಕದಂತಹ ಪ್ರಮುಖ ರಾಜ್ಯದಲ್ಲಿನ ರೈಲ್ವೆ ಅಭಿವೃದ್ಧಿಗೆ ಹಿಂದಿನ ಸರ್ಕಾರಗಳು ಸರಿಯಾದ ಯೋಜನೆಗಳನ್ನು ರೂಪಿಸಿರಲಿಲ್ಲ. ಆದರೆ, ಇದೀಗ 54 ಸಾವಿರ ಕೋಟಿ ಮೊತ್ತದ ಯೋಜನೆಗಳು ಸಿದ್ಧವಾಗಿವೆ. ಅಮೃತ್ ಭಾರತ ಯೋಜನೆಯಡಿಯಲ್ಲಿ 61 ರೈಲ್ವೆ ನಿಲ್ದಾಣಗಳನ್ನು ಪುನರಾಭಿವೃದ್ಧಿ ಮಾಡಲಾಗುತ್ತಿದೆ ಎಂದು ತಿಳಿಸಿದ್ದಾರೆ. 2047ಕ್ಕೆ ಭಾರತವನ್ನು ಅಭಿವೃದ್ಧಿ ಹೊಂದಿದ ದೇಶವನ್ನಾಗಿ ಮಾಡುವ ಗುರಿ ಹೊಂದಿರುವ 'ವಿಕಸಿತ ಭಾರತ–2047' ಸರ್ಕಾರದ ದೂರದೃಷ್ಟಿ ಯೋಜನೆಯಾಗಿದೆ. ಪ್ರಧಾನಿ ಮೋದಿಯವರು ಇದಕ್ಕಾಗಿ ಪ್ರಯತ್ನಿಸುತ್ತಿದ್ದಾರೆ. ಇದು ಕರ್ನಾಟಕ ಸೇರಿದಂತೆ ಭಾರತದ ಅಭಿವೃದ್ಧಿಗೆ ಸಹಾಯವಾಗಲಿದೆ ಎಂದು ಹೇಳಿದ್ದಾರೆ.

ಆರ್‌ಸಿಬಿ, ಕೆಎಸ್‌ಸಿಎಗೆ ಮತ್ತೊಂದು ಶಾಕ್

ಕಾಲ್ತುಳಿತದಲ್ಲಿ ಉಂಟಾದ ಸಂಪೂರ್ಣ ನಷ್ಟ ಭರಿಸುವಂತೆ ಕಬ್ಬನ್ ಪಾರ್ಕ್ ಅಸೋಸಿಯೇಷನ್ ಕೋರ್ಟ್ ಮೊರೆ ಹೋಗಿ ಒತ್ತಾಯ ಮಾಡಿದ್ದು, ಆರ್‌ಸಿಬಿ ಹಾಗೂ ಕೆಎಸ್‌ಸಿಎಗೆ ಮತ್ತೊಂದು ಬಿಗ್ ಶಾಕ್ ಎದುರಾಗಿದೆ.

ಒಟ್ಟಿನಲ್ಲಿ ಈಗಾಗಲೇ ಕಾಲ್ತುತುಳಿತ ಪ್ರಕರಣದಿಂದ ಕಂಗಾಲಾಗಿರುವ ಆರ್‌ಸಿಬಿ ಹಾಗೂ ಕೆಎಸ್‌ಸಿಎಗೆ ಇದೀಗ ಕಬ್ಬನ್ ಪಾರ್ಕ್ ಅಸೋಸಿಯೇಷನ್ ಶಾಕ್ ನೀಡಿದ್ದು, ಈ ಬಗ್ಗೆ ಎರಡೂ ಆಡಳಿತ ಮಂಡಳಿ ಏನು ಹೇಳುತ್ತವೆ ಎಂದು ಕಾದು ನೋಡಬೇಕಿದೆ.

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಐಪಿಎಲ್ ಟ್ರೋಫಿ ಗೆದ್ದ ನಿಮಿತ್ತ ಜೂನ್ 4 ರಂದು ನಡೆದ ಸಂಭ್ರಮಾಚರಣೆ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಸಂಭವಿಸಿದ ಕಾಲ್ತುಳಿತ ದುರಂತದಲ್ಲಿ 11 ಮಂದಿ ಸಾವನ್ನಪ್ಪಿದ್ದರು. ಪ್ರಕರಣದ ತನಿಖೆ ನಡೆಸಿದ ನಿವೃತ್ತ ನ್ಯಾಯಮೂರ್ತಿ ಮೈಕಲ್ ಡಿ. ಕುನ್ಹಾ ನೇತೃತ್ವದ ತನಿಖಾ ತಂಡ ಸರ್ಕಾರಕ್ಕೆ ತನಿಖಾ ಸಲ್ಲಿಸಿತ್ತು.

ಇಂದಿನಿಂದ ವಿಧಾನಮಂಡಲ ಅಧಿವೇಶನ

ಹಿಂಪಡೆಯಲಾಗಿತ್ತು. ಈ ಕುರಿತ ಸ್ಥಿರೀಕರಣ ಪ್ರಸ್ತಾವ ಮೊದಲ ದಿನ ಮಂಡನೆಯಾಗಲಿದ್ದು, ವಿಧಾನಸಭೆ ಅನುಮೋದನೆ ನೀಡಬೇಕಿದೆ. ಅಭಿವೃದ್ಧಿ ಕಾರ್ಯಗಳಿಗೆ ಅನುದಾನ ಕೊರತೆ, ಶಾಸಕರಿಗೆ ಅನುದಾನ ಬಿಡುಗಡೆಯಲ್ಲಿನ ತಾರತಮ್ಯ, ಜಾತಿ ಗಣತಿ ಮರು ಸಮೀಕ್ಷೆ ಆರ್ಸಿಬಿ ವಿಜಯೋತ್ಸವದ ವೇಳೆ ಸಂಭವಿಸಿದ ಕಾಲ್ತುಳಿತ, ರಸಗೊಬ್ಬರದ ಅಭಾವ, ಪರಿಶಿಷ್ಟರ ಒಳಮೀಸಲಾತಿ ವರದಿ ಸಲ್ಲಿಕೆ ಪರ–ವಿರೋಧ, ಮತಗಳ್ಳತನದ ಆರೋಪವು ಸೇರಿದಂತೆ ಹಲವು ವಿಚಾರಗಳು ಉಭಯ ಸದನಗಳಲ್ಲಿ ಪ್ರತಿಧ್ವನಿಸಲಿವೆ.

ವಿಧೇಯಕಗಳ ಮಂಡನೆ: ಕರ್ನಾಟಕ ನಾಗರಿಕ ಸೇವಾ–2025ನೆ ಸಾಲಿನ (ಸಾಮಾನ್ಯ ನೇಮಕಾತಿ) (ತಿದ್ದುಪಡಿ) ನಿಯಮಗಳು ವಿಧೇಯಕ, ಗ್ರೇಟರ್ ಬೆಂಗಳೂರು ಪ್ರಾಧಿಕಾರ ಆಡಳಿತ (ತಿದ್ದುಪಡಿ ವಿಧೇಯಕ), ಕರ್ನಾಟಕ ಅತ್ಯಾವಶ್ಯಕ ಸೇವೆಗಳ ನಿರ್ವಹಣಾ (ತಿದ್ದುಪಡಿ ವಿಧೇಯಕ) ಸಹಿತ 18ಕ್ಕೂ ಹೆಚ್ಚು ವಿಧೇಯಕಗಳು ಮಂಡನೆಯಾಗಲಿವೆ.

ರಾಜ್ಯದಲ್ಲಿ ಮುಂಗಾರು ಮಳೆ ವಾಡಿಕೆಗಿಂತ ಹೆಚ್ಚಾಗಿದ್ದು, ಅತಿವೃಷ್ಟಿಯಾಗಿದೆ. ನದಿಗಳಲ್ಲಿ ಪ್ರವಾಹ ಉಂಟಾಗಿ ಬೆಳೆಹಾನಿ ಯಾಗಿದ್ದು ರಾಜ್ಯ ಸರಕಾರವು ಈವರೆಗೆ ಯಾವುದೇ ಪರಿಹಾರವನ್ನು ನೀಡಿಲ್ಲ. ಕೆಲವೆಡೆ ವಾಡಿಕೆಗಿಂತ ಕಡಿಮೆ ಮಳೆಯಾಗಿದ್ದು, ಮುಂಗಾರು ಹಂಗಾಮಿನ ಬಿತ್ತನೆಗೆ ಹಿನ್ನಡೆಯಾಗಿ ಅನಾವೃಷ್ಟಿ ಉಂಟಾಗಿದೆ. ಈ ವಿಚಾರವು ಚರ್ಚೆಗೆ ಬರಲಿದೆ. 'ಗೃಹಲಕ್ಷ್ಮಿ ಯೋಜನೆ' ಸೇರಿದಂತೆ ಗ್ಯಾರಂಟಿ ಫಲಾನುಭವಿಗಳಿಗೆ ಸಕಾಲಕ್ಕೆ ಸರ್ಕಾರದಿಂದ ಹಣ ಬಿಡುಗಡೆಯಾಗುತ್ತಿಲ್ಲ ಎಂಬ ಆರೋಪವು ಸದನದಲ್ಲಿ ಪ್ರಸ್ತಾಪವಾಗಲಿದೆ.

ದೇವಾಲಯ ಸಮಿತಿಗೆ ನಿಯಮ ಬಾಹಿರ ನಾಮ ನಿರ್ದೇಶನ : ಆರೋಪ

ಮಡಿಕೇರಿ: ನಗರದ ಶ್ರೀ ಓಂಕಾರೇಶ್ವರ ದೇವಾಲಯ ವ್ಯವಸ್ಥಾಪನಾ ಸಮಿತಿಗೆ ಪ್ರಕಾಶ್ ಆಚಾರ್ಯ ಅವರನ್ನು ನಿಯಮ ಬಾಹಿರವಾಗಿ ನಾಮ ನಿರ್ದೇಶನ ಮಾಡಲಾಗಿದೆ ಎಂದು ಬಿಜೆಪಿಯ ಹಿಂದುಳಿದ ವರ್ಗಗಳ ಮೋರ್ಚಾ ನಗರಾಧ್ಯಕ್ಷ ಗಜೇಂದ್ರ ಕುಶ ಆರೋಪಿಸಿದ್ದಾರೆ.

ಹಿಂದೂ ಧಾರ್ಮಿಕ ಸಂಸ್ಥೆಗಳ ಮತ್ತು ಧರ್ಮಾದಾಯ ದತ್ತಿಗಳ ಇಲಾಖೆಯ ಕಾಯ್ದೆಯನ್ವಯ ನಾಮ ನಿರ್ದೇಶಿತ ಸದಸ್ಯರು ಯಾವುದೇ ರಾಜಕೀಯ ಪಕ್ಷದ ಪದಾಧಿಕಾರಿಯಾಗಿರಬಾರದು. ಆದರೆ ಪ್ರಕಾಶ್ ಆಚಾರ್ಯ ಸಮಿತಿಗೆ ನಾಮ ನಿರ್ದೇಶನವಾಗುವಾಗ ನಗರ ಕಾಂಗ್ರೆಸ್‌ನ ಉಪಾಧ್ಯಕ್ಷರಾಗಿದ್ದರು, ಪ್ರಸ್ತುತ ನಗರಾಧ್ಯಕ್ಷರಾಗಿದ್ದಾರೆ ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ಆಪಾದಿಸಿದ್ದಾರೆ.

ಹಿಂದೂ ಧಾರ್ಮಿಕ ಸಂಸ್ಥೆಗಳ ಮತ್ತು ಧರ್ಮಾದಾಯ ದತ್ತಿಗಳ ಇಲಾಖೆಯ ತಿದ್ದುಪಡಿ ಯಾವುದೇ ರಾಜಕೀಯ ಪಕ್ಷದ ಪದಾಧಿಕಾರಿಯಾಗಿರುವುದು ಕಂಡು ಬಂದಲ್ಲಿ ಅಂತಹವರ ಸದಸ್ಯತ್ವ ಸಹಜವಾಗಿಯೇ ರದ್ದಾಗುತ್ತದೆ.

ಹೀಗಿದ್ದೂ ಕಾಂಗ್ರೆಸ್ ಜಿಲ್ಲಾಧ್ಯಕ್ಷರು, ಶಾಸಕರು ಹಾಗೂ ಮುಖಂಡರುಗಳು ಪ್ರಕಾಶ್ ಆಚಾರ್ಯ ಅವರನ್ನು ನಾಮ ನಿರ್ದೇಶನ ಮಾಡಿರುವ ಔಚಿತ್ಯವೇನು ಎಂದು ಪ್ರಶ್ನಿಸಿದ್ದಾರೆ.

ಯೋಗದಿಂದ ಉತ್ತಮ ಆರೋಗ್ಯ

ಸರ್ಕಾರಿ ಆಯುರ್ವೇದ ಆಸ್ಪತ್ರೆಯ ಮುಖ್ಯ ವೈದ್ಯ ಡಾ.ಶ್ರೀನಿವಾಸ್



ಸರ್ಕಾರಿ ಆಯುರ್ವೇದ ಆಸ್ಪತ್ರೆಯ ಸಭಾಂಗಣದಲ್ಲಿ ಉಚಿತ ಯೋಗ ತರಬೇತಿ ನಡೆಯಿತು.

ವಿರಾಜಪೇಟೆ: ಉತ್ತಮ ಆರೋಗ್ಯದಿಂದ ಇರಲು ಯೋಗ ಸಹಕಾರಿ. ಪ್ರತಿಯೊಬ್ಬರು ಯೋಗ ಮಾಡುವಂತಾಗಬೇಕು ಎಂದು ಸರ್ಕಾರಿ ಆಯುರ್ವೇದ ಆಸ್ಪತ್ರೆಯ ಮುಖ್ಯ ವೈದ್ಯ ಡಾ.ಶ್ರೀನಿವಾಸ್ ತಿಳಿಸಿದರು.

ಕೊಡಗು ಹಿಂದೂ ಮಲಯಾಳಿ ಮಹಿಳಾ ಅಸೋಸಿಯೇಷನ್ ವತಿಯಿಂದ ಸರ್ಕಾರಿ ಆಯುರ್ವೇದ ಆಸ್ಪತ್ರೆ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಉಚಿತ ಯೋಗ ತರಬೇತಿ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ಯೋಗ ಮಾಡುವುದರಿಂದ ಮನುಷ್ಯನ ಕಾಯಿಲೆಗಳನ್ನು ಓಡಿಸಿ ಆರೋಗ್ಯದಿಂದ ಇರಬಹುದು. ಆದ್ದರಿಂದ ಪ್ರತಿ ಯೊಬ್ಬರು ಯೋಗ ಮಾಡುವಂತಾಗಬೇಕು ಎಂದರು.

ಯೋಗ ಮಾಡುವ ಸಂದರ್ಭದಲ್ಲಿ ಮಿತವಾದ ಆಹಾರವನ್ನು ಸೇವಿಸಬೇಕು. ಮಕ್ಕಳು ತಪ್ಪು ದಾರಿಯಲ್ಲಿ ಹೋಗದಂತೆ ಎಚ್ಚರ ವಹಿಸಬೇಕು. ಮಕ್ಕಳು ಮೊಬೈಲ್ ಫೋನ್‌ನಲ್ಲಿ ಹೆಚ್ಚು ಸಮಯ ಕಳೆಯುವುದಕ್ಕಿಂತ ಯೋಗಾಭ್ಯಾಸ ಮಾಡುವಂತಾಗಬೇಕೆಂದು ಕಿವಿಮಾತು ಹೇಳಿದರು.

ಕೊಡಗು ಹಿಂದೂ ಮಲಯಾಳಿ ಮಹಿಳಾ ಅಸೋಸಿಯೇಷನ್ ಅಧ್ಯಕ್ಷೆ ಶೀಭಾ ಪ್ರಥ್ವಿನಾಥ್ ಮಾತನಾಡಿ, ಮಹಿಳೆಯರು ಮುಖ್ಯ ವಾಹಿನಿಗೆ ಬರುವಂತಾಗಬೇಕು. ಅಸೋಸಿಯೇಷನ್‌ನಿಂದ ಸಾರ್ವಜನಿಕರಿಗೆ ಉಚಿತ ಆರೋಗ್ಯ ಶಿಬಿರ ನಡೆಸಿದ್ದೇವೆ, ಸಂಘದ ಸದಸ್ಯರುಗಳಿಗೆ ಸ್ವ ಉದ್ಯೋಗಕ್ಕೆ ಸಂಘದ ವತಿಯಿಂದ ಸಹಕಾರ, ಟೈಲರಿಂಗ್ ಮತ್ತು ಅನಾರೋಗ್ಯದಿಂದ ಇದ್ದವರಿಗೆ ಸಹಾಯ ಸೇರಿದಂತೆ ಅನೇಕ ಕಾರ್ಯಕ್ರಮಗಳನ್ನು ಜಾತಿಮತ ಭೇದವಿಲ್ಲದೆ ನಡೆಸಿಕೊಂಡು ಬರುತಿದ್ದು, ಇದರ ಸದುಪಯೋಗ ಪಡೆದು ಕೊಳ್ಳುವಂತಾಗ ಬೇಕು ಎಂದರು.

ನಿವೃತ್ತ ಶಿಕ್ಷಕಿ ಯೋಗ ಗುರು ಲಲಿತಾ ಪ್ರಸನ್ನ ಮಾತನಾಡಿದರು. ಆಯುರ್ವೇದ ಆಸ್ಪತ್ರೆಯ ಡಾ.ರವಿಕುಮಾರ್, ಡಾ. ವಿನ್ಯಾಸ, ಪುರಸಭೆ ಸ್ಥಾಯಿಸಮಿತಿ ಅಧ್ಯಕ್ಷ ಅಬ್ದುಲ್ ಜಲೀಲ್, ಹಿರಿಯ ಸದಸ್ಯ ಸಿ.ಕೆ. ಪ್ರಥ್ವಿನಾಥ್, ರಜನಿಕಾಂತ್, ಸಭೆಯನ್ನುದ್ದೇಶಿಸಿ ಯೋಗ ಮಹತ್ವದ ಬಗ್ಗೆ ಮಾತನಾಡಿದರು. ವೇದಿಕೆಯಲ್ಲಿ ಯೋಗ ಶಿಕ್ಷಕರಾದ ಶಾಂತಚಂದ್ರ, ಶೀಲಾ ಸುನೀಲ್, ಸುನಿತಾ ಸಂತೋಷ್ ಉಪಸ್ಥಿತರಿದ್ದರು.

ಎಗ್ಗಿಲ್ಲದೆ ಭೂಪರಿವರ್ತನೆಗೆ ಅವಕಾಶ

ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಅಧ್ಯಕ್ಷ ಎನ್.ಯು.ನಾಚಪ್ಪ ಆರೋಪ



ಸಿಎನ್‌ಸಿಯಿಂದ ಸುಂಟಿಕೊಪ್ಪದಲ್ಲಿ ಮಾನವ ಸರಪಳಿಯಿಂದ ಜನಜಾಗೃತಿ ಮೂಡಿಸಿತು.

ಮಡಿಕೇರಿ, ಆ.10–ಬೇರೆ ಕಡೆಯಿಂದ ಬಂದ ಉದ್ಯಮಿಗಳಿಗೆ ಜಿಲ್ಲಾಡಳಿತ ಎಗ್ಗಿಲ್ಲದೆ ಭೂಪರಿವರ್ತನೆಗೆ ಅವಕಾಶ ನೀಡುತ್ತಿದೆ ಎಂದು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆಯ ಅಧ್ಯಕ್ಷ ಎನ್.ಯು.ನಾಚಪ್ಪ ಆರೋಪಿಸಿದ್ದಾರೆ.

ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಸುಂಟಿಕೊಪ್ಪದಲ್ಲಿ 9ನೇ ಮಾನವ ಸರಪಳಿ ಜನಜಾಗೃತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಹೊರಗಿನ ಬಂಡವಾಳಶಾಹಿಗಳು ಕಪ್ಪುಹಣವನ್ನು ಬಳಸಿ ಭೂಖರೀದಿಯಲ್ಲಿ ತೊಡಗಿದ್ದಾರೆ. ದೊಡ್ಡ ದೊಡ್ಡ ರೆಸಾರ್ಟ್‌ಗಳು ತಲೆ ಎತ್ತುತ್ತಿದ್ದು, ಮುಂದಿನ ದಿನಗಳಲ್ಲಿ ದೊಡ್ಡ ಅನಾಹುತವೇ ಎದುರಾಗುವ ಸಾಧ್ಯತೆಗಳಿವೆ ಎಂದು ಆರೋಪಿಸಿದರು.

ರಾಷ್ಟ್ರೀಯ ಜನಗಣತಿ ಮತ್ತು ಜನಾಂಗವಾರು ಮಾಹಿತಿ ಸಂಗ್ರಹಿಸುವ ಸಂದರ್ಭ ಪ್ರತ್ಯೇಕ ಕಾಲಮ್ ಮತ್ತು ಕೋಡ್ ಸೇರಿಸುವುದರಿಂದ ಕೊಡವ ಸಮುದಾಯಕ್ಕೆ ಆಗಬಹುದಾದ ಲಾಭಗಳನ್ನು ಸಮಸ್ತ ಕೊಡವರು ಅರಿತುಕೊಳ್ಳಬೇಕು. ಸಾಂವಿಧಾನಿಕ ಹಕ್ಕುಗಳಿಗಾಗಿ ಸಿಎನ್‌ಸಿ ನಡೆಸುವ ಶಾಂತಿಯುತ ಹೋರಾಟಕ್ಕೆ ಕೈಜೋಡಿಸಬೇಕು. ಎಂದು ನಾಚಪ್ಪ ತಿಳಿಸಿದರು.

ಚೋಳಪಂಡ ಜ್ಯೋತಿ, ನಂದಿನೆರವಂಡ ರೇಖಾ, ಮರುವಂಡ ಲಿಲ್ಲಿ, ಮಂಡಿರ ಸಬಿತಾ, ಮುಕ್ಕಾಟಿರ ಎ.ವಸಂತ್, ಪುಡಿಯಂಡ ಮುತ್ತಣ್ಣ, ದಾಸಂಡ ದೇವಯ್ಯ, ಕುಪ್ಪಂಡ ಮಹೇಶ್, ನಂದಿನೆರವಂಡ ಅಪ್ಪಯ್ಯ, ಮಾಳೇಟಿರ ಉತ್ತಪ್ಪ ಮತ್ತಿತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಿಎನ್‌ಸಿಯ ಕೊಡವ ಲ್ಯಾಂಡ್ ಹೋರಾಟದೊಂದಿಗೆ ತಮ್ಮನ್ನು ಸಮರ್ಪಿಸಿಕೊಳ್ಳುವ ಪ್ರತಿಜ್ಞೆ ಸ್ವೀಕರಿಸಿದರು.

ಆ.15ರಂದು ಬಾಳೆಲೆಯಲ್ಲಿ ಕೆಸರು ಗದ್ದೆ ಕ್ರೀಡಾಕೂಟ

ಗೋಣಿಕೊಪ್ಪ: ಬಾಳೆಲೆ ಫಾರ್ಮರ್ಸ್ ಅಸೋಸಿಯೆಷನ್ ವತಿಯಿಂದ ನಿಟ್ಟೂರು ಗ್ರಾಮದಲ್ಲಿರುವ ಡ.ಮಾಪಂಗಡ ಬೆಳ್ಯಪ್ಪ ಗದ್ದೆಯಲ್ಲಿ ಆ.15ರಂದು ಪೊನ್ನಂಪೇಟೆ ತಾಲೂಕು ಮಟ್ಟದ ಕೆಸರು ಗದ್ದೆ ಕ್ರೀಡಾಕೂಟ ಆಯೋಜಿಸಲಾಗಿದೆ ಎಂದು ಅಸೋಸಿಯೇಷನ್ ಅಧ್ಯಕ್ಷ ಅಳಮೇಂಗಡ ಬೋಸ್ ದೇವಯ್ಯ ತಿಳಿಸಿದ್ದಾರೆ.

ವಿವಿಧ ಸಂಘ–ಸಂಸ್ಥೆಗಳ ಸಹಯೋಗದಲ್ಲಿ 4ನೇ ವರ್ಷದ ಕ್ರೀಡಾಕೂಟ ಆಯೋಜಿಸಲಾಗುತ್ತಿದ್ದು, 10 ವರ್ಷ, 10–14 ವರ್ಷ, 15 ರಿಂದ 17 ವರ್ಷ, 18–35 ವರ್ಷದ ಯುವಕರಿಗೆ, 36 ವರ್ಷ ಮೇಲ್ಪಟ್ಟವರಿಗೆ ಹಾಗೂ 56 ವರ್ಷ ಮೇಲ್ಪಟ್ಟವರಿಗೆ ಸ್ಪರ್ಧೆ ನಡೆಯಲಿದೆ ವಿದ್ಯಾರ್ಥಿಗಳಿಗೆ ಮಧ್ಯಾಹ್ನ 2 ಗಂಟೆಯ ನಂತರ ಸ್ಪರ್ಧೆ ನಡೆಯಲಿದೆ ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಆ.13 ರಂದು ನೋಂದಣಿಗೆ ಕೊನೆಯ ದಿನಾಂಕವಾಗಿದೆ. ಹೆಚ್ಚಿನ ಮಾಹಿತಿಗೆ 9449118737, 7338353307, 9449933406 ಸಂಖ್ಯೆಯಲ್ಲಿ ಸಂಪರ್ಕಿಸಬೇಕೆಂದರು.

ಕುಟ್ಟ ಕೊಡವ ಸಮಾಜದಲ್ಲಿ ಕಕ್ಕಡ ನಮ್ಮೆ ಆಚರಣೆ



13ನೇ ವರ್ಷದ ಕಕ್ಕಡ ನಮ್ಮೆ ಕಾರ್ಯಕ್ರಮವನ್ನು ಖ್ಯಾತ ಫ್ಯಾಷನ್ ಡಿಸೈನರ್ ನಡಿಕೇರಿಯಂಡ ಪ್ರಸಾದ್ ಬಿದ್ದಪ್ಪ ಉದ್ಘಾಟಿಸಿದರು

ಮಡಿಕೇರಿ,ಆ.10–ಕುಟ್ಟ ಕೊಡವ ಸಮಾಜದಲ್ಲಿ 13ನೇ ವರ್ಷದ ಕಕ್ಕಡ ನಮ್ಮೆ ಕಾರ್ಯಕ್ರಮ ಸಂಭ್ರಮದಿಂದ ನಡೆಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಖ್ಯಾತ ಫ್ಯಾಷನ್ ಡಿಸೈನರ್ ನಡಿಕೇರಿಯಂಡ ಪ್ರಸಾದ್ ಬಿದ್ದಪ್ಪ ಅತಿ ಸೂಕ್ಷ್ಮವಾಗಿರುವ ಕೊಡವ ಜನಾಂಗದಲ್ಲಿ ತಮ್ಮ ಸಂಸ್ಕೃತಿಯ ಆಚರಣೆಗೆ ತುಂಬಾ ಮಹತ್ವ ನೀಡಬೇಕಾಗಿದೆ. ಇವುಗಳನ್ನು ಉಳಿಸಿಕೊಳ್ಳಲು ಪರಸ್ಪರ ಒಗ್ಗಟ್ಟು ಸಹಕಾರ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಅಭಿಪ್ರಾಯಪಟ್ಟರು.

ಕೊಡವ ಸಮಾಜಗಳ ಒಕ್ಕೂಟದ ಅಧ್ಯಕ್ಷ ಕಳ್ಳಿಚಂಡ ವಿಷ್ಣು ಕಾರ್ಯಪ್ಪ ಮಾತನಾಡಿ, ಕಕ್ಕಡ ನಮ್ಮೆಯನ್ನು 13 ವರ್ಷಗಳಿಂದ ಆಚರಿಸಿಕೊಂಡು ಬರಲಾಗುತ್ತಿದೆ. ಈ ಹಿಂದೆ ಅವಿಭಕ್ತ ಕುಟುಂಬ ಕೊಡವ ಜನಾಂಗದಲ್ಲಿದ್ದು ಕುಟುಂಬದವರು ಸೇರಿ ಹಬ್ಬ ಆಚರಿಸುತ್ತಿದ್ದರು. ಇದೀಗ ಮನೆಗಳಲ್ಲಿ ಕೆಲವೇ ಜನರು ಇರುವುದರಿಂದ ಸಾರ್ವತ್ರಿಕವಾಗಿ ಆಚರಿಸುವುದು ಹೆಚ್ಚು ಮಹತ್ವ ಪಡೆದಿದೆ. ಈ ಮೂಲಕ ಜನಾಂಗದವರು ಒಂದೆಡೆ ಸೇರಿ ಕಕ್ಕಡ ನಮ್ಮೆಯ ಮಹತ್ವ ಅರಿಯಲು ಹಾಗೂ ಮುಂದಿನ ಪೀಳಿಗೆಯ ಮಕ್ಕಳಿಗೂ ಸಹ ಅದರ ಬಗ್ಗೆ ಅರಿವು ಮೂಡಲು ಪ್ರಯೋಜನವಾಗಲಿದೆ ಎಂದರು.

ಸ್ಥಳೀಯರು ತೊಡಗಿಸಿಕೊಂಡಿರುವ ವ್ಯಾಪಾರ ಉದ್ದಿಮೆ, ಆಹಾರ ತಯಾರಿಕೆ ಆಟೋ ಮೊಬೈಲ್ ಕ್ಷೇತ್ರದ ಪರಿಚಯ–ಪ್ರದರ್ಶನ, ಮಾರಾಟ ವ್ಯವಸ್ಥೆಯನ್ನು ಮಾಡಲಾಗಿತ್ತು. ಹೂವಿನ ಗಿಡಗಳು ಕರಕುಶಲ ವಸ್ತುಗಳು ಫ್ಯಾಷನ್ ಡಿಸೈನ್, ಪೇಂಟಿಂಗ್, ಆಹಾರ ತಯಾರಿಕಾ ವಿಭಾಗದಲ್ಲಿ ಚಟ್ನಿ ಉಪ್ಪಿನಕಾಯಿ ವೈವಿಧ್ಯಮಯ ತಿನಿಸುಗಳು ಪ್ರದರ್ಶನ ಹಾಗೂ ಮಾರಾಟಕ್ಕೆ ಅವಕಾಶ ಒದಗಿಸಲಾಗಿತ್ತು.

ಕುಟ್ಟದಲ್ಲಿ 40 ವರ್ಷಗಳಿಂದ ಸುದೀರ್ಘ ಸೇವೆ ಸಲ್ಲಿಸುತ್ತಿರುವ ಡಾ. ಮುಕ್ಕಾಟೀರ ಜಿಮ್ಮಿ ಮೇದಪ್ಪ ಅವರನ್ನು ಗೌರವಿಸಲಾಯಿತು.

ಪ್ರಮುಖರಾದ ಹೊಟ್ಟೇಂಗಡ ರಮೇಶ್, ಕೊಂಗಾಂಡ ಸುರೇಶ್ ದೇವಯ್ಯ, ತೀತಿರ ಮಂದಣ್ಣ, ಮಚ್ಚಮಾಡ ಸುಬ್ರಮಣಿ, ಕೇಚಮಾಡ ವಾಸು ಉತ್ತಪ್ಪ, ಕೋದಂಡ ಲೀಲಾ ಕಾರ್ಯಪ್ಪ ತೀತಿರ ಕುಶ್ ತಿಮ್ಮಯ್ಯ, ಚೆಪ್ಪುಡೀರ ಪಾರ್ಥ, ಜಾಗದಾನಿಗಳಾದ ಮುಕ್ಕಾಟಿರ ರಾಜ ಮಂದಣ್ಣ ಚೆಕ್ಕೆರ ರಾಬಿನ್ ಕಾರ್ಯಪ್ಪ, ಸಾಂಸ್ಕೃತಿಕ ಮತ್ತು ಮಹಿಳಾ ಸಂಘದ ಪದಾಧಿಕಾರಿಗಳು ಹಾಜರಿದ್ದರು.

ಬ್ಯಾಡಗೊಟ್ಟದಲ್ಲಿ ಜಿಲ್ಲಾ ಮಟ್ಟದ ವಿಶ್ವ ಬುಡಕಟ್ಟು ದಿನಾಚರಣೆ

ಕುಶಾಲನಗರ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಜಿಲ್ಲಾ ಸಂಸ್ಥೆ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ತಾಲೂಕು ಗಿರಿಜನ ಸಮಗ್ರ ಅಭಿವೃದ್ಧಿ ಯೋಜನೆಯಿಂದ ಕೂಡಿಗೆ ಗ್ರಾಮ ಪಂಚಾಯತಿ ಹಾಗೂ ಬಸವನಹಳ್ಳಿಯಲ್ಲಿರುವ ತಾಲೂಕು ಗಿರಿಜನ ದೊಡ್ಡ ಪ್ರಮಾಣದ ವಿವಿಧೋದ್ದೇಶ ಸಹಕಾರ ಸಂಘದ ಸಹಯೋಗದೊಂದಿಗೆ ಬ್ಯಾಡಗೊಟ್ಟ ಗ್ರಾಮದ ಆದಿವಾಸಿಗಳ ಪುನರ್ವಸತಿ ಕೇಂದ್ರದಲ್ಲಿ ಶನಿವಾರ ಜಿಲ್ಲಾಮಟ್ಟದ ವಿಶ್ವ ಬುಡಕಟ್ಟು ದಿನ ಆಚರಿಸಲಾಯಿತು.



ಆದಿವಾಸಿಗಳ ಜಿಲ್ಲಾಮಟ್ಟದ ವಿಶ್ವ ಬುಡಕಟ್ಟು ದಿನಾಚರಣೆಯನ್ನು ಆಚರಿಸಲಾಯಿತು.

ಈ ವೇಳೆ ಮಾತನಾಡಿದ ಬಸವನಹಳ್ಳಿ ಗಿರಿಜನರ ವಿವಿಧೋದ್ದೇಶ ಸಹಕಾರ ಸಂಘ (ಲ್ಯಾಂಪ್ಸ್)ದ ಉಪಾಧ್ಯಕ್ಷೆ ಕಾವೇರಿ, ಆದಿವಾಸಿಗಳು ಆರೋಗ್ಯ ರಕ್ಷಣೆ ಬಗ್ಗೆ ಹೆಚ್ಚಿನ ನಿಗಾ ವಹಿಸಬೇಕು ಎಂದರು.

ಮುಖ್ಯ ಭಾಷಣ ಮಾಡಿದ ಐಎಎಸ್ ಸಿವಿಲ್ ಪರೀಕ್ಷೆ ತೆಗೆದುಕೊಂಡಿರುವ ಬುಡಕಟ್ಟು ಜನಾಂಗದ ಪ್ರತಿಭಾವಂತ ವಿದ್ಯಾರ್ಥಿ ಜೆ.ಜಿ. ಸುರೇಶ್ ಮಾತನಾಡಿ, ಬುಡಕಟ್ಟು ಸಮುದಾಯ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿ ಸುಶಿಕ್ಷಿತರನ್ನಾಗಿಸುವ ಮೂಲಕ ಮುಖ್ಯವಾಹಿನಿಗೆ ತರಬೇಕೆಂದು ಮನವಿ ಮಾಡಿದರು.

ಕೂಡಿಗೆ ಗ್ರಾಪಂ ಅಧ್ಯಕ್ಷ ಕೆ.ಟಿ.ಗಿರೀಶ್ ಮಾತನಾಡಿ, ಶ್ರಮಜೀವಿಗಳಾದ ಬುಡಕಟ್ಟು ಜನಾಂಗ ಯಾವುದೇ ದುಶ್ಚಟಕ್ಕೆ ಬಲಿಯಾಗದೇ ತಮ್ಮ ಬದುಕನ್ನು ಹಸನುಗೊಳಿಸಿಕೊಳ್ಳಬೇಕು ಎಂದರು.

ಜಿಲ್ಲಾ ಪ್ರಧಾನ ಆಯುಕ್ತ ಕೆ.ಟಿ.ಬೇಬಿ ಮ್ಯಾಥ್ಯೂ, ಜಿಲ್ಲಾ ಸ್ಕೌಟ್ಸ್ ಸಂಸ್ಥೆ ಆಯುಕ್ತ ಜಿಮ್ಮಿ ಸಿಕ್ವೇರಾ ಮಾತನಾಡಿದರು. ಸ್ಥಳೀಯ ಸಂಸ್ಥೆ ಅಧ್ಯಕ್ಷ ಡಾ.ಪ್ರವೀಣ್ ದೇವರಗುಂಡ ಸೋಮಪ್ಪ, ಸಂಸ್ಥೆ ಕಾರ್ಯದರ್ಶಿ ಎಂ.ಎಸ್. ಗಣೇಶ್, ಆದಿವಾಸಿ ರಕ್ಷಣಾ ಪರಿಷತ್ತಿನ ರಾಜ್ಯ ನಿರ್ದೇಶಕ ಬಿ.ಎ.ಗಂಗಾಧರ್, ಗ್ರಾಪಂ ಉಪಾಧ್ಯಕ್ಷೆ ಜಯಶ್ರೀ, ಸದಸ್ಯ ಟಿ.ಪಿ.ಹಮೀದ, ಕೆ. ಎಸ್.ಶಿವಕುಮಾರ್,ಪಿಡಿಓ ಮಂಜುಳಾ, ಸ್ಕೌಟ್ಸ್, ಗೈಡ್ಸ್ ಸಂಸ್ಥೆ ಸ್ಥಾನಿಕ ಆಯುಕ್ತ ಎಚ್.ಆರ್.ಮುತ್ತಪ್ಪ, ಜಿಲ್ಲಾ ಸ್ಕೌಟ್ಸ್‌ನ ತರಬೇತಿ ಆಯುಕ್ತ ಕೆ.ಯು.ರಂಜಿತ್, ಜಿಲ್ಲಾ ಕಾರ್ಯದರ್ಶಿ ಎಂ.ಎಂ. ವಸಂತಿ, ಜಿಲ್ಲಾ ಸಹಾಯಕ ಗೈಡ್ಸ್ ಆಯುಕ್ತೆ ಸುಲೋಚನ, ಬುಲ್–ಬುಲ್ ವಿಭಾಗದ ಮುಖ್ಯಸ್ಥೆ ಡೈಸಿ, ಸಂಸ್ಥೆಯ ಜಿಲ್ಲಾ ಸಂಘಟಕಿ ಯು.ಸಿ. ದಮಯಂತಿ, ಇಂದಿರಾ ಸೇರಿದಂತೆ ಸ್ಥಳೀಯ ಸಂಸ್ಥೆ ನಿರ್ದೇಶಕರು ಬ್ಯಾಡಗೊಟ್ಟ ಪುನರ್ವಸತಿ ಕೇಂದ್ರದ ಸಮುದಾಯದ ನೂರಾರು ಗ್ರಾಮಸ್ಥರು ಹಾಜರಿದ್ದರು. ಇದೇ ಸಂದರ್ಭದಲ್ಲಿ ಸಮುದಾಯದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು.

ಗಾಳಿಬೀಡು ಶಾಲೆ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮಡಿಕೇರಿ: ಗಾಳಿಬೀಡು ಜವಾಹರ್ ನವೋದಯ ವಿದ್ಯಾಲಯದಲ್ಲಿ 2026–27ನೇ ಶೈಕ್ಷಣಿಕ ವರ್ಷಕ್ಕಾಗಿ 9 ಮತ್ತು 11ನೇ ತರಗತಿಗಳಿಗೆ (ಖಾಲಿ ಇರುವ ಸೀಟು) ಪ್ರವೇಶ ಪಡೆಯಲು ವಿದ್ಯಾರ್ಥಿಗಳಿಂದ ಆನ್‌ಲೈನ್ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಸೆ.23 ರವರೆಗೆ ಅವಕಾಶ ಕಲ್ಪಿಸಲಾಗಿದೆ. ಅರ್ಹ ಮತ್ತು ಆಸಕ್ತ ವಿದ್ಯಾರ್ಥಿಗಳು ಉಚಿತವಾಗಿ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಮತ್ತು ಬೇಕಾದ ಮಾಹಿತಿ ಪಡೆಯಲು Class lx lest 2026: https://cbseitms.nic.in/2025/nvsix9, Class xl lest 2026: hutps://cbseitms.nic.in/2025/nvsixi 11 ನ್ನು ಸಂಪರ್ಕಿಸಬಹುದು ಎಂದು ಗಾಳಿಬೀಡು ಜವಾಹರ್ ನವೋದಯ ವಿದ್ಯಾಲಯದ ಪ್ರಾಂಶುಪಾಲರು ತಿಳಿಸಿದ್ದಾರೆ.

ಶೈಕ್ಷಣಿಕವಾಗಿ ಪ್ರಗತಿ ಹೊಂದಲು ಆದಿವಾಸಿಗಳಿಗೆ ಪುಟ್ಟರಂಗಶೆಟ್ಟಿ ಕರೆ



ವಿಶ್ವ ಆದಿವಾಸಿ ದಿನಾಚರಣೆ ಸಮಾರಂಭವನ್ನು ಶಾಸಕ ಸಿ. ಪುಟ್ಟರಂಗಶೆಟ್ಟಿ ಉದ್ಘಾಟಿಸಿದರು

ಚಾಮರಾಜನಗರ, ಆ.10– ಆದಿವಾಸಿಗಳು ಸರ್ಕಾರದ ಸವಲತ್ತುಗಳನ್ನು ಪಡೆದುಕೊಳ್ಳುವ ಜೊತೆಗೆ ಶೈಕ್ಷಣಿಕವಾಗಿ ಪ್ರಗತಿಯನ್ನು ಹೊಂದಿದರೆ ಮಾತ್ರ ಸಮಾಜದ ಮುಖ್ಯವಾಹಿನಿಗೆ ಬರಲು ಸಾಧ್ಯ ಎಂದು ಶಾಸಕ ಸಿ. ಪುಟ್ಟರಂಗಶೆಟ್ಟಿ ತಿಳಿಸಿದರು.

ನಗರದ ಜೆ.ಎಚ್. ಪಟೇಲ್ ಸಭಾಂಗಣದಲ್ಲಿ ಜಿಲ್ಲಾ ಬುಡಕಟ್ಟು ಗಿರಿಜನ ಅಭಿವೃದ್ಧಿ ಸಂಘದಿಂದ 31ನೇ ವಿಶ್ವ ಆದಿವಾಸಿ ದಿನಾಚರಣೆಯನ್ನು ಉದ್ಘಾಟಿಸಿ ಅರಣ್ಯದಲ್ಲಿ ವಾಸಿಸುವ ಬುಡಕಟ್ಟು ಜನಾಂಗದವರು ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಅಭಿವೃದ್ಧಿ ಹೊಂದಬೇಕು. ಕೇವಲ ಸರ್ಕಾರದಿಂದ ದೊರೆಯುವ ಸವಲತ್ತುಗಳನ್ನು ಬಳಕೆ ಮಾಡಿಕೊಂಡರೆ ಸಾಲದು, ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕು. ಉನ್ನತವಾಗಿ ವಿದ್ಯಾಭ್ಯಾಸ ಮಾಡಿ ಸರ್ಕಾರಿ ನೌಕರಿಯನ್ನು ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಶಾಸಕ ಎಂ.ಆರ್.ಮಂಜುನಾಥ್ ಮಾತನಾಡಿ, ಆದಿವಾಸಿಗಳ ಅಭಿವೃದ್ಧಿಗೆ ನಮ್ಮ ಜಿಲ್ಲೆಯಲ್ಲಿ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಆದಿವಾಸಿಗಳು ಸಹ ಸಮಾಜದ ಮುಖ್ಯವಾಹಿನಿಗೆ ಬರಬೇಕೆಂಬುದೆ ನಮ್ಮ ಆಶಯವಾಗಿದೆ. ಈಗಾಗಲೇ ಸತತ ಹೋರಾಟದ ಫಲವಾಗಿ ನಿಮ್ಮ ಹಾಡಿ ಹಾಗೂ ಕಾಲೋನಿಗೆ ವಿದ್ಯುತ್ ಬಂದಿದೆ. 5ಲಕ್ಷ ರೂ. ವೆಚ್ಚದಲ್ಲಿ ಗಿರಿಜನರು ಹಾಗೂ ಸೋಲಿಗರಿಗೆ ಸುಸಜ್ಜಿತ ಮನೆ ನಿರ್ಮಿಸಿ ಕೊಡುವುದಾಗಿ ತಿಳಿಸಿದರು.

ಜಿಲ್ಲಾಧಿಕಾರಿ ಶಿಲ್ಪನಾಗ್ ಮಾತನಾಡಿ, ಆದಿವಾಸಿಗಳ ಅಭಿವೃದ್ಧಿಗೆ ಜಿಲ್ಲಾಡಳಿತ ಬದ್ಧವಾಗಿದ್ದು, ಈಗಾಗಲೇ ಆದಿವಾಸಿಗಳ ಮುಖಂಡರ ಕೋರಿಕೆಯಂತೆ ಅವರು ಸೂಚಿಸಿದ ದಿನದಂದು ಕುಂದುಕೊರತೆಗಳ ಸಭೆಯನ್ನು ನಡೆಸಲಾಗುತ್ತಿತ್ತು. ಮುಂದಿನ ದಿನಗಳಲ್ಲಿ ಪ್ರತ್ಯೇಕವಾಗಿ ಗಿರಿಜನರ ಸಮಸ್ಯೆಯನ್ನು ಪರಿಹರಿಸಲು ಮೊದಲ ವಾರದಲ್ಲಿಯೇ ಅದ್ಯತೆ ನೀಡಲಾಗುತ್ತದೆ. ಆದಿವಾಸಿಗಳ ಮಕ್ಕಳು ಫಾರೆಸ್ಟ್ ಗಾರ್ಡ್ ಆಗಬೇಕೆಂಬ ಆಸೆಯನ್ನು ವ್ಯಕ್ತಪಡಿಸಿದ್ದಾರೆ. ಉನ್ನತ ಶಿಕ್ಷಣವನ್ನು ಪಡೆದು, ಇತರೇ ಉನ್ನತ ಹುದ್ದೆಗಳನ್ನು ಪಡೆದುಕೊಳ್ಳಬೇಕು. ಆ ನಿಟ್ಟಿನಲ್ಲಿ ನಿಮ್ಮ ಶಿಕ್ಷಣ ಮುಂದುವರೆಯ ಬೇಕು ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬುಡಕಟ್ಟು ಗಿರಿಜನ ಅಭಿವೃದ್ಧಿ ಸಂಘದ ಅಧ್ಯಕ್ಷ ಯು. ರಂಗೇಗೌಡ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಬಿಂದ್ಯಾ, ಉಪ ವಿಭಾಗಾಧಿಕಾರಿ ದಿನೇಶ್ ಕುಮಾರ್ ಮೀನಾ, ಜಿಪಂ ಮಾಜಿ ಉಪಾಧ್ಯಕ್ಷೆ ಕೇತಮ್ಮ, ಅರಣ್ಯ ಹಕ್ಕುಸಮಿತಿಯ ಸದಸ್ಯ ಡಾ. ಸಿ.ಮಾದೇಗೌಡ, ಪುಟ್ಟಮ್ಮ, ಸೋಲಿಗರ ಅಭಿವೃದ್ಧಿ ಸಂಘದ ದೊಡ್ಡ ಸಿದ್ದಂಯ್ಯ, ತಾಲೂಕು ಅಧ್ಯಕ್ಷ ಕೋಣೂರೇಗೌಡ, ಡಾ. ತನ್ಮಯಾ, ಮೊದಲಾದವರಿದ್ದರು

ಆಲೂರಲ್ಲಿ ಬಿ.ರಾಚಯ್ಯ ಜನ್ಮ ದಿನಾಚರಣೆ



ಮಾಜಿ ರಾಜ್ಯಪಾಲ ದಿ. ಬಿ.ರಾಚಯ್ಯನವರ ಸಮಾಧಿಗೆ ಪೂಜೆ ಸಲ್ಲಿಸಲಾಯಿತು. ಶಾಸಕ ಎ.ಆರ್. ಕೃಷ್ಣಮೂರ್ತಿ, ಜಿ.ಪಂ. ಮಾಜಿ ಸದಸ್ಯ ಆರ್. ಬಾಲರಾಜು ಇತರರು ಇದ್ದಾರೆ.

ಚಾಮರಾಜನಗರ: ಮಾಜಿ ರಾಜ್ಯಪಾಲರಾದ ದಿ.ಬಿ.ರಾಚಯ್ಯ 103ನೇ ಜನ್ಮ ದಿನಾಚರಣೆಯನ್ನು ಅವರ ಕುಟುಂಬದವರು ಹಾಗೂ ಅಭಿಮಾನಿಗಳು, ಹಿತೈಷಿಗಳು ಆಲೂರಿನ ಬಿ. ರಾಚಯ್ಯ ಸ್ಮಾರಕದಲ್ಲಿ ಪೂಜೆ ಸಲ್ಲಿಸಿ ಆಚರಿಸಿದರು

ಶಾಸಕ ಎ.ಆರ್. ಕೃಷ್ಣಮೂರ್ತಿ, ಜಿಪಂ ಮಾಜಿ ಸದಸ್ಯ ಆರ್. ಬಾಲರಾಜು ಮತ್ತು ಕುಟುಂಬದವರು ದಿ.ಬಿ. ರಾಚಯ್ಯ ಮತ್ತು ದಿ. ಗೌರಮ್ಮರ ಪುಣ್ಯ ಭೂಮಿ ಹಾಗೂ ಭಾವ ಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸಿ, ಪುಷ್ಪ ನಮನ ಸಲ್ಲಿಸಿದರು. ಬಿ. ರಾಚಯ್ಯ ಧ್ವನಿಯಲ್ಲಿ ಅವರ ಸಾಧನೆ ಕುರಿತ ಸಾಕ್ಷ್ಯಚಿತ್ರವನ್ನು ಎಲ್‌ಇಡಿ ಪರದೆಯಲ್ಲಿ ಅಭಿಮಾನಿಗಳು ಹಾಗೂ ಹಿತೈಷಿಗಳೊಂದಿಗೆ ವೀಕ್ಷಿಸಿದರು

ರಾಜಕೀಯ ಅಧಿಕಾರವನ್ನು ಜನ ಸೇವೆಗಾಗಿ ಮುಡುಪಾಗಿಟ್ಟಿದ್ದರು. ಅವರು ಶಾಸಕರಾಗಿ, ಸಚಿವರಾಗಿ ಉನ್ನತ ಹುದ್ದೆಗಳಲ್ಲಿ ಉತ್ತಮ ಕೆಲಸ ಮಾಡಿ. ನೊಂದವರಿಗೆ ಧ್ವನಿಯಾಗಿದ್ದರು. ಇಂಥವರ ಪುತ್ರರಾಗಿ ಅವರ ಹಾದಿಯಲ್ಲಿ ಸಾಗುವ ಜೊತೆಗೆ ಜನ ಸೇವೆ ಮಾಡುವ ಮೂಲಕ ಅವರ ಹೆಸರನ್ನು ಚಿರಸ್ಥಾಯಿಯಾಗಿ ಉಳಿಸುವ ಪ್ರಯತ್ನ ನಮ್ಮದಾಗಿದೆ ಎಂದರು.

ಕಲಾವಿದ ಸಿ.ಎಂ. ನರಸಿಂಹಮೂರ್ತಿ ತಂಡದಿಂದ ಜಾನಪದ ಗಾಯನ, ಬಳಿಕ ಅನ್ನಸಂತರ್ಪಣೆ ನಡೆಯಿತು.

ಮಂಜುಳಾ ಕೃಷ್ಣಮೂರ್ತಿ, ರಾಚಯ್ಯ ಪುತ್ರಿಯರಾದ ಪ್ರಭಾ, ಆರತಿ ವೆಂಕಟೇಶ್ ಪ್ರಸಾದ್, ಬಿ.ಶರತ್‌ಕುಮಾರ್, ಶ್ರೀವರ್ಧನ್, ದಲಿತ ಮಹಾಸಭಾದ ರಾಜ್ಯ ಉಪಾಧ್ಯಕ್ಷ ವೆಂಕಟರಮಣ ಸ್ವಾಮಿ ಕೇಂದ್ರ ಬರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ. ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಆರ್. ಮಹದೇವ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್, ಹೊಂಗನೂರು ಚಂದ್ರು, ಹನೂರು ಮುಕುವರ್ಮ, ಅರಕಲವಾಡಿ ಗುರುಸ್ವಾಮಿ, ಮಹಮದ್ ಆಸ್ಗರ್, ಸೈಯದ್ ರಫಿ, ಮುಖಂಡರಾದ ಗೌಡಿಕೆ ಶಿವಪ್ಪ, ಕೂಡ್ಲೂರು ಹನುಮಂತ ಶೆಟ್ಟರು, ಯೋಗೇಶ್, ಮ. ಶ್ರೀನಿವಾಸ್ ನಾಯಕ್, ಅಲೂರು ಪ್ರವೀಣ್, ಕಂದಹಳ್ಳಿ ನಂಜುಂಡಸ್ವಾಮಿ, ನಗರಸಭಾ ಅಧ್ಯಕ್ಷೆ ರೇಖಾ ರಮೇಶ್, ಮಧುನಹಳ್ಳಿ ಶಿವಕುಮಾರ್, ಚಾಮುಲ್ ಅಧ್ಯಕ್ಷ ನಂಜುಂಡಸ್ವಾಮಿ, ನಿರ್ದೇಶಕ ಕಮರವಾಡಿ ರೇವಣ್ಣ, ವ್ಯವಸ್ಥಾಪಕ ನಿರ್ದೇಶಕ ರಾಜಕುಮಾರ್, ದುಗ್ಗಟ್ಟಿ ಮಲ್ಲಿಕಾರ್ಜುನ ಸ್ವಾಮಿ, ಹೊಂಗನೂರು ಪುಟ್ಟಸ್ವಾಮಿ, ಎಪಿಎಂಸಿ ಅಧ್ಯಕ್ಷ ಸೋಮೇಶ್, ಜಿ.ಪಂ. ಮಾಜಿ ಸದಸ್ಯರಾದ ಕಮಾಲ್, ರಮೇಶ್, ಡಾ. ಹೊಂಗನೂರು ನಂಜಯ್ಯ, ಹೆಬ್ಬಸೂರು ಮಧು, ತೌಸಿಫ್, ಕೆಲ್ಲಂಬಳ್ಳಿ ನಾಗೇಂದ್ರ, ಗೂಳೀಪುರ ನಾಗೇಂದ್ರ ಪಿಪಿ ಚೇತನ್, ಗ್ರಾಪಂ ಸದಸ್ಯ ಆಲೂರು ರವಿ ಮೊದಲಾದವರು ಇದ್ದರು.

ಹಸುವನ್ನು ತಿಂದು ಹಾಕಿದ ಚಿರತೆ



ಬೇಗೂರು: ಸಮೀಪದ ತೊಂಡವಾಡಿ ಗ್ರಾಮದ ಶಿವಶಂಕರ್ ಜಮೀನಿನಲ್ಲಿ ಹಸುವನ್ನು ಚಿರತೆ ಸಾಯಿಸಿ ತಿಂದು ಹಾಕಿದ ಘಟನೆ ಶನಿವಾರ ನಡೆದಿದೆ.

ಗ್ರಾಮದ ರೈತ ಪ್ರಕಾಶ್‌ಗೆ ಸೇರಿದ ಹಸು ಮೇಯುತ್ತಿದ್ದಾಗ ಚಿರತೆ ದಾಳಿ ನಡೆಸಿದೆ. ವಿಷಯ ತಿಳಿದು ಗುಂಡ್ಲುಪೇಟೆ ಬಫರ್ ಜೋನ್ ಅರಣ್ಯ ಸಿಬ್ಬಂದಿ ಸ್ಥಳ ಪರಿಶೀಲನೆ ನಡೆಸಿದರು. ಚಿರತೆ ದಾಳಿಗೆ ರೈತರು ಅರಣ್ಯ ಇಲಾಖೆ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಕೂಡಲೇ ಪರಿಹಾರ ನೀಡಬೇಕು ಎಂದು ರೈತ ಪ್ರಕಾಶ್ ಒತ್ತಾಯಿಸಿದರು.

ಬೀದಿ ನಾಯಿ ಕಚ್ಚಿ ಮೂವರು ಮಕ್ಕಳಿಗೆ ಗಾಯ



ಕೆ.ಆರ್.ಆಸ್ಪತ್ರೆಗೆ ದಾಖಲಾಗಿರುವ ಸಮೃದ್ಧಿ

ಬೇಗೂರು: ಸಮೀಪದ ಚಿಕ್ಕಾಟಿ ಗ್ರಾಮದಲ್ಲಿ ಭಾನುವಾರ ಮಧ್ಯಾಹ್ನ ಬೀದಿ ನಾಯಿ ಕಚ್ಚಿ ಮೂವರು ಮಕ್ಕಳು ಗಾಯಗೊಂಡ ಘಟನೆ ನಡೆದಿದೆ.

ಚಿಕ್ಕಾಟಿ ಗ್ರಾಮದ ಸುಜನ್(10),ಸಮೃದ್ಧಿ(7), ಮದನ್(6)ಗೆ ಬೀದಿ ನಾಯಿ ಕಚ್ಚಿ ಗಾಯಗೊಳಿಸಿದೆ, ಸಮೃದ್ಧಿಗೆ ತುಸು ಗಂಭೀರ ಗಾಯಗೊಂಡಿದೆ ಎನ್ನಲಾಗಿದೆ. ಗಾಯಗೊಂಡ ಮೂವರು ಮಕ್ಕಳನ್ನು ಪೋಷಕರು ಹಾಗು ಯುವಕರು ಬೇಗೂರು ಸಮುದಾಯ ಆರೋಗ್ಯ ಕೇಂದ್ರಕ್ಕೆ ಕರೆತಂದು ಚಿಕಿತ್ಸೆ ಕೊಡಿಸಿದ್ದಾರೆ.ವೈದ್ಯರು ನಾಯಿ ಚುಚ್ಚು ಮದ್ದು ನೀಡಿ, ಹೆಚ್ಚಿನ ಚಿಕಿತ್ಸೆಗೆ ಮೈಸೂರು ಕೆ.ಆರ್.ಆಸ್ಪತ್ರೆಗೆ ಕಳುಹಿಸಿದ್ದಾರೆ.

ತಾಲೂಕು ಪರವಾನಗಿ ಹೊಂದಿದ ಜಿಲ್ಲಾ ಪತ್ರ ಬರಹಗಾರ ಕ್ಷೇಮಾಭಿವೃದ್ಧಿ ಸಂಘ ಉದ್ಘಾಟನೆ



ಪರವಾನಗಿ ಹೊಂದಿದ ಜಿಲ್ಲಾ ಪತ್ರ ಬರಹಗಾರ ಕ್ಷೇಮಾಭಿವೃದ್ಧಿ ಸಂಘವನ್ನು ರಾಜ್ಯಾಧ್ಯಕ್ಷ ಡಿ.ಕೆ.ಸಂಗಮೇಶ ಎಲಿಗಾರ್ ಉದ್ಘಾಟಿಸಿದರು.

ಚಾಮರಾಜನಗರ, ಆ.10–ಸರ್ಕಾರ ಪತ್ರ ಬರಹಗಾರ ವೃತ್ತಿಯನ್ನು ಹತ್ತಿಕ್ಕುವ ಕೆಲಸ ಮಾಡುತ್ತಿದೆ ಇದನ್ನು ಉಳಿಸಿಕೊಳ್ಳಲು ಪತ್ರ ಬರಹಗಾರರು ಸಂಘಟಿತರಾಗಬೇಕು ಎಂದು ರಾಜ್ಯ ನೋಂದಣಿ ಮತ್ತು ಮುದ್ರಾಂಕ ಇಲಾಖೆ ಪರವಾನಗಿ ಪಡೆದ ಪತ್ರ ಬರಹಗಾರರ ಒಕ್ಕೂಟ ರಾಜ್ಯಾಧ್ಯಕ್ಷ ಡಿ.ಕೆ.ಸಂಗಮೇಶ ಎಲಿಗಾರ್ ತಿಳಿಸಿದ್ದಾರೆ

ನಗರದ ಸಂತೇಮರಹಳ್ಳಿ ರಸ್ತೆಯಲ್ಲಿರುವ ರಾಯಲ್ ಬ್ರದರ್ಸ್ ಪಾರ್ಟಿ ಹಾಲ್‌ನಲ್ಲಿ ನಡೆದ ತಾಲೂಕು ಪರವಾನಗಿ ಹೊಂದಿದ ಜಿಲ್ಲಾ ಪತ್ರ ಬರಹಗಾರ ಕ್ಷೇಮಾಭಿವೃದ್ಧಿ ಸಂಘ ಉದ್ಘಾಟನಾ ಸಮಾರಂಭ ಹಾಗೂ ಕರ್ನಾಟಕ ರಾಜ್ಯ ನೋಂದಣಿ ಮತ್ತು ಮುದ್ರಾಂಕ ಇಲಾಖೆಯಿಂದ ಪರ ವಾನಗಿ ಪಡೆದ ಪತ್ರ ಬರಹಗಾರ ಒಕ್ಕೂಟದ ಸದಸ್ಯತ್ವ ನೋಂದಣಿ ಅಭಿಯಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಹಂತ ಹಂತವಾಗಿ ನಮ್ಮನ್ನು ಸಂಬಂಧಪಟ್ಟ ಕಂದಾಯ ಇಲಾಖೆ ಸಚಿವರು ಕಾವೇರಿಯ 3 ತಂತ್ರಾಂಶವನ್ನು ತಂದರು ಎಲ್ಲವನ್ನೂ ಅಪ್‌ಲೋಡ್ ಮಾಡಿ ಪತ್ರ ನೊಂದಣಿಗೆ ಎಲ್ಲ ಅವಕಾಶ ಮಾಡಿಕೊಟ್ಟರು. ಮೂರನೆಯ ಹಂತದಲ್ಲಿ ಪತ್ರ ಬರಹಗಾರರನ್ನು ಸಂಪೂರ್ಣವಾಗಿ ಹತ್ತಿಕ್ಕುವ ಕೆಲಸ ಮಾಡಿದ್ದಾರೆ ಎಂದು ದೂರಿದರು.

ಒಕ್ಕೂಟದ ರಾಜ್ಯ ಕಾರ್ಯದರ್ಶಿ ಧರ್ಮರಾಜ್ ವಿ.ಏಕಬೋಟೆ ಮಾತನಾಡಿದರು. ಮಂಡ್ಯ ಜಿಲ್ಲಾ ನೋಂದಣಾಧಿಕಾರಿ ಎಸ್. ಸಿದ್ದೇಶ್ ಸಂಘದ ನಾಮಫಲಕ ಅನಾವರಣಗೊಳಿಸಿದರು. ಸಂಘದ ಅಧ್ಯಕ್ಷ ಜಿ. ನಂದೀಶ್ವರಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಅಧ್ಯಕ್ಷ ಸಿ.ಎನ್.ಬಾಲರಾಜು ಪ್ರಾಸ್ತಾವಿಕ ಭಾಷಣ ಮಾಡಿದರು.

ಕಾರ್ಯಕ್ರಮದಲ್ಲಿ ಹಿರಿಯ ಉಪನೋಂದಣಾಧಿಕಾರಿ ಎ.ರಾಘವೇಂದ್ರ, ಪ್ರಥಮದರ್ಜೆ ಸಹಾಯಕರಾದ ಕೆಎನ್.ಉಮೇಶ್, ಮಂಜುನಾಥ್, ಒಕ್ಕೂಟದ ಕಾರ್ಯದರ್ಶಿ ನವೀನ್ ಕುಮಾರ್, ನಂಜನಗೂಡು ತಾಲೂಕು ಅಧ್ಯಕ್ಷ ಪ್ರಕಾಶ್‌ರಾಜೇ ಅರಸ್, ನರಸೀಪುರ ಸಂಘದ ಕಾರ್ಯಾಧ್ಯಕ್ಷ ಲೋಕೇಶ್, ತಾಲೂಕು ಉಪಾಧ್ಯಕ್ಷ ಕಾಂತರಾಜು, ಕಾರ್ಯದರ್ಶಿ ಮಹದೇವಸ್ವಾಮಿ, ಸಹ ಕಾರ್ಯದರ್ಶಿ ರವಿ, ಖಜಾಂಚಿ ಹೊಮ್ಮ ರಾಮನಾಯಕ, ಕಾನೂನು ಸಲಹೆಗಾರ ಎಸ್.ಕೆ.ಮಹದೇವಯ್ಯ, ಸಂಘಟನಾ ಕಾರ್ಯದರ್ಶಿ ಶಂಕರ್, ಕೊಳ್ಳೇಗಾಲ, ಹನೂರು, ಕುದೇರು, ಯಳಂದೂರು, ಗುಂಡ್ಲುಪೇಟೆ ಪತ್ರ ಬರಹಗಾರರು ಇದ್ದರು.

ಫೋಟೊ ತೆಗೆಯಲು ಹೋದ ವ್ಯಕ್ತಿ ಮೇಲೆ ಆನೆ ದಾಳಿ

ಗುಂಡ್ಲುಪೇಟೆ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ 67ರಲ್ಲಿ ಭಾನುವಾರ ಕಾಡಾನೆಯ ಫೋಟೊ ತೆಗೆಯಲು ಹೋದ ವ್ಯಕ್ತಿಯೊಬ್ಬರ ಮೇಲೆ ಆನೆ ದಾಳಿ ನಡೆದಿದೆ.

ಮಧುಮಲೈ ಅರಣ್ಯದ ಕಡೆಯಿಂದ ಬಂಡೀಪುರದ ಕಡೆಗೆ ಬರುವ ಸಂದರ್ಭದಲ್ಲಿ ಕೆಕ್ಕನಹಳ್ಳ ಅರಣ್ಯ ಪ್ರದೇಶದ ಬಳಿ ಮರಿಯೊಂದಿಗೆ ಇದ್ದ ಆನೆಯ ಫೋಟೋ ತೆಗೆಯಲು ಹೋದಾಗ ದಾಳಿ ನಡೆದಿದೆ. ದಾಳಿಯಿಂದ ಪ್ರಜ್ಞೆತಪ್ಪಿ ರಸ್ತೆಯಲ್ಲಿಯೇ ಬಿದ್ದಿದ್ದ ವ್ಯಕ್ತಿಯನ್ನು ಸಂಬಂಧಿಗಳು ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಆನೆಯ ದಾಳಿ ಸುದ್ದಿ ತಿಳಿಯುತ್ತಿದ್ದಂತೆ ರಾಷ್ಟ್ರೀಯ ಹೆದ್ದಾರಿಯಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದರಿಂದ ಸಂಚಾರ ಅಸ್ತವ್ಯಸ್ತವಾಯಿತು.

ದಾಳಿಗೊಳಗಾದ ವ್ಯಕ್ತಿಯ ಬಗ್ಗೆ ಮಾಹಿತಿ ಕಲೆ ಹಾಕಲಾಗುತ್ತಿದೆ ಎಂದು ಬಂಡೀಪುರ ಹುಲಿಯೋಜನೆ ನಿರ್ದೇಶಕ ಪ್ರಭಾಕರನ್ ತಿಳಿಸಿದರು. ಆನೆಗಳು ಮರಿಗಳೊಂದಿಗೆ ಇರುವಾಗ ಮನುಷ್ಯರನ್ನು ಕಂಡರೆ ದಾಳಿ ಮಾಡುವ ಸಾಧ್ಯತೆಗಳು ಹೆಚ್ಚಾಗಿರುತ್ತದೆ. ಮರಿಯ ರಕ್ಷಣೆ ಮಾಡಲು ಸಿಟ್ಟಿಗೇಳುವುದು ಸಹಜ. ಇಂತಹ ಸಂದರ್ಭದಲ್ಲಿ ಪ್ರವಾಸಿಗರು ಫೋಟೋ ತೆಗೆಯಲು ಮುಂದಾಗಬಾರದು ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.



ವ್ಯಕ್ತಿ ಮೇಲೆ ಕಾಡಾನೆ ದಾಳಿ ನಡೆಸಿರುವ ದೃಶ್ಯ.

ಕೆ.ಆರ್.ನಗರ, ಸಾಲಿಗ್ರಾಮದಲ್ಲಿ ಮಾಜಿ ಸಚಿವ ಸಾ.ರಾ.ಮಹೇಶ್ ಹುಟ್ಟುಹಬ್ಬ ಆಚರಣೆ

ಕೆ.ಆರ್.ನಗರದಲ್ಲಿ ಸಾ.ರಾ.ಮಹೇಶ್ ನಾಯಕತ್ವದ ಕೊರತೆ ಕಾಡುತ್ತಿದೆ

ಮುಂದಿನ ಚುನಾವಣೆಯಲ್ಲಿ ಗೆದ್ದು, ಉಪಮುಖ್ಯಮಂತ್ರಿ ಅಥವಾ ಸಚಿವರಾಗಲಿದ್ದಾರೆ ಎಂದು ಭವಿಷ್ಯ ನುಡಿದ ಮುಖಂಡರು

ಕೆ.ಆರ್.ನಗರ: ಕ್ಷೇತ್ರದ ಜನತೆಗೆ ಮಾಜಿ ಸಚಿವ ಸಾ.ರಾ.ಮಹೇಶ್ ಅವರ ನಾಯಕತ್ವದ ಕೊರತೆ ಕಾಡುತ್ತಿದೆ. ಮುಂಬರುವ 2028ರ ಸಾರ್ವತ್ರಿಕ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಮತ್ತು ಬಿಜೆಪಿ ಪಕ್ಷ ಅಧಿಕಾರಕ್ಕೆ ಬರಲಿದ್ದು, ಕ್ಷೇತ್ರದಲ್ಲಿ ಜಯಭೇರಿ ಭಾರಿಸುವ ಸಚಿವ ಸಾ.ರಾ. ಮಹೇಶ್ ಅವರು ಉಪ ಮುಖ್ಯಮಂತ್ರಿ ಅಥವಾ ಸಚಿವರಾಗಲಿದ್ದಾರೆ ಎಂದು ತಾಲೂಕು ಒಕ್ಕಲಿಗರ ಸಂಘದ ಗೌರವಾಧ್ಯಕ್ಷ ಮಿರ್ಲೆ ಅಣ್ಣೇಗೌಡ ಭವಿಷ್ಯ ನುಡಿದಿದ್ದಾರೆ.

ಪಟ್ಟಣದ ಹೊರವಲಯದ ಅರಕೆರೆ ವೀರಕ್ತ ಮಠದ ಆವರಣದಲ್ಲಿ ಮಾಜಿ ಸಚಿವ ಸಾ.ರಾ.ಮಹೇಶ್ ಅವರ 59 ನೇ ಹುಟ್ಟುಹಬ್ಬದ ಅಂಗವಾಗಿ ಜೆಡಿಎಸ್ ಪಕ್ಷದ ಮುಖಂಡರು ಒಕ್ಕಲಿಗ ಸಮುದಾಯದ ಮುಖಂಡರೊಟ್ಟಿಗೆ ಮಾಜಿ ಸಚಿವ ಸಾ.ರಾ.ಮಹೇಶ್ ಅವರಿಗೆ ಮೈಸೂರು ಪೇಟ, ರೇಷ್ಮೆ ಶಾಲು, ಭಾರೀ ಗಾತ್ರದ ಗುಲಾಬಿ ಹಾರಹಾಕಿ ಅಭಿ ನಂದಿಸಿ ಶುಭಾಶಯ ಕೋರಿ ಮಾತನಾಡಿದರು.

ಕೆ.ಆರ್.ನಗರ ವಿಧಾನಸಭಾ ಕ್ಷೇತ್ರದ ಶಾಸಕರಾಗಿ ಆಯ್ಕೆಯಾದ ನಂತರ ಸಾ.ರಾ. ಮಹೇಶ್ ಪ್ರಥಮಗಳಿಗೆ ಕಾರಣವಾಗಿದ್ದು ಉಚಿತವಾಗಿ ಪಡಿತರ ಅಕ್ಕಿ ನೀಡುವುದರ ಜೊತೆಗೆ ವೈಯಕ್ತಿಕ ಹಣದಲ್ಲಿ ಆಂಬ್ಯುಲೆನ್ಸ್ ಸೇವೆ ನೀಡಿದರು. ಅವರು ತಮ್ಮ ಸುದೀರ್ಘ ರಾಜಕೀಯ ಸೇವೆಯಲ್ಲಿ ಯಾವುದೇ ಜಾತಿ, ಭೇದವಿಲ್ಲದೆ ನೊಂದವರಿಗೆ ಧ್ವನಿಯಾಗಿ, ಸಂಕಷ್ಟದಲಿರುವವರಿಗೆ ನೆರವು ನೀಡಿ, ಸೂರಿಲ್ಲದವರಿಗೆ ಸೂರು ನೀಡಿದ ಕೊಡುಗೈ ದಾನಿ ಎಂದು ಬಣ್ಣಿಸಿದರು.

ಚುನಾಯಿತ ಜನಪತ್ರಿನಿಧಿ ಆದವರು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನ ಸೇವೆ ಯಾವ ರೀತಿ ಮಾಡಬಹುದು ಎಂದು ಮೇಲ್ಪಂಕ್ತಿಯನ್ನು ಹಾಕಿ ಕೊಟ್ಟಿರುವ ಸಾ.ರಾ. ಮಹೇಶ್ ಮಾದರಿ ರಾಜಕಾರಣಿ ಆಗಿದ್ದು ಇವರ ನಡೆ ಮತ್ತು ನುಡಿ ಜನ ಮೆಚ್ಚುವಂತದ್ದು ಎಂದು ಹೆಮ್ಮೆಯಿಂದ ಹೇಳಿದರು.

ಕೇಂದ್ರ ಸಚಿವರಾದ ಹೆಚ್.ಡಿ.ಕುಮಾರಸ್ವಾಮಿ ರಾಜ್ಯದ ಮುಖ್ಯಮಂತ್ರಿ ಆದ ಸಂದರ್ಭದಲ್ಲಿ ರಾಜ್ಯದ ಜನತೆಗೆ ಸುಭೀಕ್ಷ ಆಡಳಿತ ನೀಡಲು ಮಾಜಿ ಸಾ.ರಾ.ಮಹೇಶ್ ಅವರು ಬಹಳ ಶ್ರಮಿಸಿದ್ದಾರೆ ಎಂದರಲ್ಲದೆ ಕೊಡಗಿನ ಉಸ್ತುವಾರಿ ಸಚಿವರಾಗಿದ್ದ ಸಂದರ್ಭದಲ್ಲಿ ಮಳೆಹಾನಿಯಿಂದಾಗಿ ಭೂಕುಸಿತವಾಗಿ ನೂರಾರು ಮನೆಗಳು ನೆಲಸಮವಾದಾಗ ಮಾಜಿ ಸಚಿವ ಸಾ.ರಾ.ಮಹೇಶ್ ಒಂದು ವರ್ಷದ ಅವಧಿಯಲ್ಲಿ ಮನೆಗಳನ್ನು ಸರ್ಕಾರದ ವತಿಯಿಂದ ನಿರ್ಮಿಸಿಕೊಟ್ಟ ಪುಣ್ಯಾತ್ಮ ಎಂದು ಸಾ.ರಾ.ಮಹೇಶ್ ಅವರನ್ನು ಕೊಂಡಾಡಿದರು. ಬಳಿಕ ಜಿಲ್ಲಾ ಯುವ ಜಾ.ದಳ ಗ್ರಾಮಾಂತರ ಉಪಾಧ್ಯಕ್ಷ ಕಗ್ಗರ ಕುಚೇಲ ಹಾಗೂ ಪುರಸಭಾ ಸದಸ್ಯ ಕೆ.ಉಮೇಶ್. ಮಾಜಿ ಸಚಿವ ಸಾ.ರಾ.ಮಹೇಶ್ ಅವರ ಹುಟ್ಟು ಹಬ್ಬದ ಹಿನ್ನೆಲೆಯಲ್ಲಿ ಸಾ.ರಾ. ಮಹೇಶ್ ಅವರಿಗೆ ಭಾರೀ ಗಾತ್ರದ ಹಾರ ಹಾಕಿ ಅಭಿನಂದಿಸಿದರು.

ಈ ವೇಳೆ ಮಾತನಾಡಿದ ಅವರು ಚಂದಗಾಲು ಗ್ರಾಮದ ನಾಲ್ವರ ಆತ್ಮಹತ್ಯೆ ಪ್ರಕರಣ ಮುಚ್ಚಿಹೋಗಿದ್ದ ಸುದ್ದಿಯನ್ನು ತಿಳಿದ ನಮ್ಮ ನಾಯಕರಾದ ಸಾ.ರಾ.ಮಹೇಶ್ ಅವರು ದಿಲ್ಲಿಯಲ್ಲಿದ್ದರೂ ಅಲ್ಲಿಂದಲೇ ಅಧಿಕಾರಿಗಳ ವರ್ತನೆ ವಿರುದ್ಧ ಗುಡುಗಿ ನೊಂದ ಕುಟುಂಬಕ್ಕೆ ನ್ಯಾಯ ಒದಗಿಸಿ ಸೂಕ್ತ ಪರಿಹಾರ ಕೊಡಿಸಿದ ಧೀಮಂತ ನಾಯಕ ಎಂದು ಬಣ್ಣಿಸಿದರು.

ತಾಲೂಕಿನಲ್ಲಿ ರಾಜಕೀಯ ದುರುದ್ದೇಶದಿಂದ ನೂರಕ್ಕೂ ಹೆಚ್ಚು ಹೊರಗುತ್ತಿಗೆ ನೌಕರರನ್ನು ವಜಾ ಮಾಡಿದ ಸಂದರ್ಭದಲ್ಲೂ ತಾಲೂಕು ಕಚೇರಿ ಎದುರಿನಲ್ಲಿ ಹೋರಾಟ ಮಾಡಿದವರು ನಮ್ಮ ಸಾ.ರಾ.ಮಹೇಶ್ ಅಣ್ಣ ಎಂದು ಹೇಳಿದರು.

ಪುರಸಭಾ ಸದಸ್ಯ ಉಮೇಶ್ ಮಾತನಾಡಿ ಮಾಜಿ ಸಚಿವ ಸಾ.ರಾ.ಮಹೇಶ್ ಅವರು ಕೆಆರ್.ನಗರ ಮತ್ತು ಸಾಲಿಗ್ರಾಮ ಅವಳಿ ತಾಲೂಕಿನಲ್ಲಿ 970 ಕೋಟಿ ಹೆಚ್ಚು ಅನುದಾನ ತಂದು ಏತ ನೀರಾವರಿ, ನಾಲೆಗಳ ಆಧುನೀಕರಣ ಸೇರಿದಂತೆ ಅನೇಕ ಹತ್ತು ಹಲವು ಜನಪರ ಯೋಜನೆ ಜಾರಿಗೆ ತಂದು ಈ ಭಾಗದ ರೈತರ ಅಭಿವೃದ್ಧಿಗೆ ಸಹಕಾರ ನೀಡಿದ್ದಾರೆ ಎಂದರು.

ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಎಂಡಿಸಿಸಿ ಬ್ಯಾಂಕ್ ನೌಕರರ ಸಂಘದ ಅಧ್ಯಕ್ಷ ಮಂಜುಗೌಡ, ತಾಲೂಕು ಜಾದಳ ವಕ್ತಾರ ಕೆ.ಎಲ್.ರಮೇಶ್, ಪುರಸಭಾ ಸದಸ್ಯರಾದ ಕೆ.ಎಲ್.ಜಗದೀಶ್, ಜಿಲ್ಲಾ ಮುಖಂಡ ಎರೆಮನುಗನಹಳ್ಳಿ ಸುನೀಲ್, ಗ್ರಾ.ಪಂ. ಮಾಜಿ ಅಧ್ಯಕ್ಷ ನಂದಿನಿ ರಮೇಶ್, ಸವಿತಾ ಕುಚೇಲ, ಹೆಚ್.ಪಿ.ಶಿವಣ್ಣ, ಕೃಷ್ಣಶೆಟ್ಟಿ, ಮಹದೇವ್, ಮುಂಡೂರು ಮನು, ಕೇಶವ, ದೀಪು, ಕೇಬಲ ಮಂಜು, ಹೆಬ್ಬಾಳು ಮಂಜಣ್ಣ ಚಂದಗಾಲ ಡಿಂಡಿಮ, ಬಾಲೂರು ಜವರೇಗೌಡ, ಅಪಲೋ ಮಹೇಶ್, ಬಾಲಾಜಿ ಗಣೇಶ್, ಬಾರ್ ಶಿವಕುಮಾರ್, ವೀರಭದ್ರಚಾರ್ ಶಂಕರ್ ಇದ್ದರು.




ತಾಲೂಕು ಒಕ್ಕಲಿಗರ ಸಂಘದ ಗೌರವಾಧ್ಯಕ್ಷ ಮಿರ್ಲೆ ಅಣ್ಣೇಗೌಡ ಹಾಗೂ ಜಾತ್ಯಾತೀತ ಜನತಾದಳ ಮುಖಂಡರು ಅಭಿನಂದಿಸಿ, ಶುಭಾಶಯ ಕೋರಿದರು.



ಮಾಜಿ ಸಚಿವ ಸಾ.ರಾ.ಮಹೇಶ್ ಹುಟ್ಟುಹಬ್ಬದ ಅಂಗವಾಗಿ ಮಿರ್ಲೆ ಗ್ರಾಮದಲ್ಲಿ ಅಯೋಜಿಸಿದ್ದ ರಕ್ತದಾನ ಶಿಬಿರಕ್ಕೆ ಡಾ.ಸಾ.ರಾ.ಧನುಷ್ ಚಾಲನೆ ನೀಡಿದರು.

ಪ್ರತಾಪ್‌ಸಿಂಹರಿಂದ ಹುಟ್ಟುಹಬ್ಬದ ಶುಭಾಶಯಗಳು



ಮಾಜಿ ಸಚಿವರು ಸಾ.ರಾ.ಮಹೇಶ್ ಅವರಿಗೆ ಮಾಜಿ ಸಂಸದ ಪ್ರತಾಪ್ ಸಿಂಹ ಹುಟ್ಟುಹಬ್ಬದ ಶುಭಾಶಯ ಕೋರಿದರು. ಈ ಸಂದರ್ಭದಲ್ಲಿ ವಿಧಾನಪರಿಷತ್ ಸದಸ್ಯ ಮಂಜೇಗೌಡ,ಟಿ. ಸೋಮಣ್ಣ, ರಾ.ಪರಮೇಶ್ ಗೌಡ, ನಾಗೇಶ್, ಗಿರೀಶ್, ವಿಜಯ್, ವಿನೋದ್ ಹಾಜರಿದ್ದರು.

ಮಿರ್ಲೆ, ಭೇರ್ಯ, ಚುಂಚನಕಟ್ಟೆಯಲ್ಲೂ ಹುಟ್ಟುಹಬ್ಬ ಆಚರಣೆ

ಕೆ.ಆರ್.ನಗರ: ಪಟ್ಟಣದ ತೋಪಮ್ಮ ದೇವಾಲಯದಲ್ಲಿ ಜೆಡಿಎಸ್ ಮತ್ತು ಬಿಜೆಪಿ ಕಾರ್ಯಕರ್ತರು ಮುಖಂಡರು ಮಾಜಿ ಸಾ.ರಾ.ಮಹೇಶ್ ಅವರ ಜನ್ಮದಿನೋತ್ಸವವನ್ನು ಸಂಭ್ರಮ ಸಡಗರ, ಸಮಾಜ ಸೇವಾ ಕಾರ್ಯಗಳೊಂದಿಗೆ ಆಚರಿಸಿದರು.

ಪಟ್ಟಣದ ಹಾಸನ-ಮೈಸೂರು ರಸ್ತೆ ಸೇರಿದಂತೆ ಚುಂಚನಕಟ್ಟೆ ಸಾಲಿಗ್ರಾಮ, ಭೇರ್ಯ, ಮಿರ್ಲೆ ಗ್ರಾಮದಲ್ಲಿ ಮಾಜಿ ಸಚಿವರಾದ ಸಾ.ರಾ.ಮಹೇಶ್ ಅವರ ಫ್ಲೆಕ್ಸ್ ಬಂಟಿಂಗ್ಸ್, ಬ್ಯಾನರ್ ಭರಾಟೆ ಜೋರಾಗಿತ್ತು. ಇನ್ನೂ ದೇವಾಲಯವನ್ನು ತಳಿರು, ತೋರಣ ಹೂಗಳಿಂದ ಅಲಂಕರಿಸಲಾಗಿತ್ತು.

ಈ ಸಂದರ್ಭದಲ್ಲಿ ನೆರೆದಿದ್ದ ಸಾವಿರಾರು ಜೆಡಿಎಸ್ ಕಾರ್ಯಕರ್ತರು, ಅಭಿಮಾನಿಗಳು, ಮಾಜಿ ಸಚಿವರಿಗೆ ಜನ್ಮ ದಿನದ ಶುಭಾಶಯ ಕೋರಿ ಮುಂದಿನ ಚುನಾವಣೆಯಲ್ಲಿ ಗೆದ್ದು ಉನ್ನತ ಸ್ಥಾನ ಅಲಂಕರಿಸಲಿದ್ದಾರೆ ಎಂದು ಘೋಷಣೆ ಕೂಗಿದರು.

ದಲಿತ ಮುಖಂಡರಾದ ಹನಸೋಗೆ ನಾಗರಾಜ್, ಹಂಪಾಪುರ ಸೂರಿ, ಗೊರಗುಂಡಿ ಶ್ರೀನಿವಾಸ್ ಪ್ರಸಾದ್, ಡಿ.ಕಾಂತರಾಜ್ ಅವರುಗಳು ಮಾಜಿ ಸಚಿವರಿಗೆ ಬುದ್ಧ, ಬಸವ, ಅಂಬೇಡ್ಕರ್ ಭಾವಚಿತ್ರದ ಫೋಟೋ ನೀಡಿ ಶುಭಾಶಯ ಕೋರಿದರು.

ತಾಯಿ ಮತ್ತು ಮಕ್ಕಳ ಆಸ್ಪತ್ರೆ ಹಾಗೂ ತಾಲೂಕು ಸಾರ್ವಜನಿಕ ಆಸ್ಪತ್ರೆಯ ರೋಗಿಗಳಿಗೆ ಮಾಜಿ ಸಚಿವ ಸಾ.ರಾ.ಮಹೇಶ್ ಪುತ್ರ, ಡಾ.ಸಾ.ರಾ.ಧನುಷ್ ಅವರು ಹಣ್ಣು ಹಂಪಲು ವಿತರಿಸಿದರು.

ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆ ಶ್ರೀರಾಮ ದೇವರಿಗೆ ಮಾಜಿ ಸಚಿವ ಸಾ.ರಾ. ಮಹೇಶ್ ಅವರ ಹೆಸರಿನಲ್ಲಿ ಕುಂಕುಮಾರ್ಚನೆಯನ್ನು ಜಿಲ್ಲಾ ಜೆಡಿಎಸ್ ಮುಖಂಡ ಹಳೇಯೂರು ಹೆಚ್.ಕೆ.ಮಧುಚಂದ್ರ ಅವರ ನೇತೃತ್ವದಲ್ಲಿ ನೆರವೇರಿಸಿದ ಬಳಿಕ ಚುಂಚನಕಟ್ಟೆ ಬಸವನ ವೃತ್ತದಲ್ಲಿ ಮಾಜಿ ಸಚಿವ ಸಾ.ರಾ. ಮಹೇಶ್ ಅವರಿಗೆ ಭಾರೀ ಗಾತ್ರದ ಹಾರ ಹಾಕಿ ಅಭಿನಂದಿಸಿದ ಬಳಿಕ ಕೇಕ್ ಕತ್ತರಿಸಿ ಬಹಳ ವಿಜೃಂಭಣೆಯಿಂದ ಆಚರಿಸಿದರು.

ಮಾಜಿ ಸಚಿವರಾದ ಸಾ.ರಾ.ಮಹೇಶ್ ಜನ್ಮದಿನೋತ್ಸವದ ಅಂಗವಾಗಿ ಸಾಲಿಗ್ರಾಮ ತಾಲೂಕಿನ ಮಿರ್ಲೆ ಗ್ರಾಮದ ಜೆಡಿಎಸ್ ಪಕ್ಷದ ಮುಖಂಡರು, ಕಾರ್ಯಕರ್ತರು, ಯುವಕರು ಹಾಗೂ ಗ್ರಾಮಸ್ಥರು ಗ್ರಾಪಂ ಮುಂಭಾಗದಲ್ಲಿ ಸಮೃದ್ಧಿ ಆಸ್ಪತ್ರೆ ಕೆ.ಆರ್.ನಗರ ಹಾಗೂ ಸಾಲಿಗ್ರಾಮದ ಫೋಕಸ್ ಡಯಾಗ್ನೋಸ್ಟಿಕ್ ಸೆಂಟರ್ ಸಹಯೋಗದೊಂದಿಗೆ ರಕ್ತದಾನ ಶಿಬಿರ ಮತ್ತು ಮಧುಮೇಹ, ಬಿಪಿ ಪರೀಕ್ಷೆ ಕಾರ್ಯಕ್ರಮಕ್ಕೆ ಮಾಜಿ ಸಾ.ರಾ.ಮಹೇಶ್ ಅವರ ಪುತ್ರ ಡಾ.ಸಾ.ರಾ.ಧನುಷ್ ಅವರು ಚಾಲನೆ ನೀಡಿದರು.



ಮಾಜಿ ಸಚಿವ ಸಾ.ರಾ.ಮಹೇಶ್ ಹುಟ್ಟುಹಬ್ಬದ ಅಂಗವಾಗಿ ಜಿಲ್ಲಾ ಗ್ರಾಮಾಂತರ ಯುವ ಜೆಡಿಎಸ್ ಅಧ್ಯಕ್ಷ ಕಗ್ಗರೆ ಕುಚೇಲ, ಪುರಸಭಾ ಸದಸ್ಯ ಕೆ.ಉಮೇಶ್ ಬಾರಿಗಾತ್ರದ ಹಾರಹಾಕಿ ಅಭಿನಂದಿಸಿ ಶುಭಾಶಯ ಕೋರಿದರು, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಇದ್ದರು.

ನನ್ನ ಆಯ್ಕೆ, ತಿರಸ್ಕಾರವನ್ನು ಕ್ಷೇತ್ರದ ಜನರಿಗೆ ಬಿಟ್ಟಿದ್ದೇನೆ



ಚುಂಚನಕಟ್ಟೆ: ನಾನು ಕ್ಷೇತ್ರದ ಜನರ ಮಗನಾಗಿದ್ದು ಅವರ ಸೇವೆಯೆ ನನ್ನ ಮೊದಲ ಆದ್ಯತೆಯಾಗಿ ಕಳೆದ 20 ವರ್ಷಗಳಿಂದ ದುಡಿದಿದ್ದು ಅವರ ಆಯ್ಕೆಯನ್ನು, ತಿರಸ್ಕಾರವನ್ನು ಅವರಿಗೆ ಬಿಟ್ಟಿದ್ದೇನೆ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ಹೇಳಿದರು.

ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆಯಲ್ಲಿ ಸಾಲಿಗ್ರಾಮ ತಾಲೂಕು ಜೆಡಿಎಸ್ ಘಟಕದ ವತಿಯಿಂದ ನಡೆದ ಸಾ.ರಾ ಮಹೇಶ್ ಹುಟ್ಟುಹಬ್ಬದಲ್ಲಿ ಭಾಗವಹಿಸಿ ಆಂಜನೇಯ ಮೂರ್ತಿಗೆ ಪೂಜೆ ಸಲ್ಲಿಸಿ ಮಾತನಾಡಿದ ಅವರು ಅಧಿಕಾರ ಇದ್ದಾಗ ಕ್ಷೇತ್ರದ ಜನರ ಸೇವೆಯನ್ನು ಪ್ರಾಮಾಣಿಕವಾಗಿ ಮಾಡಿದ್ದು ಅವರ ಪ್ರೀತಿ, ನಂಬಿಕೆ ವಿಶ್ವಾಸ ನನಗೆ ಕ್ಷೇತ್ರದಲ್ಲಿ ಹೆಚ್ಚಿಗೆ ದೊರೆತಿದ್ದು ಅದಕ್ಕೆ ನಾನು ಋಣಿಯಾಗಿರುವೆ ಎಂದು ಹೇಳಿದರು.

ಕಾರ್ಯಕರ್ತರು, ಅಭಿಮಾನಿಗಳೇ ಹುಟ್ಟುಹಬ್ಬ ಆಯೋಜನೆ ಮಾಡಿದ್ದು ನನ್ನ ಮೇಲಿನ ಪ್ರೀತಿ ಎಂದಿಗೂ ಕಡಿಮೆಯಾಗಿಲ್ಲ ಆದರೆ ಕೆಲ ವ್ಯತ್ಯಾಸಗಳು ಸಹಜ ಅಧಿಕಾರ ಪಡೆದವರು ತಾರತಮ್ಯ ಮಾಡದೆ ಕೆಲಸ ಮಾಡಲಿ ಎಂಬುದೇ ನಮ್ಮ ಆಶಯವಾಗಿದ್ದು ಮುಂದಿನ ದಿನಗಳ ಬಗ್ಗೆ ಈಗಲೇ ಏನು ಹೇಳುವುದಿಲ್ಲ ಎಂದು ತಿಳಿಸಿದರು.


ಈ ಸಂಧರ್ಭದಲ್ಲಿ ಯುವ ಜೆಡಿಎಸ್ ಅಧ್ಯಕ್ಷ ಕರ್ತಾಳ್‌ಮಧು, ಗ್ರಾಪಂ ಅಧ್ಯಕ್ಷೆ ರೇಖಾ, ಹೊಸೂರು ಸಹಕಾರ ಸಂಘದ ಅಧ್ಯಕ್ಷ ಜಗದೀಶ್, ನಿರ್ದೇಶಕ ಕೃಷ್ಣಮೂರ್ತಿ, ನವೀನ್, ರಮೇಶ್, ಶ್ರೀಧರ್, ವಿವೇಕ್, ಒಕ್ಕಲಿಗರ ಸಂಘದ ನಿರ್ದೇಶಕ ಅಂಕನಹಳ್ಳಿತಿಮ್ಮಪ್ಪ, ಮುಖಂಡರಾದ ಬಿ.ರಮೇಶ್, ವಿಜೇಂದ್ರ, ಹಾಡ್ಯಮಹೇಶ್, ಧರ್ಮಕುಮಾರ್, ಎಲ್‌ಐಸಿ ರಮೇಶ್, ನಾಡಪ್ಪನಹಳಿ ಮಹದೇವ್, ಜಮೀಲ್, ಪ್ರವೀಣ, ಗ್ರಾಪಂ ಸದಸ್ಯ ಚುಂಚನಕಟ್ಟೆ, ಗೋವಿಂದೇಗೌಡ, ಕೃಷ್ಣ, ರಾಕೇಶ್, ತಿಲಕ್ ಕುಮಾರ್, ಲಕ್ಷ್ಮಣ, ಸಿ.ಜಿ ಬಾಬು, ಡಿಎಸ್ ಕುಮಾರ್ ಮತ್ತಿತರರು ಹಾಜರಿದ್ದರು.

ಟಾಸ್ ಹಾಕುವ ಮೂಲಕ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ

ಕೆ.ಆರ್.ನಗರ: ಪಟ್ಟಣದ ಡಾ.ರಾಜ್ ಬಾನಂಗಳದ ರೇಡಿಯೊ ಮೈದಾನದಲ್ಲಿ ಭಗತ್ ಸಿಂಗ್ ಯೂತ್ ಮೂಮೆಂಟ್ ವತಿಯಿಂದ ಅಯೋಜಿಸಿದ್ದ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿಗೆ ಮಾಜಿ ಸಚಿವ ಸಾ.ರಾ.ಮಹೇಶ್ ಟಾಸ್ ಹಾಕುವ ಮೂಲಕ ಚಾಲನೆ ನೀಡಿದರು. ಬಳಿಕ ಮಾತನಾಡಿ ಸೋಲು ಗೆಲುವು ಇದ್ದದ್ದೆ. ಆದ್ದರಿಂದ ಎಲ್ಲರೂ ಸಮಾನ ಮನಸ್ಕರ ರೀತಿಯಲ್ಲಿ ತಮ್ಮಗಳ ಬಾಂಧವ್ಯ ಇಟ್ಟುಕೊಂಡು ಪಂದ್ಯವನ್ನು ಆಡಿ ಎಂದು ಹುರಿದುಂಬಿಸಿದರು. ಇದಕ್ಕೂ ಮೊದಲು ಕ್ರಿಕೆಟ್ ಬ್ಯಾಟ್ ಹಿಡಿದುಕೊಂಡ ಮಾಜಿ ಸಾ.ರಾ.ಮಹೇಶ್ ಮೊದಲ ಬೌಲಿಂಗ್ ನಲ್ಲಿ ಸಿಕ್ಸರ್ ಹೊಡೆದಾಗ ಅಭಿಮಾನಿಗಳು ಮುಂದೆ ನೀವೆ ನಮ್ಮ ಶಾಸಕರು ಎಂದು ಘೋಷಣೆ ಕೂಗಿದರು.




ಮಾಜಿ ಸಚಿವ ಸಾ.ರಾ.ಮಹೇಶ್ ಅವರ ಹುಟ್ಟುಹಬ್ಬದ ಅಂಗವಾಗಿ ಅವರಿಗೆ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಹೂಗುಚ್ಛ ನೀಡಿ, ಶುಭಾಶಯ ಕೋರಿದರು.



ಮಾಜಿ ಸಚಿವ ಸಾ.ರಾ.ಮಹೇಶ್ ಅವರ ಹುಟ್ಟುಹಬ್ಬದ ಅಂಗವಾಗಿ ತಾಲೂಕು ಒಕ್ಕಲಿಗರ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್ ಗೌಡ ನೇತೃತ್ವದಲ್ಲಿ ರೇಷ್ಮೆ ಹಾರ, ಶಾಲು, ಪೇಟ ಹಾಕಿ ಅಭಿನಂದಿಸಲಾಯಿತು.

ಮೇವು ಹುಡುಕಿಕೊಂಡು ಬಂದು ಬಾವಿಗೆ ಬಿದ್ದು ಒದ್ದಾಡುತ್ತಿದ್ದ ಹಸುವಿನ ರಕ್ಷಣೆ



ಬೆಟ್ಟದಪುರ: ಮೇವನ್ನು ಅರಿಸಿಕೊಂಡು ಹೋಗುತ್ತಿದ್ದ ಹಸುವೊಂದು ಆಕಸ್ಮಿಕವಾಗಿ ಬಾವಿಗೆ ಬಿದ್ದು ಒದ್ದಾಡಿದ ಘಟನೆ ಶನಿವಾರ ಸಂಜೆ ಪಿರಿಯಾಪಟ್ಟಣ ತಾಲೂಕಿನ ಮುತ್ತಿನ ಮುಳಸೋಗೆ ಗ್ರಾಮದ ಬಳಿ ಸಂಭವಿಸಿದೆ.

ಕಾವೇರಿ ನದಿ ತೀರದಿಂದ 150 ಕೆರೆಗಳಿಗೆ ನೀರು ತುಂಬಿಸುವ ಕಾವೇರಿ ನೀರಾವರಿ ನಿಗಮದ ಏತ ನೀರಾವರಿಯ ಯಂತ್ರಗಾರದ ಪಕ್ಕ ಘಟನೆ ನಡೆದಿದ್ದು, ಮೇವು ಹುಡುಕಿಕೊಂಡು ಬಂದ ಹಸು ಆಯತಪ್ಪಿ ಬಾವಿಗೆ ಬಿದ್ದು ಒದ್ದಾಡುತ್ತಿತ್ತು.

ಸುದ್ದಿ ತಿಳಿದ ಕುಶಾಲನಗರ ಅಗ್ನಿಶಾಮಕ ದಳದ ಠಾಣಾಧಿಕಾರಿ ರಂಜಿತ್ ಹಾಗೂ ಸಿಬ್ಬಂದಿಗಳು ಹಗ್ಗ ಕಟ್ಟಿ ಕ್ರೇನ್ ಮುಖಾಂತರ ಮೇಲೆತ್ತಿ ರಕ್ಷಣೆ ಮಾಡಿ ಹಸು ಮಾಲಿಕ ಚಂದ್ರು ಅವರಿಗೆ ಒಪ್ಪಿಸಿದರು.

ಗ್ರಾಮ ಪಂಚಾಯತಿ ಸದಸ್ಯ ಮುತ್ತಿನ ಮುಳಸೋಗೆ ಶಿವಕುಮಾರ್ ಮಾತನಾಡಿ ಅಗ್ನಿಶಾಮಕ ದಳದ ಸಿಬ್ಬಂದಿಗಳು ಹಸುವನ್ನು ಕ್ರೈನ್ ಯಂತ್ರದ ಮೂಲಕ ಮೇಲೆತ್ತಿ ರಕ್ಷಣೆ ಮಾಡಿ ಮನವೀಯತೆ ಮೆರೆದಿದ್ದಾರೆ ಸಂಬಂ ಧಪಟ್ಟ ಇಲಾಖೆ ಅಧಿಕಾರಿಗಳು ಅದರ ಸುತ್ತ ರಕ್ಷಣಾ ಕವಚ ಅಳವಡಿಸಬೇಕು ಎಂದರು.

ರಕ್ಷಣಾ ಕಾರ್ಯಾಚರಣೆಯಲ್ಲಿ ಅಗ್ನಿಶಾಮಕ ದಳದ ಸಿಬ್ಬಂದಿಗಳಾದ ಪ್ರವೀಣ್, ವಸಂತ್, ಪ್ರೇಮಾನಂದ್, ಸಂದೀಪ್, ಶಶಿ ಭಾಗವಹಿಸಿದ್ದರು.

ವಾಟಾಳು ಮಠದ ಶ್ರೀಗಳ ಆಶೀರ್ವಾದ ಪಡೆದ ಬಿಜೆಪಿ ಜಿಲ್ಲಾಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ

ಬೂತ್ ಮಟ್ಟದ ಕಾರ್ಯಕರ್ತರ ಮನೆಗೆ ಭೇಟಿ ನೀಡಿ ಪಕ್ಷ ಸಂಘಟನೆ ಬಗ್ಗೆ ಚರ್ಚೆ

ತಿ.ನರಸೀಪುರ, ಆ.10– ಬೂತ್ ಮಟ್ಟದಲ್ಲಿ ಬಿಜೆಪಿ ಪಕ್ಷವನ್ನು ಬಲಪಡಿಸುವ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತಾಗಿರುವ ಬಿಜೆಪಿ ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ ತಾಲೂಕಿನ ವಾಟಾಳು ಮಠಕ್ಕೆ ಭೇಟಿ ನೀಡಿ ಸ್ವಾಮೀಜಿಗಳ ಆಶೀರ್ವಾದ ಪಡೆದುಕೊಂಡರು.

ಇತ್ತೀಚೆಗಷ್ಟೆ ಪಟ್ಟಣದಲ್ಲಿ ನಡೆದ ಬಿಜೆಪಿ ಪಕ್ಷದ ಸಂಘಟನಾತ್ಮಕ ಸಭೆಯಲ್ಲಿ ಭಾಗವಹಿಸಿದ್ದ ಕುಂಬ್ರಹಳ್ಳಿ ಸುಬ್ಬಣ್ಣ ಕಾರ್ಯಕರ್ತರಿಗೆ ಬೂತ್ ಮಟ್ಟದಲ್ಲಿ ಪಕ್ಷವನ್ನು ಬಲಪಡಿಸುವಂತೆ ಕರೆ ನೀಡಿದ್ದರು. ಜೊತೆಗೆ ಪಕ್ಷದ ಕಾರ್ಯ ಸಂಘಟನೆಯಲ್ಲಿ ತೊಡಗಿಕೊಳ್ಳದ ಬೂತ್ ಮಟ್ಟದ ಅಧ್ಯಕ್ಷರು ಹಾಗು ಕಾರ್ಯಕರ್ತರನ್ನು ಮುಲಾಜಿಲ್ಲದೇ ಸಂಘಟನೆಯಿಂದ ವಿಮುಕ್ತಗೊಳಿಸುವಂತೆ ಕ್ಷೇತ್ರಾಧ್ಯಕ್ಷರಿಗೆ ಸೂಚನೆ ನೀಡಿದ್ದ ಬೆನ್ನಲ್ಲೇ ಕಾರ್ಯಪ್ರವೃತ್ತರಾದ ಜಿಲ್ಲಾಧ್ಯಕ್ಷರು ಹೋಬಳಿ ಹಾಗೂ ಗ್ರಾಮ ಮಟ್ಟದಲ್ಲಿ ಪಕ್ಷ ಸಂಘಟನೆಗೆ ಚಾಲನೆ ನೀಡಿದ್ದಾರೆ.

ಪಕ್ಷ ಸಂಘಟನೆಗೊಳಿಸುವ ಮೊದಲ ಹಂತದ ಪ್ರಕ್ರಿಯೆಗೆ ಚಾಲನೆ ನೀಡಿರುವ ಸುಬ್ಬಣ್ಣ ತಾಲೂಕಿನ ವಾಟಾಳು ಗ್ರಾಮದ ಮದ್ವಾಟಾಳು ಸೂರ್ಯ ಸಿಂಹಾಸನ ಮಠಕ್ಕೆ ಭೇಟಿ ನೀಡಿ ಮಠಾಧ್ಯಕ್ಷರಾದ ಸಿದ್ದಲಿಂಗಶಿವಾಚಾರ್ಯ ಸ್ವಾಮೀಜಿಗಳ ಆಶೀರ್ವಾದ ಪಡೆದರು. ಈ ವೇಳೆ ಶ್ರೀಗಳು ನೂತನ ಅಧ್ಯಕ್ಷರಿಗೆ ಫಲ ಪುಷ್ಪ ತಾಂಬೂಲ ನೀಡಿ ಗೌರವಿಸಿದರು.

ಗ್ರಾಮದ ಬಿಜೆಪಿ ಕಾರ್ಯಕರ್ತರು ಹಾಗೂ ಬೂತ್ ಮಟ್ಟದ ಕಾರ್ಯಕರ್ತರ ಮನೆಗೆ ಭೇಟಿ ನೀಡಿದ ಕುಂಬ್ರಳ್ಳಿ ಸುಬ್ಬಣ್ಣ ಪಕ್ಷ ಸಂಘಟನೆ ಕುರಿತಂತೆ ಕಾರ್ಯಕರ್ತರೊಂದಿಗೆ ಸಮಾಲೋಚನೆ ನಡೆಸಿದರು.

ಈ ವೇಳೆ ಮಾತನಾಡಿದ ಅವರು ತಿ.ನರಸೀಪುರ ತಾಲೂಕಿನಲ್ಲಿ ಬಿಜೆಪಿ ಪಕ್ಷವನ್ನು ಸದೃಢಗೊಳಿಸಲು ಕಾರ್ಯಕರ್ತರನ್ನು ಹುರಿದುಂಬಿಸುವ ಕೆಲಸ ಮಾಡಲಾಗುತ್ತಿದೆ. ಪಕ್ಷದ ಸಂಘಟನೆಯಲ್ಲಿ ತಾಲೂಕು ಹೆಚ್ಚು ಪ್ರಾತಿನಿಧ್ಯ ಪಡೆದುಕೊಂಡಿರುವ ಹಿನ್ನೆಲೆಯಲ್ಲಿ ಇಲ್ಲಿ ಪಕ್ಷ ಸಂಪೂರ್ಣವಾಗಿ ಬಲವರ್ಧನೆಗೊಳ್ಳಬೇಕಾದ ಅವಶ್ಯಕತೆ ಇದೆ ಎಂದರು.

ಪುರಸಭೆ ಸದಸ್ಯ ಹಾಗೂ ಅಖಿಲ ಭಾರತ ವೀರಶೈವ ಮಹಾಸಭಾದ ಉಪಾಧ್ಯಕ್ಷ ಎಸ್.ಕೆ.ಕಿರಣ್ ಮಾತನಾಡಿ ಕುಂಬ್ರಳ್ಳಿ ಶಿವಣ್ಣರವರು ತಿ.ನರಸೀಪುರ ಮಂಡಲದಲ್ಲಿ ಪಕ್ಷವನ್ನು ತಳಮಟ್ಟದಿಂದ ಸಧೃಡಗೊಳಿಸಲು ಕಾರ್ಯಪ್ರವೃತ್ತರಾಗಿದ್ದು, ಅವರ ಆಶಯಕ್ಕೆ ತಕ್ಕಂತೆ ಕಾರ್ಯಕರ್ತರೆಲ್ಲರೂ ಅವರಿಗೆ ಸಾಥ್ ನೀಡುವ ಕೆಲಸ ಮಾಡುತ್ತೇವೆ. ಮುಂಬರುವ ಸ್ಥಳಿಯ ಸಂಸ್ಥೆ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳು ಗೆಲ್ಲಲು ಪೂರಕ ವಾತಾವರಣ ನಿರ್ಮಿಸುವ ನಿಟ್ಟಿನಲ್ಲಿ ಅಧ್ಯಕ್ಷರೊಟ್ಟಿಗೆ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇವೆ ಎಂದರು.

ಈ ವೇಳೆ ಬಿಜೆಪಿ ಕ್ಷೇತ್ರಾಧ್ಯಕ್ಷ ಶಿವಕುಮಾರ್, ಮೂಗೂರು ಸಿದ್ದರಾಜು, ಕರೋಹಟ್ಟಿ ಮಹದೇವಯ್ಯ, ತಾ.ಪಂ.ಮಾಜಿ ಸದಸ್ಯ ಸಿ.ಎಂ.ಮಹದೇವಯ್ಯ, ಜಿ.ಪಂ. ಮಾಜಿ ಸದಸ್ಯ ಕೆಂಪಣ್ಣ ವಕೀಲ ಬೊಮ್ಮಾಯಿ, ಪರಮೇಶ್, ಹೊಸಪುರ ಜಗ್ಗೇಶ್, ಸುರೇಶ್, ಅಖಿಲ ಬಾರತ ವೀರಶೈವ ಮಹಾಸಭಾದ ಅಧ್ಯಕ್ಷ ಎಸ್‌ಎಂಆರ್ ಪ್ರಕಾಶ್, ಅಕ್ಕಿ ನಂಜುಂಡಸ್ವಾಮಿ, ಪೂಜಿತ್ ಕುಮಾರ್, ಕರೋಹಟ್ಟಿ ರಾಜಶೇಖರ್, ಅರುಣ್, ಮೂಗೂರು ಅರವಿಂದ್, ಹರೀಶ್, ಮುಖಂಡರು ಸೇರಿದಂತೆ ಮತ್ತಿತರರಿದ್ದರು.



ಬಿಜೆಪಿ ಜಿಲ್ಲಾಧ್ಯಕ್ಷರಾಗಿ ಆಯ್ಕೆಯಾದ ಕುಂಬರಹಳ್ಳಿ ಸುಬ್ಬಣ್ಣ, ವಾಟಾಳು ಮಠಕ್ಕೆ ಭೇಟಿ ನೀಡಿ ಶ್ರೀಗಳ ಆಶೀರ್ವಾದ ಪಡೆದರು.

ನಂಜನಗೂಡಲ್ಲಿ ರಾಯರ ಆರಾಧನಾ ಮಹೋತ್ಸವ



ನಂಜನಗೂಡು: ನಗರದ ರಾಷ್ಟ್ರಪತಿ ರಸ್ತೆಯಲ್ಲಿರುವ ಶ್ರೀರಾಘವೇಂದ್ರ ಸ್ವಾಮಿಗಳ ಪ್ರತೀಕ ಸನ್ನಿಧಾನದಲ್ಲಿ ಶ್ರೀ ರಾಘವೇಂದ್ರ ತೀರ್ಥ ಗುರುಸಾರ್ವಭೌಮರ 354ನೇ ವರ್ಷದ ಆರಾಧನಾ ಮಹೋತ್ಸವ ಭಾನುವಾರ ಪೂರ್ವಾರಾಧನೆ ಸೇರಿದಂತೆ ಸಕಲ ಧಾರ್ಮಿಕ ಪೂಜಾ ಕೈಂಕರ್ಯಗಳು ನೆರವೇರಿದವು. ಶ್ರೀರಾಘವೇಂದ್ರಸ್ವಾಮಿಗಳವರ ಅನುಗ್ರಹರುವ ಏಕೈಕ ಮಠ ಎನ್ನುವ ಹೆಗ್ಗಳಿಕೆ ಹೊಂದಿರುವ ಈ ದೇಗುಲದಲ್ಲಿ ಭಾನುವಾರ ಮುಂಜಾನೆ ರಾಯರ ಪಾದ ಪೂಜೆ, ಪಂಚಾಮೃತ ಸೇವೆ ಸೇರಿದಂತೆ ಮಹಾಮಂಗಳಾರತಿ ನೆರವೇರಿಸಿ ಭಕ್ತರ ದರ್ಶನಕ್ಕೆ ಅನುವು ಮಾಡಿಕೊಡಲಾಯಿತು. ವಿದ್ವಾನ್ ಭಾನುಸಿಂಹ ಅವರು ದಾಸವಾಣಿಯನ್ನು ನಡೆಸಿಕೊಟ್ಟರು.

ನಂಜನಗೂಡು ಆಸ್ಪತ್ರೆ ಆವರಣದಲ್ಲಿ ಸದ್ದು ಮಾಡಿದ ಲಾಂಗ್, ಚಾಕು, ಕಬ್ಬಿಣದ ರಾಡು

ದಿಕ್ಕಾಪಾಲಾಗಿ ಓಡಿದ ರೋಗಿಗಳು, ಹಳೇ ದ್ವೇಷದ ಹಿನ್ನೆಲೆಯಲ್ಲಿ ಪುಂಡಾಟ ನಡೆಸಿದ ಗುಂಪು

ನಂಜನಗೂಡು: ನಗರದ ಸರ್ಕಾರಿ ಆಸ್ಪತ್ರೆ ಆವರಣದಲ್ಲಿ ಲಾಂಗ್, ಚಾಕು, ಕಬ್ಬಿಣದ ರಾಡುಗಳು ಸದ್ದು ಮಾಡಿವೆ. ಯುವಕರ ಗುಂಪೊಂದು ಇಬ್ಬರ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿದ್ದರಿಂದ ಆಸ್ಪತ್ರೆ ಆವರಣ ರಣರಂಗವಾಗಿ ಮಾರ್ಪಟಾಗಿ ರೋಗಿಗಳು ದಿಕ್ಕಾಪಾಲಾಗಿ ಓಡಿಹೋದ ಘಟನೆ ಇಂದು ಸಂಭವಿಸಿದ್ದು, ಜೊತೆಗೆ ಲಾಂಗ್ ಹಿಡಿದು ಆಸ್ಪತ್ರೆ ಬಳಿ ರಾಜಾರೋಷವಾಗಿ ಓಡಾಡಿದ ಪುಂಡರ ಗುಂಪು ಕಂಡು ಜನರು ಬೆಚ್ಚಿ ಬಿದ್ದಿದ್ದಾರೆ.

ಮೈಸೂರಿನ ಮಂಡಿಮೊಹಲ್ಲಾದ ನಿವಾಸಿ ಅಭಿಲಾಷ್ ಹಾಗೂ ರವಿ ಹಲ್ಲೆಯಿಂದ ಗಾಯಗೊಂಡಿದ್ದು, ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿದೆ. ನಾಲ್ವರ ಗುಂಪು ಕಬ್ಬಿಣದ ರಾಡು, ಚಾಕು, ಲಾಂಗ್ ಹಾಗೂ ಮರದ ಪಟ್ಟಿಗಳಿಂದ ಮಾರಣಾಂತಿಕ ಹಲ್ಲೆ ನಡೆಸಿ ಪುಂಡಾಟ ಮೆರೆದಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆ ವಿವರ: ಹಲ್ಲೆಗೊಳಗಾಗಿರುವ ಅಭಿಷೇಕ್ ನಂಜನಗೂಡಿನ ಶ್ರೀರಾಂಪುರದ ಯುವತಿಯನ್ನು ಮೂರು ವರ್ಷಗಳ ಹಿಂದೆ ವಿವಾಹವಾಗಿದ್ದು, ಪತ್ನಿಯ ದೊಡ್ಡಮ್ಮನ ಮಗ ಶಿವಕುಮಾರ್‌ಗೆ ಸ್ಥಳೀಯರಾದ ಸುಭಾಷ್, ಆಕಾಶ್ ಹಾಗೂ ಸತ್ಯ ಎಂಬುವರು ಕಪಿ ಕಪಿ ಎಂದು ಛೇಡಿಸುತ್ತಿದ್ದರು ಎನ್ನಲಾಗಿದ್ದು ಈ ಬಗ್ಗೆ ಶಿವಕುಮಾರ್ ತಾಯಿ ನಂಜನಗೂಡು ಟೌನ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಇದರಿಂದ ಈ ಮೂವರು ಶಶಿಕುಮಾರ್ ಮೇಲೆ ದ್ವೇಷ ಬೆಳೆಸಿಕೊಂಡಿದ್ದರು. ಶುಕ್ರವಾರ ವರಮಹಾಲಕ್ಷ್ಮಿ ಹಬ್ಬಕ್ಕಾಗಿ ಅಭಿಷೇಕ್ ತನ್ನ ಪತ್ನಿ ಮನೆಗೆ ಬಂದಿದ್ದಾಗ ಸಂಬಂಧಿಯೋರ್ವರ ಅನಾರೋಗ್ಯದ ಕಾರಣ ಚಿಕಿತ್ಸೆಗಾಗಿ ನಂಜನಗೂಡಿನ ಸರಕಾರಿ ಆಸ್ಪತ್ರೆಗೆ ಅವರನ್ನು ಕರೆತಂದಿದ್ದರು. ಇದೇ ವೇಳೆ ಹೊಂಚು ಹಾಕಿದ ಸುಭಾಷ್ ಹಾಗೂ ಇತರರು ಆಟೋದಲ್ಲಿ ಮಾರಕಾಸ್ತ್ರಗಳ ಸಮೇತ ಬಂದು ಲಾಂಗ್‌ಗಳನ್ನು ಹಿಡಿದು ಭೀತಿ ಸೃಷ್ಟಿಸಿ ಶಿವಕುಮಾರ್ ಭಾವ ಅಭಿಷೇಕ್ ಮೇಲೆ ಅಟ್ಯಾಕ್ ಮಾಡಿದ್ದಾರೆ. ಈ ಸಂದರ್ಭದಲ್ಲಿ ಬಿಡಿಸಲು ಬಂದ ರವಿ ಎಂಬುವರ ಮೇಲೂ ಅಟ್ಯಾಕ್ ಮಾಡಿದ್ದಾರೆ.

ಇವರಿಂದ ಅಭಿಷೇಕ್ ತಪ್ಪಿಸಿಕೊಂಡು ಓಡಿದರಾದರೂ ಚೇಸ್ ಮಾಡಿದ ಆರೋಪಿಗಳು ಹಟ್ಟಿಮಾರಮ್ಮನ ದೇವಸ್ಥಾನದ ಬಳಿ ಹಿಡಿದು ಮತ್ತೆ ಹಲ್ಲೆ ನಡೆಸಿದ್ದಾರೆ. ತೀವ್ರವಾಗಿ ಗಾಯಗೊಂಡ ಅಭಿಷೇಕ್ ಹಾಗೂ ರವಿ ಅವರನ್ನು ನಂಜನಗೂಡಿನ ಸರಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಬಳಿಕ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಆಸ್ಪತ್ರೆ ಆವರಣದಲ್ಲಿ ಮಾರಕಾಯುಧಗಳನ್ನು ಹಿಡಿದು ನಡೆಸುತ್ತಿದ್ದ ಹಲ್ಲೆಯನ್ನು ಕಂಡು ರೋಗಿಗಳು ದಿಕ್ಕಾಪಾಲಾಗಿ ಓಡಿದರು. ಸುತ್ತ ಮುತ್ತಲ ಪ್ರದೇಶ ರಣರಂಗವಾಗಿ ಮಾರ್ಪಟ್ಟು, ಕಟ್ಟಿಗೆ, ಚಾಕು, ಮತ್ತು ಲಾಂಗುಗಳು ಸದ್ದು ಮಾಡಿ ಭಯದ ವಾತಾವರಣ ಸೃಷ್ಟಿಯಾಗಿತ್ತು. ಈ ಸಂಬಂಧ ನಂಜನಗೂಡು ಪಟ್ಟಣ ಪೊಲೀಸ್ ಠಾಣೆಯಲ್ಲಿ ನಾಲ್ವರ ವಿರುದ್ಧ ಪ್ರಕರಣ ದಾಖಲಾಗಿದ್ದು, ಆರೋಪಿಗಳ ಬಂಧನಕ್ಕಾಗಿ ಪೊಲೀಸರು ಪತ್ತೆಕಾರ್ಯ ಕೈಗೊಂಡಿದ್ದಾರೆ. ಪರಿಸ್ಥಿತಿ ತಿಳಿಯಾದ ಮೇಲೆ ಆಸ್ಪತ್ರೆಯಲ್ಲಿದ್ದ ರೋಗಿಗಳು ಮತ್ತು ಅವರ ಸಂಬಂಧಿಕರು ಮತ್ತೆ ಆಸ್ಪತ್ರೆಗೆ ಮರಳಿದ್ದಾರೆ.

ಕಬ್ಬಿಗೆ ಪ್ರತಿ ಟನ್‌ಗೆ 4500 ನಿಗದಿಪಡಿಸಲು ಆಗ್ರಹ

ಬನ್ನೂರು: ಮೈಸೂರು ಹಾಗೂ ಸುತ್ತಮುತ್ತಲಿನ ಗ್ರಾಮಾಂತರ ಪ್ರದೇಶದಲ್ಲಿ ಈ ಭಾರೀ ಉತ್ತಮವಾದ ಕಬ್ಬಿನ ಬೆಳೆಯನ್ನು ಬೆಳೆದಿದ್ದು, ರೈತರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಪ್ರತಿ ಟನ್‌ಗೆ 4500 ರೂ. ನಿಗದಿಗೊಳಿಸಬೇಕೆಂದು ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ರೈತ ಸಂಘದ ತಾಲೂಕು ಅಧ್ಯಕ್ಷ ಬಿ.ಸೀಹಳ್ಳಿ ರವಿ ಆಗ್ರಹಿಸಿದರು.

ಪಟ್ಟಣದ ಅತಿಥಿ ಗೃಹದಲ್ಲಿ ಮಾತನಾಡಿದ ಅವರು ಬಣ್ಣಾರಿ ಅಮ್ಮನ ಸಕ್ಕರೆ ಕಾರ್ಖಾನೆಗೆ ಬಹುತೇಕ ಮಂದಿ ಕಬ್ಬನ್ನು ಪೂರೈಕೆ ಮಾಡುತ್ತಿರುವ ಹಿನ್ನೆಲೆಯಲ್ಲಿ ಕೂಡಲೇ ಕಾರ್ಖಾನೆಯ ಮಾಲೀಕರು ರೈತ ಸಂಘದ ಸಭೆಯನ್ನು ಕರೆದು ರೈತರಿಗೆ ಅನುಕೂಲ ಮಾಡಿಕೊಡುವ ನಿಟ್ಟಿನಲ್ಲಿ ಪ್ರತಿ ಟನ್ ಕಬ್ಬಿಗೆ 4500 ನಿಗದಿ ಮಾಡಬೇಕೆಂದು ಅವರು ಆಗ್ರಹಿಸಿದರು. ಉತ್ಪನ್ನದ ಲಾಭಾಂಶವನ್ನು ಕೂಡಲೇ ನೀಡಲು ಕ್ರಮ ಕೈಗೊಳ್ಳಬೇಕೆಂದು ಅವರು ಅಗ್ರಹಿಸಿದರು.

ಕರ್ನಾಟಕದ ರಮೇಶ್ ಬೂದಿಹಾಳಗೆ ಕಂಚು

ಚೆನ್ನೈ, ಆ.10– ಕರ್ನಾಟಕದ ರಮೇಶ್ ಬೂದಿಹಾಳ ಅವರು ಇಲ್ಲಿ ನಡೆಯುತ್ತಿರುವ ಏಷ್ಯನ್ ಸರ್ಫಿಂಗ್ ಚಾಂಪಿಯನ್‌ಷಿಪ್‌ನ ಪುರುಷರ ವಿಭಾಗದಲ್ಲಿ ಕಂಚಿನ ಪದಕ ಗೆದ್ದಿದ್ದಾರೆ. ಈ ಮೂಲಕ ಏಷ್ಯನ್ ಸರ್ಫಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಪದಕ ಗೆದ್ದ ಭಾರತ ಮೊದಲಿಗ ಹಾಗೂ ಪದಕ ಸುತ್ತನ್ನು ತಲುಪಿದ ಭಾರತದ ಮೊದಲ ಸರ್ಫರ್ ಎಂಬ ಹೆಗ್ಗಳಿಕೆಗೂ ಅವರು ಪಾತ್ರವಾದರು. ರಮೇಶ್ ಅವರು 12.60 ಅಂಕಗಳಿಂದ ಕಂಚಿನ ಪದಕಕ್ಕೆ ಮುತ್ತಿಕ್ಕಿದ್ದಾರೆ.

ಫುಟ್‌ಪಾತ್ ಅತಿಕ್ರಮಣ...ಗುಂಡಿಬಿದ್ದ ರಸ್ತೆಗಳು... ಜನರ ಪ್ರಾಣದ ಜೊತೆ ಪಾಲಿಕೆ ಚೆಲ್ಲಾಟ...

ಎಂಜಿಪಿ ಸಭೆಯಲ್ಲಿ ಬಿಸಿ ಬಿಸಿ ಚರ್ಚೆ

ಮೈಸೂರು, ಆ.10(ಎಸ್‌ಪಿಎನ್)– ಮೈಸೂರಿನ ಪ್ರಮುಖ ರಸ್ತೆ ಮತ್ತು ವೃತ್ತದಲ್ಲಿ ಫುಟ್‌ಪಾತ್ ಅತಿಕ್ರಮಣ, ರಸ್ತೆಯಲ್ಲಿ ಆಳುದ್ದ ಬಿದ್ದಿರುವ ಗುಂಡಿಗಳಿದ್ದಾಗಿ ವಾಹನ ಸವಾರರು, ಪಾದಚಾರಿಗಳು ಹಾಗೂ ವೃದ್ಧರು ಓಡಾಡುವುದೇ ಕಷ್ಟಕರವಾಗಿದ್ದು, ಮೈಸೂರು ನಗರ ಪಾಲಿಕೆ ಜನರ ಪ್ರಾಣದ ಜೊತೆ ಚೆಲ್ಲಾಟವಾಡುತ್ತಿದೆ ಎಂದು ಮೈಸೂರು ಗ್ರಾಹಕರ ಪರಿಷತ್ ಸಭೆಯಲ್ಲಿ ಬಿಸಿಬಿಸಿ ಚರ್ಚೆ ನಡೆಯಿತು.

ಮೈಸೂರು ಯಾದವಗಿರಿ ವಿವೇಕಾನಂದ ರಸ್ತೆಯ ಮೈಸೂರು ಗ್ರಾಹಕರ ಪರಿಷತ್(ಮೈಗ್ರಾಪ) ಕಚೇರಿಯಲ್ಲಿ 'ಮೈಸೂರಿನ ರಸ್ತೆ ಮತ್ತು ಫುಟ್‌ಪಾತ್ ಅವ್ಯವಸ್ಥೆ ಕುರಿತು' ಮೈಸೂರು ನಗರ ಪಾಲಿಕೆ ಇಂಜಿನಿಯರ್ ವಿಭಾಗದ ಎಕ್ಸಿಕ್ಯೂಟಿವ್ ಎಂಜಿನಿಯರ್ ಶ್ರೀನಿವಾಸ ಅವರ ಸಮ್ಮುಖದಲ್ಲಿ ಬಿಸಿಬಿಸಿ ಚರ್ಚೆ ನಡೆಯಿತು.

ಮೈಸೂರು ಕೆಆರ್‌ಎಸ್ ರಸ್ತೆಯ ರಾಮಕೃಷ್ಣ ಪರಹಂಸ ರಸ್ತೆಯ ಎರಡೂ ಬದಿ ಫುಟ್‌ಪಾತ್ ಅಭಿವೃದ್ಧಿಗೆ ಈ ಹಿಂದೆ ಇಂಟರ್‌ಲಾಕ್ ಟೈಲ್ಸ್ ಅಳವಡಿಕೆಗೆ ಟೆಂಡರ್ ಕರೆದು, ಕಾಮಗಾರಿ ಆರಂಭಿಸಲಾಗಿತ್ತು. ಆ ಗುತ್ತಿಗೆದಾರರ ಟೈಲ್ಸ್ ಅಳವಡಿಸದೇ ಅನುದಾನ ಪಡೆದಿರಬಹುದು ಎಂದು ಮೈಗ್ರಾಪ ಸಂಸ್ಥಾಪಕ ಕಾರ್ಯಾಧ್ಯಕ್ಷ ಬಾಮಿ ವಿ.ಶೆಣೈ ನೇತೃತ್ವದಲ್ಲಿ ಸದಸ್ಯರು ಆರೋಪಿಸಿದರು. ಈ ಲೋಪದ ಬಗ್ಗೆ ಇಂಜಿನಿಯರ್ ಶ್ರೀನಿವಾಸ್ ಅವರು, ಪರಿಶೀಲಿಸುವುದಾಗಿ ಸಭೆಗೆ ಭರವಸೆ ನೀಡಿದರು.

ಮೈಸೂರಿನಲ್ಲಿ ಮಳೆಗಾಲ ಆರಂಭವಾಗಿ ಮೂರು ತಿಂಗಳು ಕಳೆದರೂ ರಸ್ತೆಯಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚಲು ಪಾಲಿಕೆ ಮೀನಾಮೇಷ ಎಣಿಸುತ್ತಿದೆ ಎಂದು ಮೈಗ್ರಾಪ ಸದಸ್ಯರ ಆಕ್ಷೇಪಕ್ಕೆ ಉತ್ತರಿಸಿದ ಇಂಜಿನಿಯರ್ ಶ್ರೀನಿವಾಸ್, ರಸ್ತೆಯಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚಲು ಪಾಲಿಕೆ 2.5 ಕೋಟಿ ರೂ., ಅನುದಾನ ಮೀಸಲಿಡಲಾಗಿದೆ. ಗುಂಡಿಗಳನ್ನು ಮುಚ್ಚಲು 2024ರ ಡಿಸೆಂಬರ್ ತಿಂಗಳಲ್ಲೇ ಟೆಂಡರ್ ಕರೆಯಲಾಗಿತ್ತು ಆದರೆ, ಈ ಟೆಂಡರ್‌ಗೆ ಯಾವ ಗುತ್ತಿಗೆದಾರರು ಸಹ ಭಾಗವಹಿಸಲಿಲ್ಲ. ಇದಕ್ಕೆ ಕಾರಣ ಹುಡುಕಿದಾಗ, ಸಣ್ಣ ಮೊತ್ತದ ಟೆಂಡರ್ ಭಾಗವಹಿಸಿ, ಕಾಮಗಾರಿ ಆರಂಭಿಸಿದರೆ, ಬಿಲ್ ಪಾವತಿಗೆ 2 ಅಥವಾ 3 ವರ್ಷ ತಡವಾಗುತ್ತದೆ. ಇದನ್ನು ಅರಿತಿರುವ ಸ್ಥಳೀಯ ಗುತ್ತಿಗೆದಾರರು ಭಾಗವಹಿಸುತ್ತಿಲ್ಲ. ಜೊತೆಗೆ ಟೆಂಡರ್ ಮೊತ್ತ ಕಡಿಮೆ ಇಟ್ಟಿರುವುದರಿಂದ ಗುಂಡಿ ಮುಚ್ಚುವ ಕಾಮಗಾರಿಗೆ ಗುತ್ತಿಗೆದಾರರು ಈ ಟೆಂಡರ್ ವಹಿಸಿಕೊಳ್ಳಲು ಮುಂದೆ ಬರುತ್ತಿಲ್ಲ. ಹಾಗಾಗಿ ಮೈಸೂರಿನಲ್ಲಿ ಗುಂಡಿ ಮುಚ್ಚುವ ಕಾಮಗಾರಿ ವಿಳಂಬವಾಗುತ್ತಿದೆ ಎಂದು ಸತ್ಯಾಂಶ ಸಭೆಗೆ ತೆರೆದಿಟ್ಟರು.

ವೈಟ್ ಟ್ಯಾಪಿಂಗ್ ಕಾಮಗಾರಿ ಶೀಘ್ರವೇ ಆರಂಭ: ಮೈಸೂರಿನ ರಸ್ತೆಗಳಲ್ಲಿ ಗುಂಡಿ ಬೀಳುವುದನ್ನು ಶಾಶ್ವತವಾಗಿ ತಡೆಗಟ್ಟಲು ವೈಟ್‌ಟ್ಯಾಪಿಂಗ್ ಕಾಮಗಾರಿಯನ್ನು 250 ಕೋಟಿ ರೂ. ವೆಚ್ಚದಲ್ಲಿ ಆರಂಭಿಸಲು ಪಿಡಬ್ಲ್ಯೂಡಿ ಇಲಾಖೆ ತೀರ್ಮಾನಿಸಲಾಗಿದೆ. ಇದಕ್ಕೆ ಸ್ವಲ್ಪ ಕಾಲಾವಕಾಶ ಹಿಡಿಯುತ್ತದೆ. ಆದರೆ, ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚುವಂತೆ ಸಾರ್ವಜನಿಕರಿಂದ ತೀವ್ರ ಒತ್ತಡ ಬರುತ್ತಿದೆ. ಎಲ್ಲಾ ಸಾಧಕ–ಬಾಧಕಗಳನ್ನು ಚರ್ಚಿಸಿ, ಪಾಲಿಕೆ ಆಯುಕ್ತರು ಒಮ್ಮತ ತೀರ್ಮಾನ ಸದ್ಯದಲ್ಲೇ ಪ್ರಕಟಿಸಲಿದ್ದಾರೆ ಎಂದು ಸದಸ್ಯ ಕೆ.ವಿ.ಬಾನು ಪ್ರಶಾಂತ್, ಶ್ರೀನಿವಾಸ್, ವಸಂತ್ ಕುಮಾರ್ ಮೈಸೂರು ಮಠ್ ಅವರ ಪ್ರಶ್ನೆಗೆ ಉತ್ತರಿಸಿದರು.

ಕೆ.ಆರ್.ವೃತ್ತ, ನ್ಯೂ ಸಯ್ಯಾಜಿರಾವ್ ರಸ್ತೆ, ವಿವೇಕಾನಂದ ನಗರ, ವಿಶ್ವಮಾನವ ರಸ್ತೆಯ ಶ್ರೀ ಶಿವಕುಮಾರಸ್ವಾಮಿ ವೃತ್ತ, ಮೈಸೂರು ದಿಗಂತ ವೃತ್ತ, ಅಗ್ರಹಾರದ ನೂರೊಂದು ಗಣಪತಿ ದೇವಸ್ಥಾನದಿಂದ ಎಂ.ಎ.ಶ್ರೀನಿವಾಸನ್ ವೃತ್ತ ಸೇರಿದಂತೆ ನಗರದ ಇತರೆಡೆ ರಸ್ತೆಬದಿ ವ್ಯಾಪಾರಿಗಳು ಫುಟ್‌ಪಾತ್ ಬಿಟ್ಟು ರಸ್ತೆಗಿಳಿದು ವ್ಯಾಪಾರ ಮಾಡುತ್ತಿದ್ದಾರೆ. ಇದರಿಂದ ವಾಹನ ಸವಾರರು, ಪಾದಚಾರಿಗಳು ಮತ್ತು ವೃದ್ಧರ ಓಡಾಟಕ್ಕೆ ತೀವ್ರ ತೊಂದರೆಯಾಗುತ್ತಿದೆ. ಇದಕ್ಕೆ ಕಡಿವಾಣ ಹಾಕಬೇಕು ಎಂಬ ಒತ್ತಡ ಸಾರ್ವಜನಿಕರಿಂದ ಕೇಳಿ ಬರುತ್ತಿದೆ. ಅಲ್ಲದೆ, ಇತ್ತೀಚೆಗೆ ವಿವೇಕಾನಂದ ನಗರದಲ್ಲಿ ರಸ್ತೆಬದಿ ವ್ಯಾಪಾರಿಗಳು ರಸ್ತೆ ಅತಿಕ್ರಮಣ ಮಾಡಿ, ವ್ಯಾಪಾರ ಮಾಡುತ್ತಿದ್ದರಿಂದ ಈ ಮಾರ್ಗದಲ್ಲಿ ಬಂದ ವಾಹನರೊಬ್ಬರು ಕೆಎಸ್‌ಆರ್‌ಟಿಸಿ ಬಸ್ ಕೆಳಗೆ ಸಿಲುಕಿ ಪ್ರಾಣಬಿಟ್ಟಿದ್ದ ಘಟನೆ ಕುರಿತು ಚರ್ಚಿಸಿದರು.

ಫುಟ್‌ಪಾತ್ ತೆರವು ಕಾರ್ಯಾಚರಣೆ ಸುಳಿವು: ಹೀಗಾಗಿ ಫುಟ್‌ಪಾತ್ ಅತಿಕ್ರಮಣದಿಂದ ಒಂದು ತಿಂಗಳಲ್ಲಿ ತಮ್ಮದಲ್ಲದ ತಪ್ಪಿಗೆ ಹತ್ತಾರು ವಾಹನ ಸವಾರರು ತಮ್ಮ ಪ್ರಾಣವನ್ನೇ ಬಿಡುವ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಇದರ ಬಗ್ಗೆ ಪಾಲಿಕೆ ಯಾವ ಕ್ರಮ ಕೈಗೊಂಡಿದೆ ಎಂದು ಸದಸ್ಯ ಡಿ.ವಿ.ದಯಾನಂದ ಸಾಗರ್ ಅವರ ಪ್ರಶ್ನೆಗೆ ಉತ್ತರಿಸಿದ ಇಂಜಿನಿಯರ್ ಶ್ರೀನಿವಾಸ್, ಅತೀ ಶೀಘ್ರದಲ್ಲೇ ಫುಟ್‌ಪಾತ್ ಅತಿಕ್ರಮಣ ಮಾಡುವ ವ್ಯಾಪಾರಿಗಳಿಗೆ ಬಿಸಿಮುಟ್ಟಿಸುವ ಕೆಲಸಕ್ಕೆ ಪಾಲಿಕೆ ವತಿಯಿಂದ ಬೃಹತ್ ಕಾರ್ಯಾಚರಣೆ ಆರಂಭಿಸುವ ಕುರಿತು ಪಾಲಿಕೆ ಆಯುಕ್ತರು, ಪೊಲೀಸ್ ಇಲಾಖೆ ಹಿರಿಯ ಅಧಿಕಾರಿಗಳೊಂದಿಗೆ ಮಾತುಕತೆ ನಡೆಯುತ್ತಿದೆ ಎಂದು ಚುಟುಕಾಗಿ ಉತ್ತರಿಸಿದರು.

ಸಭೆಯಲ್ಲಿ ಸದಸ್ಯರಾದ ಎಸ್.ಆರ್.ದಿನೇಶ್, ಶೋಭ ಸಾಂಬಶಿವನ್, ವಿ.ಎಸ್.ಸೀತಾರಾಮ್, ವಸಂತ್ ಕುಮಾರ್ ಮೈಸೂರ್‌ಮಠ್, ಲೀಲಾ ವೆಂಕಟೇಶ್, ಎಂ.ಜಾನಕಿ ರಾಮನ್, ಎ.ಎಸ್.ಸೋಮಶೇಖರ, ಕೆ.ಜಿ.ಶಶಿಧರ್, ವಿಶ್ವನಾಥ್, ಸಿ.ಎನ್.ಸುಧಾಕರ್, ಎಸ್.ಕೆ.ಶಂಕರ್ ಸೇರಿದಂತೆ ಇತರೆ ಸದಸ್ಯರಿದ್ದರು.



'ಮೈಸೂರಿನ ರಸ್ತೆ ಮತ್ತು ಫುಟ್‌ಪಾತ್ ಅವ್ಯವಸ್ಥೆ ಕುರಿತು' ಪಾಲಿಕೆ ಎಕ್ಸಿಕ್ಯೂಟಿವ್ ಎಂಜಿನಿಯರ್ ಶ್ರೀನಿವಾಸ ಅವರ ಸಮ್ಮುಖದಲ್ಲಿ ಸದಸ್ಯರು ಚರ್ಚೆ ನಡೆಸಿದರು.

ಮೈಗ್ರಾಪ ಸದಸ್ಯರ ಸಲಹೆಗಳು

- ಫುಟ್‌ಪಾತ್ ಅತಿಕ್ರಮಣ ಮಾಡಿ, ಪಾದಾಚಾರಿಗಳು, ವಾಹನ ಸವಾರರಿಗೆ ತೊಂದರೆ ನೀಡುವ ಬೀದಿಬದಿ ವ್ಯಾಪಾರಿಗಳನ್ನು ಪಾಲಿಕೆ–ಪೊಲೀಸ್ ಇಲಾಖೆ ಅಧಿಕಾರಿಗಳು ಜಂಟಿಯಾಗಿ ಗುರುತಿಸಬೇಕು.
- ಅಪಾಯಕಾರಿ ಸ್ಥಳ, ವೃತ್ತ ಹಾಗೂ ಜನಸಂದಣಿ ಇರುವ ಸ್ಥಳದಲ್ಲಿ ರಸ್ತೆ ಬದಿ ವ್ಯಾಪಾರವನ್ನು ಕಡ್ಡಾಯವಾಗಿ ನಿಷೇದಿಸಬೇಕು.
- ದೊಡ್ಡದೊಡ್ಡ ಗಾಡಿಗಳನ್ನು ಫುಟ್‌ಪಾತ್ ನಲ್ಲಿ, ರಸ್ತೆ ತಿರುವು, ವೃತ್ತಗಳಲ್ಲಿ ಶಾಶ್ವತವಾಗಿ ನಿಲ್ಲಿಸಿಕೊಂಡು ವ್ಯಾಪಾರ ಮಾಡುವ ಪದ್ಧತಿಗೆ ಕೋಕ್ ನೀಡಬೇಕು.
- ವಿವಿಧ ರೀತಿಯ ಹೋಲ್‌ಸೇಲ್ ಅಂಗಡಿ ಮಾಲೀಕರು ಸರ್ಕಾರಕ್ಕೆ ತೆರಿಗೆ ಕಟ್ಟುವುದನ್ನು ತಪ್ಪಿಸಿಕೊಳ್ಳಲು ಫುಟ್‌ಪಾತ್ ವ್ಯಾಪಾರಕ್ಕೆ ಪ್ರೋತ್ಸಾಹಿಸುತ್ತಿದ್ದಾರೆಯೇ ಎಂಬುದನ್ನು ಪತ್ತೆಹಚ್ಚಬೇಕು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಹಾವತಾರ ನರಸಿಂಹ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಜೂನಿಯರ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಧಡಕ್–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ	(ಮೊ:9986022634)
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಎಕ್ಕ (ಕ)	4 ಪ್ರದರ್ಶನಗಳು
ರಾಜಕಮಲ್	
ತಲೈವನ್ ತಲೈವಿ (ತ)	4 ಪ್ರದರ್ಶನಗಳು
ಸಂಗಂ	
ಸು ಫ್ರಮ್ ಸೋ (ಕ)	4 ಪ್ರದರ್ಶನಗಳು
ಲಿಡೋ	
ಕಿಂಗ್‌ಡಮ್ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ರಾಜದ್ರೋಹಿ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ ಬಂಧುಮಿತ್ರ (ಮ): ರಾ.10ಕ್ಕೆ.
ಸ್ಕ್ರೀನ್ 4	ಕುಬೇರಾ (ತೆ): ಬೆ10.30ಕ್ಕೆ, ಸಂ.6.25ಕ್ಕೆ, ರಾ.10.15ಕ್ಕೆ, ಕುಬೇರಾ (ತ): ಮ.2.20ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆ ಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಹಿನಕಲ್‌ನಲ್ಲಿ ಅದ್ದೂರಿ ಕೆಂಪೇಗೌಡರ ಜಯಂತಿ




ಮೈಸೂರು, ಆ.10(ಎಂಕೆ)– ಮೈಸೂರಿನ ಹಿನಕಲ್‌ನಲ್ಲಿ ಹಿನಕಲ್ ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ನಾಡಪ್ರಭು ಕೆಂಪೇಗೌಡರ 516ನೇ ಜಯಂತೋತ್ಸವವನ್ನು ಭಾನುವಾರ ಅದ್ದೂರಿಯಾಗಿ ಆಚರಿಸಲಾಯಿತು.

ಹಿನಕಲ್‌ನ ಗಣಪತಿ ದೇವಸ್ಥಾನದ ಆವರಣದಲ್ಲಿ ಬೆಳ್ಳಿ ರಥದಲ್ಲಿ ಪ್ರತಿಷ್ಠಾಪಿಸಲಾಗಿದ್ದ ನಾಡಪ್ರಭು ಕೆಂಪೇಗೌಡರ ಪ್ರತಿಮೆಗೆ ಪುಷ್ಪಾರ್ಚನೆ ನೆರವೇರಿಸುವ ಮೂಲಕ ಆದಿಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡ ಮೆರವಣಿಗೆಗೆ ಚಾಲನೆ ನೀಡಿದರು.

ಸಾಂಸ್ಕೃತಿಕ ಕಲಾತಂಡಗಳೊಂದಿಗೆ ಗಣಪತಿ ದೇವಸ್ಥಾನದಿಂದ ಆರಂಭವಾದ ಅದ್ದೂರಿ ಮೆರವಣಿಗೆ ಹಿನಕಲ್ ಫ್ಲೇ ಓವರ್‌ವರೆಗೆ ಸಾಗಿ, ಪುನಃ ಗಣಪತಿ ದೇವಸ್ಥಾನಕ್ಕೆ ಬಂದು ಸಂಪನ್ನಗೊಂಡಿತು. ಬಳಿಕ ಪ್ರಸಾದ ವಿನಿಯೋಗ ಮಾಡಲಾಯಿತು.

ಕರ್ನಾಟಕ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕರಾದ ಗಂಗಾಧರ್, ಬಿಜೆಪಿ ಮುಖಂಡ ಕವೀಶ್ ಗೌಡ, ನಗರಪಾಲಿಕೆ ಮಾಜಿ ಸದಸ್ಯರಾದ ಕೆ.ವಿ.ಶ್ರೀಧರ್, ಪ್ರಶಾಂತ್ ಗೌಡ, ಜಿಲ್ಲಾ ಒಕ್ಕಲಿಗರ ಸಂಘದ ಅಧ್ಯಕ್ಷ ಮರಿಸ್ವಾಮಿ, ಹಿನಕಲ್ ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘದ ಹಿನಕಲ್ ನಾಗರಾಜು, ಗೌರಾವಾಧ್ಯಕ್ಷ ಹೆಚ್.ಡಿ.ಪಾರ್ಥ, ಉಪಾಧ್ಯಕ್ಷ ಜನಾರ್ದನ್, ಜಂಟಿ ಕಾರ್ಯದರ್ಶಿ ಜನಾರ್ದನ್, ಕಾರ್ಯದರ್ಶಿ ರಾಜ್‌ಕುಮಾರ್, ಖಜಾಂಚಿ ವೆಂಕಟೇಶ್, ನಿರ್ದೇಶಕರಾದ ವಾಸು ಗೌಡ, ಸೋಮಶೇಖರ್, ಗಿರೀಶ್ ಮತ್ತಿತರರಿದ್ದರು.

ಪ್ರೊ.ಸಿ.ನಾಗಣ್ಣ ಅವರಿಗೆ ಡಾ. ಮಳಲಿ ವಸಂತಕುಮಾರ್ ದತ್ತಿ ಪ್ರಶಸ್ತಿ ಪ್ರದಾನ



ಹಿರಿಯ ಸಾಹಿತಿ ಪ್ರೊ.ಸಿ.ನಾಗಣ್ಣ ಅವರಿಗೆ ದಿವಂಗತ ಡಾ.ಮಳಲಿ ವಸಂತಕುಮಾರ್ ದತ್ತಿ ಪ್ರಶಸ್ತಿ ಪ್ರದಾನ ಮಾಡಲಾಯಿತು

ಮೈಸೂರು, ಆ.10(ಎಂಕೆ)– ಮೈಸೂರಿನ ಭಾರತೀಯ ವಿದ್ಯಾಭವನದ ಅಧ್ಯಕ್ಷರೂ ಆದ ಹಿರಿಯ ಸಾಹಿತಿ ಪ್ರೊ.ಸಿ.ನಾಗಣ್ಣ ಅವರಿಗೆ ದಿವಂಗತ ಡಾ.ಮಳಲಿ ವಸಂತಕುಮಾರ್ ದತ್ತಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರು ಜಿಲ್ಲಾ ಕಸಾಪ ಸಭಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಪ್ರಶಸ್ತಿ ಪ್ರದಾನ ಮಾಡಿದರು.

ಬಳಿಕ ಮಾತನಾಡಿದ ಅವರು, ಪ್ರೊ.ಸಿ.ನಾಗಣ್ಣ ಅವರ ಸಾಧನೆ, ಸಂಶೋಧನೆ ಸಾಕಷ್ಟಿದೆ. ಯಾವುದೇ ವಿಷಯ ಕೊಟ್ಟರು ಅದರಲ್ಲಿ ಆಳವಾದ ಅಧ್ಯಯನ ಮಾಡುತ್ತಾರೆ. ಹಾಗೆಯೇ ಡಾ.ಮಳಲಿ ವಸಂತಕುಮಾರ್, ಶ್ರೇಷ್ಠ ಮತ್ತು ಜೇಷ್ಠ ವ್ಯಕ್ತಿಯಾಗಿದ್ದರು ಎಂದು ಸ್ಮರಿಸಿದರು.

ಡಾ.ಮಳಲಿ ವಸಂತಕುಮಾರ್ ದತ್ತಿ ಪ್ರಶಸ್ತಿಗೆ ನಾಗಣ್ಣನವರು ಅರ್ಹರಾಗಿದ್ದಾರೆ. ಹುಟ್ಟು ಆಕಸ್ಮಿಕ, ಸಾವು ಖಚಿತ. ಆದರೆ ನಾವು ಸಾಧಕರಾಗಬೇಕು. ಈ ನಿಟ್ಟಿನಲ್ಲಿ ಡಾ.ಮಳಲಿ ಅವರು ಸಾಧಕರಾಗಿದ್ದಾರೆ. ದೇಜಗೌ ಅವರ ಪರಮಾತ್ಮರಾಗಿದ್ದ ಮಳಲಿ ಅವರು, ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ ಎಂದು ಹೇಳಿದರು.

ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ವಿಮರ್ಶಕ ಪ್ರೊ.ಕೆ.ತಿಮ್ಮಯ್ಯ ಅಭಿನಂದನಾ ನುಡಿಗಳನ್ನಾಡಿದರು. ಶ್ರೀಮತಿ ಶಾರದ ಮಳಲಿ ವಸಂತಕುಮಾರ್, ಜಿಲ್ಲಾ ಕಸಾಪ ಕಾರ್ಯದರ್ಶಿಗಳಾದ ಮ.ನ.ಲತಾ ಮೋಹನ್, ಚೀಲೂರು ಚಂದ್ರಶೇಖರ್, ಜಂಟಿ ಕಾರ್ಯದರ್ಶಿ ಕೆಂಪಣ್ಣ ಖಜಾಂಚಿ ಜಿ.ಪ್ರಕಾಶ್, ಸಂಘಟನಾ ಕಾರ್ಯದರ್ಶಿ ಮೈನಾ.ಲೋಕೇಶ್ ಮತ್ತಿತರರಿದ್ದರು.

ಮತ್ತಿಗೋಡು ಶಿಬಿರದಲ್ಲಿ ದಸರಾ ಗಜಪಡೆಯ ಹೊಸ ಅತಿಥಿ 'ಶ್ರೀಕಂಠ'ನನ್ನು ವೀಕ್ಷಿಸಿದ ರಾಜವಂಶಸ್ಥರು

● ಆನೆ ಚಹರೆ ನೋಡಿ ಖುಷಿಪಟ್ಟ ಪ್ರಮೋದಾದೇವಿ ಒಡೆಯರ್ ● ಶ್ರೀಕಂಠನಿಗೆ ಒಲಿಯುವುದೇ ಪಟ್ಟದ ಆನೆ ಸ್ಥಾನ

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು,ಆ.10 – ನಾಡಹಬ್ಬ ದಸರಾ ಮಹೋತ್ಸವದಲ್ಲಿ ಇದೇ ಮೊದಲ ಬಾರಿಗೆ ಪಾಲ್ಗೊಳ್ಳುತ್ತಿರುವ ಶ್ರೀಕಂಠ ಆನೆಯನ್ನು ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಭಾನುವಾರ ಮತ್ತಿಗೋಡು ಕ್ಯಾಂಪ್‌ನಲ್ಲಿ ವೀಕ್ಷಿಸಿದ್ದು, ಹೊಸ ಆನೆಗೆ ಪಟ್ಟದ ಆನೆ ಅಥವಾ ಪಟ್ಟದ ನಿಶಾನೆ ಸ್ಥಾನ ಒಲಿಯುವುದೇ ಎಂಬ ಕುತೂಹಲ ಮನೆ ಮಾಡಿದೆ.

ಸೆ.22ರಿಂದ ಆರಂಭವಾಗುವ ದಸರಾ ಮಹೋತ್ಸವದಲ್ಲಿ ಈ ಬಾರಿ ಎರಡು ತಂಡಗಳಲ್ಲಿ 10 ಗಂಡಾನೆ ಹಾಗೂ 4 ಹೆಣ್ಣಾನೆ ಸೇರಿದಂತೆ 14 ಆನೆಗಳು ಪಾಲ್ಗೊಳ್ಳುತ್ತಿದ್ದು, ಅವುಗಳಲ್ಲಿ ಎರಡು ಹೆಣ್ಣಾನೆ ಸೇರಿದಂತೆ ಮೂರು ಹೊಸ ಆನೆಗಳು ಸೇರಿವೆ. ಎರಡನೇ ತಂಡದಲ್ಲಿ ಮಾಸಾಂತ್ಯಕ್ಕೆ ಮೂರು ಹೊಸ ಆನೆ ಸೇರಿದಂತೆ 5 ಆನೆಗಳು ಅರಮನೆಗೆ ಆಗಮಿಸಲಿವೆ. ದಸರಾ ಮಹೋತ್ಸವದಲ್ಲಿ ಶ್ರೀಕಂಠ(56) ಆನೆ ಪಾಲ್ಗೊಳ್ಳುತ್ತಿರುವುದರಿಂದ ಇಂದು ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ವೀಕ್ಷಿಸಿದರು.

ಮತ್ತಿಗೋಡು ಕ್ಯಾಂಪ್‌ನಲ್ಲಿ ಪರಿಶೀಲನೆ: ಭಾನುವಾರ ಸಂಜೆ 4 ಗಂಟೆಗೆ ಮತ್ತಿಗೋಡು ಆನೆ ಕ್ಯಾಂಪ್‌ಗೆ ಆಗಮಿಸಿದ ಪ್ರಮೋದಾದೇವಿ ಒಡೆಯರ್ ಅವರು ಶ್ರೀಕಂಠ ಆನೆಯನ್ನು ವೀಕ್ಷಿಸಿದರು. ಮಾವುತ ಜೆ.ಆರ್.ಕೃಷ್ಣ ಕವಾಡಿ ಕೆ.ಓಂಕಾರ ಅವರು ಶ್ರೀಕಂಠ ಆನೆಯನ್ನು ಪ್ರಮೋದಾದೇವಿ ಒಡೆಯರ್ ಅವರ ಬಳಿ ಕರೆತಂದು ತೋರಿಸಿದರು. ಈ ವೇಳೆ ಪ್ರಮೋದಾ ದೇವಿ ಒಡೆಯರ್ ಅವರು ಶ್ರೀಕಂಠ ಆನೆ ವಾದ್ಯ ಶಬ್ದಕ್ಕೆ, ಜನರ ಕೂಗಾಟಕ್ಕೆ ಹೆದರುತ್ತದಾ ಎಂದು ಪ್ರಶ್ನಿಸಿದರು. ಇದಕ್ಕೆ ಮಾವುತ, ಕಾವಾಡಿಗಳು ಯಾವ ಶಬ್ದಕ್ಕೂ ಹೆದರುವುದಿಲ್ಲ ಎಂದು ತಿಳಿಸಿದರು.

ಬಳಿಕ ಶ್ರೀಕಂಠ ಆನೆಯ ಮುಖದ ಲಕ್ಷಣ ಹಾಗೂ ದೇಹದ ಆಕಾರದ ಬಗ್ಗೆಯೂ ಮೆಚ್ಚುಗೆ ವ್ಯಕ್ತಪಡಿಸಿದ ಪ್ರಮೋದಾದೇವಿ ಅವರು, ಆನೆಯನ್ನು ಎಲ್ಲಿ ಸೆರೆ ಹಿಡಿಯಲಾಗಿದೆ ಎಂದು ಮಾಹಿತಿ ಪಡೆದರು. ನಂತರ ಶ್ರೀಕಂಠನಿಗೆ ಬೆಲ್ಲ, ಹಣ್ಣು ತಿನ್ನಿಸಿದರು. ಸುಮಾರು 20 ನಿಮಿಷಕ್ಕೂ ಹೆಚ್ಚು ಕಾಲ ಮತ್ತಿಗೋಡು ಕ್ಯಾಂಪ್‌ನಲ್ಲೇ ಇದ್ದರು.

2014ರ ಫೆ.18ರಂದು ಹಾಸನ ವಿಭಾಗದ ಶನಿವಾರ ಸಂತೆ ವಲಯದ ಮೀಸಲು ಅರಣ್ಯ ಪ್ರದೇಶದಲ್ಲಿ ಸೆರೆ ಹಿಡಿದ ಆನೆಗೆ ರಾಜವಂಶಸ್ಥ ಶ್ರೀಕಂಠದತ್ತ ನರಸಿಂಹ ರಾಜ ಒಡೆಯರ್ ಸ್ಮರಣಾರ್ಥ ಶ್ರೀಕಂಠ (56) ಎಂದು ನಾಮಕರಣ ಮಾಡಲಾಗಿದ್ದು, ಮತ್ತಿಗೋಡು ಶಿಬಿರದಲ್ಲಿ ಪಾಲನೆ ಮಾಡಲಾಗುತ್ತಿದೆ. ಈಗಾಗಲೇ ಹುಲಿ, ಕಾಡಾನೆ ಸೆರೆ ಕಾರ್ಯಾಚರಣೆಯಲ್ಲಿ ಧೈರ್ಯದಿಂದ ಪಾಲ್ಗೊಂಡಿರುವ ಅನುಭವ ಹೊಂದಿರುವ ಶ್ರೀಕಂಠ ಆನೆ ನೋಡಲು ಸಧೃಡವಾಗಿದೆ. 2.79 ಮೀಟರ್ ಎತ್ತರ, 3.71 ಮೀಟರ್ ಉದ್ದ, 4,650 ಕೆಜಿ ತೂಕ ಹೊಂದಿರುವ ಶ್ರೀಕಂಠ ಆನೆಗೆ ಮಾವುತರಾಗಿ ಓಂಕಾರ್ ಕೆ., ಜೆ.ಆರ್. ರಾಧಾಕೃಷ್ಣ ಪಾಲನೆ ಮಾಡುತ್ತಿದ್ದಾರೆ.



ಮತ್ತಿಗೋಡು ಆನೆಕ್ಯಾಂಪ್‌ಗೆ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಅವರು ಭಾನುವಾರ ಸಂಜೆ ಭೇಟಿ ನೀಡಿ ದಸರಾ ಗಜಪಡೆಯ ಹೊಸ ಸದಸ್ಯ 'ಶ್ರೀಕಂಠ' ಆನೆಯನ್ನು ವೀಕ್ಷಿಸಿದರು.

ಶ್ರೀಕಂಠನಿಗೆ ಪಟ್ಟದ ಆನೆ ಅಥವಾ ನಿಶಾನೆ ಆನೆಯ ಪಟ್ಟ ಒಲಿಯುವುದೇ?

ಮತ್ತಿಗೋಡು ಕ್ಯಾಂಪ್‌ಗೆ ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಭೇಟಿ ನೀಡಿ ದಸರಾ ಗಜಪಡೆಗೆ ಆಯ್ಕೆಯಾಗಿರುವ ಹೊಸ ಆನೆ ಶ್ರೀಕಂಠನನ್ನೇ ವೀಕ್ಷಿಸಿರುವುದು ಕುತೂಹಲ ಮೂಡಿಸಿದೆ. ರಾಜವಂಶಸ್ಥರ ಆನೆ ಕ್ಯಾಂಪ್ ಬೇಟಿಯಿಂದಾಗಿ ಈ ಬಾರಿ ನವರಾತ್ರಿ ವೇಳೆ ಅರಮನೆಯೊಳಗೆ ರಾಜವಂಶಸ್ಥರಾದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ನಡೆಸುವ ಖಾಸಗಿ ದರ್ಬಾರ್ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯದಲ್ಲಿ ಪಟ್ಟದ ಆನೆ, ಪಟ್ಟದ ಹಸು, ಪಟ್ಟದ ಕುದುರೆ ವಿವಿಧ ಶಾಸ್ತ್ರಕ್ಕೆ ಬಳಸುವ ಪದ್ಧತಿಯಿದ್ದು, ರಾಜವಂಶಸ್ಥ ದಿ.ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಸ್ಮರಣಾರ್ಥ ಶ್ರೀಕಂಠ ಎಂದು ಹೆಸರಿಟ್ಟಿರುವ ಹೊಸ ಆನೆಯನ್ನು ಅರಮನೆಯಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ಕೆ ಬಳಸಿಕೊಳ್ಳುವ ಭಾವನಾತ್ಮಕ ಉದ್ದೇಶವಿರುವುದರಿಂದ ಶ್ರೀಕಂಠ ಆನೆಯನ್ನು ಪರಿಶೀಲಿಸಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ. ಆನೆ ಸ್ವಭಾವ, ಮುಖ ಚಹರೆ, ಗುಣ ಲಕ್ಷಣ, ದೇಹದ ಆಕಾರ ಎಲ್ಲವೂ ರಾಜವಂಶಸ್ಥರಿಗೆ ಸಮಾದಾನ ತಂದಿತ್ತಿದೆ. ಈ ಕಾರಣದಿಂದ ಮೊದಲ ಬಾರಿಗೆ ಆಗಮಿಸುತ್ತಿರುವ ಶ್ರೀಕಂಠನಿಗೆ ಪಟ್ಟದ ಆನೆ, ಪಟ್ಟದ ನಿಶಾನೆ ಆನೆ ಸ್ಥಾನ ಒಲಿಯುವುದೇ ಎಂದು ಕಾದು ನೋಡಬೇಕಾಗಿದೆ.

ಇಂಡಿಯಾ ಬಣದ ಸಂಸದರಿಗೆ ಇಂದು ಖರ್ಗೆ ಭೋಜನಕೂಟ



ನವದೆಹಲಿ,ಆ.10– ಸದ್ಯ ನಡೆಯುತ್ತಿರುವ ಸಂಸತ್ತಿನ ಮುಂಗಾರು ಅಧಿವೇಶನದಲ್ಲಿ ಬಿಹಾರದಲ್ಲಿ ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ ಮತ್ತು ಚುನಾವಣಾ ಅಕ್ರಮ ಆರೋಪದ ವಿರುದ್ಧ ವಿರೋಧ ಪಕ್ಷಗಳು ಸಂಘಟಿತ ಹೋರಾಟ ನಡೆಸುತ್ತಿರುವಂತೆಯೇ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸೋಮವಾರ ಇಂಡಿಯಾ ಬಣದ ಸಂಸದರಿಗೆ ಭೋಜನಕೂಟ ಆಯೋಜಿಸಿದ್ದಾರೆ.

ಚುನಾವಣೆ ವಂಚನೆ ವಿಷಯದ ಕುರಿತು ವಿರೋಧ ಪಕ್ಷದ ನಾಯಕರು ಮತ್ತು ಸಂಸದರು ಸೋಮವಾರ ಸಂಸತ್ತಿನಿಂದ ಚುನಾವಣಾ ಆಯೋಗದ ಕಚೇರಿಗೆ ಪ್ರತಿಭಟನಾ ಮೆರವಣಿಗೆಯನ್ನು ನಡೆಸಲಿದ್ದಾರೆ. ಅದೇ ದಿನ ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಖರ್ಗೆ ಅವರು ಚಾಣಕ್ಯಪುರಿಯಲ್ಲಿರುವ ಹೋಟೆಲ್ ತಾಜ್ ಪ್ಯಾಲೇಸ್‌ನಲ್ಲಿ ಇಂಡಿಯಾ ಬಣದ ಸಂಸದರಿಗೆ ಆತಿಥ್ಯ ನೀಡಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ನಿವಾಸದಲ್ಲಿ ಇತ್ತೀಚಿಗೆ ಡಿನ್ನರ್ ಪಾರ್ಟಿ ನಡೆದಿತ್ತು. ಅದರಲ್ಲಿ ಪಾಲ್ಗೊಂಡಿದ್ದ ಇಂಡಿಯಾ ಬಣದ ನಾಯಕರು ಬಿಹಾರದಲ್ಲಿ ಮತದಾರರ ಪಟ್ಟಿ ವಿಶೇಷ ತೀವ್ರ ಪರಿಷ್ಕರಣೆ ವಿರುದ್ಧ ಒಗ್ಗಟಿನ ಹೋರಾಟಕ್ಕೆ ಪಣ ತೊಟ್ಟಿದ್ದರು. ಇದಾದ ಕೆಲವೇ ದಿನಗಳಲ್ಲಿ ಇದೀಗ ಖರ್ಗೆ ಅವರು ಭೋಜನ ಕೂಟ ಆಯೋಜಿಸುತ್ತಿದ್ದಾರೆ.

ಧರ್ಮಸ್ಥಳ: ಕರ್ತವ್ಯಕ್ಕೆ ಅಡ್ಡಿ; ಆರು ಆರೋಪಿಗಳ ಬಂಧನ, ಜಾಮೀನಿನ ಮೇಲೆ ಬಿಡುಗಡೆ

ಧರ್ಮಸ್ಥಳ, ಆ.10– ಧರ್ಮಸ್ಥಳ ಗ್ರಾಮದ ಪಾಂಗಾಳ ರಸ್ತೆ ಬಳಿ ಯೂಟ್ಯೂಬರ್‌ಗಳ ಮೇಲೆ ಬುಧವಾರ ಹಲ್ಲೆ ನಡೆದ ಸಂದರ್ಭದಲ್ಲಿ ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ ಪ್ರಕರಣ ಸಂಬಂಧ ಆರು ಮಂದಿಯನ್ನು ಧರ್ಮಸ್ಥಳ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಧರ್ಮಸ್ಥಳದ ಪದ್ಮಪ್ರಸಾದ್ (32), ಸುಹಾಸ್ (22), ಶಶಿಧರ್(30), ಉಜಿರೆಯ ಕಲಂದರ್ ಪುತ್ತುಮೋನು (42), ಕಳೆಂಜದ ಚೇತನ್ (21), ಕಲ್ಮಂಜದ ಗುರುಪ್ರಸಾದ್ (19) ಬಂಧಿತರು. ಬಂಧಿತರು ಜಾಮೀನಿನ ಮೇಲೆ ಬಿಡುಗಡೆಗೊಂಡಿದ್ದಾರೆ.

ಧರ್ಮಸ್ಥಳ ಗ್ರಾಮದ ಪಾಂಗಾಳ ರಸ್ತೆ ಬಳಿ ಬುಧವಾರ ಸಂಜೆ (ಆ.6) ಯೂಟ್ಯೂಬರ್‌ಗಳ ಮೇಲೆ ಗುಂಪೊಂದು ಹಲ್ಲೆ ನಡೆಸಿ ಪರಾರಿಯಾಗಿತ್ತು. ಹಲ್ಲೆಗೊಳಗಾದ ಯೂಟ್ಯೂಬರ್‌ಗಳನ್ನು ಚಿಕಿತ್ಸೆ ಸಲುವಾಗಿ ಕಳುಹಿಸಿಕೊಟ್ಟಿದ್ದೆ. ಕೆಲ ಹೊತ್ತಿನಲ್ಲಿ ಪುರಂದರ ಗೌಡ, ವಿಠಲ ಗೌಡ, ತನುಷ್ ಶೆಟ್ಟಿ, ಅನಿಲ್, ಮನೋಜ್, ಪ್ರಮೋದ್ ಎಂಬುವರು ಅಕ್ರಮ ಕೂಟ ಕಟ್ಟಿಕೊಂಡು ಅಲ್ಲಿಗೆ ಬಂದಿದ್ದರು. ಬಳಿಕ ಧನಕೀರ್ತಿ ಆರಿಗ, ಅಭಿದೇವ್ ಆರಿಗ, ಪ್ರೀತಂ, ಹರ್ಷಿತ್ ಜೈನ್, ಚಂದನ್ ಕಾಮತ್, ನವೀನ ಕನ್ಯಾಡಿ, ಪ್ರಭಾಕರ, ತುಕಾರಾಮ ಗೌಡ, ರಾಜೇಂದ್ರ ದಾಸ್, ಕಿಶೋರ್, ದಿನೇಶ, ಅಮರ್, ನಿತಿನ್, ಸುರೇಂದ್ರ ಪ್ರಭು, ಮಲ್ಲಿಕ್ ಜೈನ್, ಹರ್ಷ, ಕಾರ್ತಿಕ್, ಪ್ರಕಾಶ್ ಅಲಿಯಾಸ್ ಸ್ನೇಕ್ ಪ್ರಕಾಶ್, ಕೃಷ್ಣ, ಸೋಮನಾಥ, ಶೀನಪ್ಪ ಸೇರಿದಂತೆ ಸುಮಾರು 50 ಮಂದಿ ಅಕ್ರಮ ಕೂಟ ಕಟ್ಟಿಕೊಂಡು ಸ್ಥಳಕ್ಕೆ ಬಂದಿದ್ದರು ಎಂದು ಧರ್ಮಸ್ಥಳ ಠಾಣೆಯ ಎಸ್.ಐ ಸಮರ್ಥ್ ಗಾಣಿಗೇರ ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಂಡಿದ್ದರು. ಈ ಸಂಬಂಧ ಒಟ್ಟು 27 ಮಂದಿ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು.

ಸ್ಥಳದಿಂದ ತೆರಳುವಂತೆ ಸೂಚಿಸಿದರೂ ಕಿವಿಗೊಡದ ಆರೋಪಿಗಳು ಹಲ್ಲೆ ಹಾಗೂ ಬಲಪ್ರಯೋಗದ ಮೂಲಕ ಕರ್ತವ್ಯ ನಿರ್ವಹಣೆಗೆ ತಡೆಯೊಡ್ಡಿದ್ದರು. ಅಲ್ಲಿದ್ದ ಎರಡೂ ಗುಂಪುಗಳು ಪರಸ್ಪರ ತಳ್ಳಾಟ ಮತ್ತು ಹಲ್ಲೆಯಲ್ಲಿ ತೊಡಗಿದ್ದವು. ಕರ್ನಾಟಕ ರಾಜ್ಯ ಮೀಸಲು ಪೊಲೀಸ್ ಪಡೆ (ಕೆಎಸ್‌ಆರ್‌ಪಿ) ಮತ್ತು ಠಾಣೆಯ ಸಿಬ್ಬಂದಿ ಸಹಾಯದಿಂದ ಗುಂಪುಗಳನ್ನು ಚದುರಿಸಿದ್ದೆವು. ಅದಕ್ಕೂ ಲೆಕ್ಕಿಸದೇ ಕೆಲವರು ಇನ್ನಷ್ಟು ಜನರನ್ನು ಕರೆಯಿಸಿ ಗಲಾಟೆ ಮಾಡಿದ್ದಾರೆ' ಎಂದು ದೂರಿನಲ್ಲಿ ಎಸ್.ಐ ಆರೋಪಿಸಿದ್ದರು.

ಡಿಕೆಶಿ ಸ್ವಾಗತಿಸಿದ ಗಣ್ಯರು



ಕೆಪಿಸಿಸಿ ಅಧ್ಯಕ್ಷರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಶನಿವಾರ ಮೈಸೂರಿನ ಕಾಂಗ್ರೆಸ್ ಭವನಕ್ಕೆ ಆಗಮಿಸಿದ ವೇಳೆ ನಗರ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷ ವಿಕ್ರಾಂತ್ ಪಿ.ದೇವೇಗೌಡ, ಮುಖಂಡರಾದ ಎಂ.ಶ್ರೀನಿವಾಸ ಕುಮಾರ್, ಈಶ್ವರ್ ಚಕ್ಕಡಿ, ಕಿರಣ್ ಬ್ರಾಡ್ವೆ ಮತ್ತಿತರರು ಸ್ವಾಗತಿಸಿದರು.

ಸ್ವಾತಂತ್ರ್ಯ ಹೋರಾಟಗಾರರ ಮರುಶೋಧನೆ ಅಗತ್ಯ

ಪೌರಕಾರ್ಮಿಕರೊಂದಿಗೆ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಪ್ರೊ.ಅರವಿಂದ ಮಾಲಗತ್ತಿ ಅಭಿಪ್ರಾಯ


ಮೈಸೂರಿನ ಸುಚಿತ್ರ ಆರ್ಟ್ ಗ್ಯಾಲರಿಯಲ್ಲಿ ಕನ್ನಡ ಸಾಹಿತ್ಯ ಕಲಾಕೂಟ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಸಂಯುಕ್ತಾಶ್ರಯದಲ್ಲಿ 78ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಪೌರಕಾರ್ಮಿಕರನ್ನು ಸನ್ಮಾನಿಸಲಾಯಿತು.

ಮೈಸೂರು, ಆ.10(ಎಂಟಿವೈ)– ಬ್ರಿಟಿಷರಿಂದ ದೇಶಕ್ಕೆ ಸ್ವಾತಂತ್ರ್ಯ ದೊರಕಿಸಲು ನಡೆಸಿದ ಹೋರಾಟದಲ್ಲಿ ಪಾಲ್ಗೊಂಡಿದ್ದವರ ಮರುಶೋಧನೆ ಅಗತ್ಯ ಎಂದು ಪ್ರೊ.ಅರವಿಂದ ಮಾಲಗತ್ತಿ ಅಭಿಪ್ರಾಯಪಟ್ಟಿದ್ದಾರೆ.

ನಗರದ ಕಲಾಮಂದಿರದ ಆವರಣದಲ್ಲಿ ಇರುವ ಸುಚಿತ್ರ ಆರ್ಟ್ ಗ್ಯಾಲರಿಯಲ್ಲಿ ಕನ್ನಡ ಸಾಹಿತ್ಯ ಕಲಾಕೂಟ, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಸಂಯುಕ್ತಾಶ್ರಯದಲ್ಲಿ 78ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ಭಾನುವಾರ ಏರ್ಪಡಿಸಿದ್ದ ಯು.ಜಿ.ಮೋಹನ ಕುಮಾರ್ ಆರಾಧ್ಯ ರಚಿಸಿರುವ ಸ್ವಾತಂತ್ರ್ಯ ಹೋರಾಟಗಾರರ ಚಿತ್ರಕಲಾ ಪ್ರದರ್ಶನ ಹಾಗೂ ಪೌರಕಾರ್ಮಿಕರೊಂದಿಗೆ ಸ್ವಾತಂತ್ರ್ಯೋತ್ಸವ ಆಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡುತ್ತಾ ಬಲಿದಾನವಾದ ಅನೇಕ ಮಹನೀಯರನ್ನು ಗುರುತಿಸಲಾಗಿದೆ. ಕನ್ನಡ ಸಂಸ್ಕೃತಿ ಇಲಾಖೆಯೂ ಮೂರು ಸಂಪುಟಗಳಲ್ಲಿ ಸ್ವಾತಂತ್ರ್ಯ ಹೋರಾಟಗಾರರ ಹೆಸರನ್ನು ಪ್ರಕಟಿಸಿದೆ. ಆದರೆ ಸಣ್ಣ–ಸಣ್ಣ ಹೋರಾಟಗಳಲ್ಲಿ ಭಾಗಿಯಾಗಿರುವಂತಹ ಜನರನ್ನು ಗುರುತಿಸಿ ಅವರ ಸಾಧನೆಗಳನ್ನು ಪ್ರಕಟಿಸಲು ಮರುಶೋಧನೆಯ ಅಗತ್ಯವಿದೆ. ದೊಡ್ಡ–ದೊಡ್ಡ ಹೋರಾಟಗಾರರು, ಮುಂಚೂಣಿ ನಾಯಕರು, ರಾಷ್ಟ್ರ ಮಟ್ಟದ ಮತ್ತು ರಾಜ್ಯ ಮಟ್ಟದ ನಾಯಕರ ಬಗ್ಗೆ ಇತಿಹಾಸದಲ್ಲಿ ಮಾಹಿತಿ ಸಿಗುತ್ತದೆ. ಎಲೆ ಮರೆಕಾಯಿಯಂತೆ ಹೋರಾಟ ಮಾಡಿದವರ ಬಗ್ಗೆ ಸಂಶೋಧನೆ ನಡೆಸಿ ಅವರ ಮಾಹಿತಿಯನ್ನು ನೀಡುವ ಅವಶ್ಯಕತೆ ಇದೆ ಎಂದು ಅಭಿಪ್ರಾಯಪಟ್ಟರು.

ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಎಷ್ಟೋ ಮಂದಿ ಟೆಲಿಫೋನ್ ತಂತಿ ಕತ್ತರಿಸಿದ್ದಾರೆ. ಅವರಿಗೆ ಅದು ಹೋರಾಟ ಎನ್ನುವುದು ಗೊತ್ತಿರುತ್ತಿರಲಿಲ್ಲ. ತಂತಿಯನ್ನು ಕತ್ತರಿಸಿ ತಂದಿದ್ದೇವೆ ಎಂದಷ್ಟೇ ಗೊತ್ತಿತ್ತು. ಆದರೆ ಅವರು ತಂತಿಯನ್ನು ಕತ್ತಿರಿಸಿದ್ದರಿಂದ ಪೊಲೀಸ್ ಪಡೆಯು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗಲು ಸಂದೇಶ ರವಾನೆಯಾಗುತ್ತಿರಲಿಲ್ಲ. ಇದೇ ಸಂದರ್ಭ ಬಳಸಿಕೊಂಡು ಉಗ್ರವಾದ ಹೋರಾಟಗಳು ನಡೆಯುತ್ತಿದ್ದವು ಎಂದು ತಿಳಿಸಿದರು.

ಪಾದಪೂಜೆಯಿಂದ ಲಾಭವಿಲ್ಲ: ಪೌರಕಾರ್ಮಿಕರನ್ನು ಕೂರಿಸಿಕೊಂಡು ಒಂದು ದಿನ ಅವರ ಪಾದ ತೊಳೆದು ಪೂಜೆ ಮಾಡುವುದಕ್ಕಿಂತ, ಅವರಿಗೆ ಅರ್ಹತೆಗೆ ತಕ್ಕಂತೆ ಸಂಬಳ ನೀಡಬೇಕು. ಪೌರಕಾರ್ಮಿಕರು ಮಾಡುವ ಕೆಲಸ ಬಹಳ ಶ್ರೇಷ್ಠವಾದ ಕೆಲಸ. ಅವರಿಗೆ ಕ್ಲಾಸ್–2 ಅಧಿಕಾರಿಯ ಸ್ಥಾನಮಾನವನ್ನು ನೀಡಿ, ಅದರಡಿಯಲ್ಲಿ ಸಂಬಳ, ಸೌಲಭ್ಯ ನೀಡಬೇಕು. ಅದನ್ನು ಬಿಟ್ಟು ಪಾದಪೂಜೆಯಿಂದ ಯಾವುದೇ ಪ್ರಯೋಜನವಿಲ್ಲ ಎಂದರು.

10 ಮಂದಿ ಪೌರಕಾರ್ಮಿಕರಿಗೆ ಸನ್ಮಾನ: ಕಾರ್ಯಕ್ರಮದ ಅಂಗವಾಗಿ ನಗರದಲ್ಲಿ ಸ್ವಚ್ಛತಾ ಕಾರ್ಯನಿರ್ವಹಿಸುತ್ತಿರುವ ಹತ್ತು ಮಂದಿ ಪೌರಕಾರ್ಮಿಕರನ್ನು ಸನ್ಮಾನಿಸಲಾಯಿತು. ಎಂಎಲ್‌ಸಿ ಡಾ.ಡಿ.ತಿಮ್ಮಯ್ಯ ಗೌರವ ಸಮರ್ಪಣೆ ಕಾರ್ಯಕ್ರಮ ನೆರವೇರಿಸಿಕೊಟ್ಟರು. ಬಳಿಕ ಕಲಾವಿದ ಆರಾಧ್ಯ ಅವರು ರಚಿಸಿರುವ ಸ್ವಾತಂತ್ರ್ಯ ಹೋರಾಟಗಾರರ ಸುಮಾರು 74 ಚಿತ್ರಗಳ ಪ್ರದರ್ಶನ ಏರ್ಪಡಿಸಲಾಗಿತ್ತು. ಪೆನ್ನಿನಲ್ಲಿ ರಚಿಸಿರುವ ಗಾಂಧಿ, ನೆಹರೂ, ಪಟೇಲ್, ಭಗತ್ ಸಿಂಗ್, ಕಿತ್ತೂರ ರಾಣಿ ಚೆನ್ನಮ್ಮ ಸೇರಿದಂತೆ ಅನೇಕ ಮಹನೀಯರ ಚಿತ್ರಗಳು ಪ್ರದರ್ಶಿಸಲಾಗಿದೆ. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪಾಲಿಕೆ ಉಪ ಆಯುಕ್ತ ಜಿ.ಎಸ್.ಸೋಮಶೇಖರ್ ವಹಿಸಿದ್ದರು. ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು, ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾ ಧ್ಯಕ್ಷ ಡಾ.ಹೆಳವರಹುಂಡಿ ಸಿದ್ದಪ್ಪ, ಕೆ.ರಘುರಾಂ ವಾಜಪೇಯಿ, ಎಂ.ಆರ್.ಚೌಧರಿ, ಎಸ್.ವಿ.ನಾಗೇಶ್, ಎನ್.ಮಾರ ಮತ್ತಿತರರಿದ್ದರು.

ಮೂರನೇ ಶ್ರಾವಣ ಶನಿವಾರದ ವಿಶೇಷ ಪೂಜೆ...


ಮೂರನೇ ಶ್ರಾವಣ ಶನಿವಾರ ಅಂಗವಾಗಿ ಮೈಸೂರಿನ 23ನೇ ವಾರ್ಡಿನಲ್ಲಿರುವ ಹಳೆ ಬಂಡಿಕೇರಿಯ ವೆಂಕಟರಮಣ ದೇವಸ್ಥಾನದಲ್ಲಿ ಶಾಸಕ ಕೆ.ಹರೀಶ್‌ಗೌಡ ವಿಶೇಷ ಪೂಜೆ ನೆರವೇರಿಸಿದರು. ಈ ವೇಳೆ ದೇವಸ್ಥಾನದ ಸದಸ್ಯರಾದ ರಾಮು, ಸುದರ್ಶನ್, ರಾಘವನ್, ವಿನುತ, ಸತೀಶ್, ಮುಡಾ ಮಾಜಿ ಸದಸ್ಯ ನವೀನ್‌ಕುಮಾರ್, ರವಿಕುಮಾರ್, ರವಿಚಂದ್ರ, ನವೀನ ಉಪಸ್ಥಿತರಿದ್ದರು.

ಅರ್ಜಿ ಆಹ್ವಾನ

ಮೈಸೂರು: ಮೈಸೂರು ಮಹಾನಗರ ಪಾಲಿಕೆ ವತಿಯಿಂದ 2025–26ನೇ ಸಾಲಿನ ಎಸ್‌ಎಫ್‌ಸಿ ಹಾಗೂ ಪಾಲಿಕೆ ಅನುದಾನ ದಡಿ ಶೇ.24.10ರ ಪರಿಶಿಷ್ಟ ಜಾತಿ/ಪಂಗಡ ಹಾಗೂ ಪೌರಕಾರ್ಮಿಕರ ಫಲಾನುಭವಿಗಳು, ಶೇ 7.25ರ ಇತರೆ ಹಿಂದುಳಿದ ಬಡಜನರಿಗೆ ಮತ್ತು ಶೇ5ರ ವಿಶೇಷಚೇತನರಿಗೆ ವಿವಿಧ ಯೋಜನೆಗಳ ಸೌಲಭ್ಯ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಪಾಲಿಕೆ ವಲಯ 9 ಕಚೇರಿಗಳಲ್ಲಿ ದೊರೆಯುವ ಅರ್ಜಿಗಳನ್ನು ಉಚಿತವಾಗಿ ಪಡೆದು ಸೌಲಭ್ಯಗಳಿನುಗುಣವಾಗಿ ಅಗತ್ಯ ದಾಖಲಾತಿಗಳನ್ನು ಸಲ್ಲಿಸಬೇಕಾಗಿದೆ. ಮಾಹಿತಿಗೆ ಪಾಲಿಕೆ ಎಲ್ಲಾ 9 ವಲಯ ಕಚೇರಿಗಳನ್ನು ಸಂಪರ್ಕಿಸಬಹುದಾಗಿದೆ.

ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಮಂಜೂರಾತಿಗಾಗಿ ಅರ್ಜಿ ಆಹ್ವಾನ

ಮೈಸೂರು: 2025–26ನೇ ಸಾಲಿಗೆ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಪರಿಶಿಷ್ಟ ಜಾತಿ ಹೊಸ ವಿದ್ಯಾರ್ಥಿಗಳಿಗೆ (ಇದುವರೆಗೂ SSP ತಂತ್ರಾಂಶದಲ್ಲಿ ನೋಂದಣಿಯಾಗದ ಹಾಗೂ ನೋಂದಣಿಯಾದರೂ ಕಾರಣಾಂತರದಿಂದ ವಿದ್ಯಾರ್ಥಿ ವೇತನ ಮಂಜೂರು ಆಗದೇ ಇರುವವರು) ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಮಂಜೂರಾತಿಗಾಗಿ ಅರ್ಜಿ ಆಹ್ವಾನಿಸಲಾಗಿದ್ದು, ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶ https://ssp.postmatric. karna taka.gov.in/homepage.aspx ಮೂಲಕ ಅರ್ಜಿ ಸಲ್ಲಿಸಬಹುದು. ಪೋಷಕರ ವಾರ್ಷಿಕ ಆದಾಯ ಮಿತಿ 1ರಿಂದ 8ನೇ ತರಗತಿ ವಿದ್ಯಾರ್ಥಿಗಳಿಗೆ 6 ಲಕ್ಷ ರೂ., 9 ಮತ್ತು 10ನೇ ತರಗತಿ ವಿದ್ಯಾರ್ಥಿಗಳಿಗೆ 2.5 ಲಕ್ಷ ರೂ. ಮಿತಿಯೊಳಗಿರಬೇಕು. ಅರ್ಜಿ ಸಲ್ಲಿಸಲು ಅವಶ್ಯವಿರುವ ದಾಖಲಾತಿಗಳಾದ ವಿದ್ಯಾರ್ಥಿಯ SATS ID, ವಿದ್ಯಾರ್ಥಿಯ ಆಧಾರ್, ವಿದ್ಯಾರ್ಥಿಯ RD ಸಂಖ್ಯೆ ಇರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರಗಳು, ಪೋಷಕರ ಮೊಬೈಲ್ ಸಂಖ್ಯೆ. ಪೋಷಕರು ಅನೈರ್ಮಲ್ಯ ವೃತ್ತಿಯಲ್ಲಿ ತೊಡಗಿದ್ದಲ್ಲಿ ಸಂಬಂಧಿಸಿದ ಗುರುತಿನ ಚೀಟಿಯನ್ನು (ಸಂಬಂಧಪಟ್ಟ ಗ್ರಾಮ ಪಂಚಾಯತಿ, ಪುರಸಭೆ, ನಗರಸಭೆ ಹಾಗೂ ಮಹಾನಗರಪಾಲಿಕೆಗಳಿಂದ) ಸಲ್ಲಿಸಬೇಕು. ಮಾಹಿತಿಗಾಗಿ ಸಹಾಯಕ ನಿರ್ದೇಶಕರು ಗ್ರೇಡ್–1ರವರ ಕಚೇರಿ, ಸಮಾಜ ಕಲ್ಯಾಣ ಇಲಾಖೆ, ಡಾ.ಬಾಬು ಜಗಜೀವನರಾಂ ಭವನ ಕಟ್ಟಡ, ನಾರಾಯಣಸ್ವಾಮಿ ಬ್ಲಾಕ್, ಆದಿಪಂಪ ರಸ್ತೆ, ಪಡುವಾರಹಳ್ಳಿ, ಮೈಸೂರು –12. ದೂ.ಸಂ.2520910 ಅನ್ನು ಸಂಪರ್ಕಿಸಬಹುದು.